Sri S. SIVAPPA (Sravanabelgola).—I move:

"That the discussion on the motion be continued till the end of this day."

Mr. SPEAKER.—The Hon. Member has not heard me, I do not know if I did not make myself clear. I said that we would spend the whole of today considering the motion and the Bill. The debate will go on till 4-45 P.M. and the Minister will take half an hour for reply, then there would be clarifications and so on, Leter we can take up the Bill. Has this the approval of the House?

HON'BLE MEMBER.—Yes.

Mr. SPEAKER.—Now, I would request the Members to be very brief, to speak to-the-point and be very emphatic.

Motion *re* scarcity conditions in the State

(Debate contd.)

ಶ್ರೀ ವಿ. ಮಸಿಯಪ್ಪ (ಹಿರಿಯೂರು) ಸ್ವಾಮಿ, ನಿನ್ನೆ ನಾನು ಈ ವಿಷಯದ ಮೇಲೆ ಮಾತನಾಡುತ್ತ ಒಂದೆರಡು ವಿಷಯಗಳನ್ನು ಪ್ರಸ್ತಾಪಮಾಡಿ ನನ್ನ ತಾಲ್ಲೂಕಿಗೆ ಎಂದರೆ ಹಿರಿಯೂರು ತಾಲ್ಲೂಕಿನ ಇವತ್ತಿನ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ಹೇಳುವುದಕ್ಕೆ ಬಂದಿದ್ದೆ. ಈ ದಿವಸ ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ಈ ತಾಲ್ಲೂಕಿನಲ್ಲಿ ಮಳೆ ಇಲ್ಲದೆ ಯಾವ ಯಾವ ಭಾಗದಲ್ಲಿ ಏನೇನಾಗುತ್ತಿದೆ ಎನ್ನುವುದನ್ನು ತಿಳಿಸಲು ಇಷ್ಟಪಡುತ್ತೇನೆ.

ನಮ್ಮ ತಾಲ್ಲೂಕಿನ ನಾಲ್ಕು ಹೋಬಳಿಗಳಲ್ಲಿ, ವಾಣಿವಿಲಾಸ ಅಚ್ಚುಕಟ್ಟಿಗೆ ಸೇರಿರತಕ್ಕ ಗ್ರಾಮಗಳನ್ನು ಬಿಟ್ಟರೆ, ಮಳೆ ಬಾರದೆ ಬಹಳ ತೊಂದರೆಯಾಗಿದೆ. ಬಹುತೇಕ ಭಾಗಗಳಲ್ಲಿ ಬೆಳೆಯೆಲ್ಲ ಒಣಗಿ ಯಾವ ಪ್ರತಿಫಲವು ಸಿಕ್ಕದೆ ಇರುವ ಪರಿಸ್ಥಿತಿ ಇದೆ. ಮೊನ್ನೆ ತಾನೆ ಮುಖ್ಯ ಮಂತ್ರಿಗಳು ಈ ಭಾಗದಲ್ಲಿ ಪ್ರವಾಸ ಮಾಡತಕ್ಕ ಸಂದರ್ಭದಲ್ಲಿ ಒಂದೆರಡು ಗ್ರಾಮಗಳಲ್ಲಿ ರೈತರು ನೇರವಾಗಿ ಅವರನ್ನು ಭೇಟಿ ಮಾಡಿ ಯಾವ ವಿಧವಾಗಿ ಕಷ್ಟ ಜೀವನವನ್ನು ನಡೆಸುತ್ತಿದ್ದಾರೆಂಬುದನ್ನು ಅರಿಕೆ ಮಾಡಿಕೊಂಡಿದ್ದಾರೆ. ಇಂಥ ಸ್ಥಿತಿ ಇರತಕ್ಕ ಸಂದರ್ಭದಲ್ಲಿ ಏನೋ ಆಶಾದಾಯಕವಾದ ರೀತಿಯಲ್ಲಿದೆ ಎನ್ನುವ ಹಾಗೆ ಮೊನ್ನೆ ಶುಕ್ರವಾರ ರಾತ್ರಿಯಿಂದ ಸ್ವಲ್ಪ ಮಟ್ಟಿಗೆ ಅಲ್ಲಲ್ಲಿ ಮಳೆ ಬೀಳುತ್ತಿದೆ. ಆದರೂ ನಮ್ಮ ತಾಲ್ಲೂಕಿನ $2\frac{1}{2}$ ಹೋಬಳಿ ಪ್ರದೇಶಕ್ಕೆ ಏನೂ ಅನುಕೂಲವಾಗುವುದಿಲ್ಲ. ಏಕೆಂದರೆ ಅಲ್ಲಿರತಕ್ಕ ಭೂಮಿ ಎಲ್ಲ ಕೆಂಪು ಭೂಮಿ : ಆ ಪ್ರದೇಶದಲ್ಲಿ ಮುಂಗಾರು ಮಳೆಯಲ್ಲಿ ಬೆಳೆಗಳನ್ನು ತೆಗೆಯಬಹುದೇ ಹೊರತು ಹಿಂಗಾರು ಮಳೆಗಳು ಬಿದ್ದಾಗ ಯಾವುದೇ ವಿಧವಾದ ಬೆಳೆಯನ್ನೂ ತೆಗೆಯಲಿಕ್ಕೆ ಅವಕಾಶವಾಗುವುದಿಲ್ಲ ಎನುವುದನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅದುದರಿಂದ ಈ ಪ್ರದೇಶದಲ್ಲಿ ಎಂದರೆ ಧರ್ಮಾಪುರ, ಜವನಗೊಂಡನಹಳ್ಳಿ, ಮತ್ತು ಐಮಂಗಲದ ಪೂರ್ವಾರ್ಧ ಭಾಗಕ್ಕೆ ಮಳೆ ಈಗ ಬಂದರೂ ಯಾವ ರೀತಿಯಲ್ಲಿಯೂ ಪ್ರಯೋಜನವಾಗುವುದಿಲ್ಲ. ಮುಂದಿನ ಮುಂಗಾರು ಮಳೆ ಬಂದು ಹೊಲಗಳನ್ನು ಉತ್ತು ಆ ಫಸಲು ಕೈಗೆ ಬರುವವರೆಗೂ ಅಭಾವ ಸ್ಥಿತಿ ತಪ್ಪಿದ್ದಲ್ಲ. ಐಮಂಗಲದ ಪಶ್ಚಿಮ ಭಾಗದಲ್ಲಿ ಎರೆ ಭೂಮಿ ಇದೆ. ಅಲ್ಲಿ ಮಾತ್ರ ಈಗ ಮಳೆ ಬಂದಿರುವುದರಿಂದ ಹಿಂಗಾರು ಫಸಲು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಅಲ್ಲಿಯ ವರೆಗೂ ಅವರಿಗೆ ಜೀವನಕ್ಕೆ ಅನುಕೂಲಮಾಡಿಕೊಡತಕ್ಕದ್ದು ಅಗತ್ಯವಿದೆ. ಅದಕ್ಕೋಸ್ಕರವಾಗಿ ನಾನು ಈ ಸಂದರ್ಭದಲ್ಲಿ ಕೆಲವು ಪರಿಹಾರ ಕಾರ್ಯಕ್ರಮಗಳನ್ನು ಸಲಹೆ ಮಾಡಲಿಕ್ಕೆ ಇಷ್ಟಪಡುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಕೆಲವು ನೀರಾವರಿ ಕಾರ್ಯಗಳ ಸರ್ವೆ ನಡೆದು, ಅಂದಾಜುಗಳು ತಯಾರಾಗಿ ಅದರಲ್ಲಿ ಕೆಲವು ಮಂಜೂರು ಸಹ ಆಗಿವೆ. ಒಂದೆರಡಕ್ಕೆ ಟೆಂಡರುಗಳನ್ನು ಕೂಡ ಕರೆದಿದ್ದಾರೆ. ಮೊನ್ನೆ ನೀರಾವರಿ ಖಾತೆಯ ಉಪಮಂತ್ರಿಗಳು ಒಂದರ ಅಸ್ತಿ ಭಾರಶಿಲೆಯನ್ನೂ ಹಾಕಿ ಬಂದಿದ್ದಾರೆ. ಗಾಂಧಿನಗರ, ಯಲ್ಲದಕರೆ, ಗೌಡೇನಹಳ್ಳಿ, ಬಿರೇನಹಳ್ಳಿ ಮುಂತಾದ ಕರೆಗಳ ಕೆಲಸವನ್ನು ತಕ್ಷಣ ತೆಗೆದುಕೊಂಡರೆ ಅಲ್ಲಿನ ಜನಗಳಿಗೆ ಉದ್ಯೋಗ ಸಿಕ್ಕುವ ಹಾಗೆ ಮಾಡಬಹುದೆಂದು ಈ ಸಂದರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ. ಹಳೆ ಚ್ಯಾಮವನಹಳ್ಳಿ ಬಳಿ ಒಂದು ಕೆರೆಯನ್ನು ಕಟ್ಟುವುದಕ್ಕೋಸ್ಕರವಾಗಿ ಸಣ್ಣ ನೀರವಾರಿ ಇಲಾಖೆ ಸರ್ವೆನಡೆಸಿ ಅದಕ್ಕೆ ಅಂದಾಜು ಕೂಡ

(ಶ್ರೀ ವಿ. ಮಸಿಯಪ್ಪ)

ತಯಾರಾಗಿದೆ. ಅದನ್ನು ಕೂಡಲೆ ಮಂಜೂರು ಮಾಡಿ ಆ ಕಾರ್ಯವನ್ನು ಕೈಕೊಂಡರೆ ಒಂದೂವರೆ, ಎರಡು ಸಾವಿರ ಎಕರೆ ಪ್ರದೇಶಕ್ಕೆ ನೀರಿನ ಅನುಕೂಲವಾಗಿ ಆ ಪ್ರದೇಶಕ್ಕೆ ಅನುಕೂಲವಾಗುತ್ತದೆ, ಜನಗಳಿಗೂ ತಾತ್ಕಾಲಿಕ ಉದ್ಯೋಗ ಸಿಕ್ಕುತ್ತದೆ.

ತವಂದಿ ಕೆರೆಗೆ ಫೀಡರ್ ನಾಲೆಯನ್ನು ಕಟ್ಟಲು ಸರ್ವೆ ನಡೆದು ಅಂದಾಜು ತಯಾರಾಗಿ, ಅದು ಮಂಜೂರಾಗಿ ಟೆಂಡರು ಕರೆದಿದ್ದಾರೆ. ಅದನ್ನು ಕೂಡಲೆ ತೆಗೆದುಕೊಳ್ಳತಕ್ಕ ಅನುಕೂಲವಿದ್ದರೆ ಅದನ್ನೂ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಧರ್ಮಾಪುರ ಕೆರೆಗೆ ಒಂದು ಸಾವಿರ ಎಕರೆ ಅಚ್ಚುಕಟ್ಟಿನ ಪ್ರದೇಶವಿದೆ ಮತ್ತು ಇನ್ನು 3-4 ಸಣ್ಣ ಕೆರೆಗಳು ಸಾಧಾರಣವಾಗಿ ಯಾವಾಗಲೂ ಕೂಡ ಮಳೆ ಇಲ್ಲದೆ ಬಹಳ ತೊಂದರೆಯಾಗುತ್ತಿದೆ. ಅವುಗಳಿಗೆ ನೀರನ್ನು ಒದಗಿಸಲು ಸುವರ್ಣಮುಖಿ ನದಿಗೆ ಹುಣಸೆಹಳ್ಳಿ ಬಳಿ ಒಂದು ಅಣೆಕಟ್ಟನ್ನು ಕಟ್ಟಿ ಫೀಡರ್ ಶಾಖೆ ತೆಗೆಯಲು ಅಂದಾಜುಗಳು ತಯಾರಾಗಿವೆ. ಅಣೆಯನ್ನು ಕಟ್ಟುವುದಕ್ಕೆ ಸ್ವಲ್ಪ ನಿಧಾನವಾಗಬಹುದು. ಆದರೆ ನಾಲೆ ಕೆಲಸವನ್ನು ತೆಗೆದುಕೊಂಡರೆ ಆ ಹೋಬಳಿಯಲ್ಲಿ ಬರತಕ್ಕ ಎಲ್ಲ ಗ್ರಾಮಗಳವರಿಗೂ ಉದ್ಯೋಗವನ್ನು ಕೊಡಬಹುದು ಮತ್ತು ಶಾಶ್ವತವಾಗಿರತಕ್ಕ ಪರಿಹಾರವನ್ನು ಕೊಟ್ಟಂತಾಗುತ್ತದೆಂದು ಈ ಸಂಧರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ.

ಸುವರ್ಣಮುಖಿ ನದಿಗೆ ಕರಿಯಾಲದ ಹತ್ತಿರ ಕಟ್ಟಿರತಕ್ಕ ಗಾಯತ್ರಿ ಜಲಾಶಯದಿಂದ ಎಡಭಾಗದ ನಾಲೆಯನ್ನು ತೆಗೆಯಬೇಕೆಂದು ತೂಬು ಕೂಡ ಇಟ್ಟಿದ್ದಾರೆ. ನಾಲೆಯನ್ನು ತೆಗೆಯುವುದಕ್ಕೆ ಅಂದಾಜು ಎಲ್ಲ ಆಗಿದೆ. ಈ ಕೆಲಸವನ್ನು ಪ್ರಾರಂಭ ಮಾಡಿದರೆ ಅನೇಕ ಹಳ್ಳಿಗಳಿಗೆ ಉಪಕಾರ ಮಾಡಿದಹಾಗಾಗುತ್ತದೆ. ಮೂರು ನಾಲ್ಕು ತಿಂಗಳಲ್ಲಿ ಈ ಕಾರ್ಯ ಪೂರೈಸಿ ನೀರಾವರಿ ವ್ಯವಸಾಯಕ್ಕೆ ತಕ್ಷಣ ಬರತಕ್ಕದ್ದಿದೆ. ಇದನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕು.

ನಾನಾಗಲೇ ಹೇಳಿದಹಾಗೆ ಎರಡೂವರೆ ಹೋಬಳಿ ಪ್ರದೇಶದಲ್ಲಿ ಮುಂಗಾರು ಮಳೆ ಇಲ್ಲದೆ ಏನೂ ಬೆಳೆಯಾಗದೆ ಇರುವುದರಿಂದ ಎಲ್ಲ ಖುಷ್ಕಿ ಜಮೀನಿನ ಕಂದಾಯ ಮತ್ತು ಸರ್‌ಛಾರ್ಜ್ ಪೂರ್ತಿಯಾಗಿ ಮಾಫಿ ಮಾಡಬೇಕೆಂದೂ, ಸಣ್ಣ ಕೆರೆಗಳಿರುವ ಕಡೆ ಇವತ್ತಿನವರೆಗೂ ಅವುಗಳಿಗೆ ನೀರು ಬಾರದೆ ಇರುವುದರಿಂದ ಆ ಕೆರೆಗಳ ಅಚ್ಚುಕಟ್ಟು ಪ್ರದೇಶದಲ್ಲಿ ಯಾವುದೇ ವಿಧವಾದ ಬೆಳೆಯನ್ನೂ ಇಡದೆ ಇರುವುದರಿಂದ, ಯಾವುದೇ ವರದಿಗಳಿಗೆ ಕಾಯದೆ—ಬೇಕಾದರೆ ಮಂತ್ರಿಗಳು ಆ ಭಾಗದಲ್ಲಿ ಪ್ರವಾಸವನ್ನು ಕೈಕೊಂಡು ಸ್ವಂತ ಅನುಭವವನ್ನು ಪಡೆದು—ಅದಷ್ಟು ಜಾಗ್ರತೆ ತರಿ ಜಮೀನಿಗೆ ಇರತಕ್ಕ ವಾಟರ್ ರೇಟ್ ಮಾಫಿ ಮಾಡಿ ಆರ್ಡರ್ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ.

ಅವಗ್ರಹದ ಪರಿಹಾರ ಕಾರ್ಯಗಳಲ್ಲಿ ಸಾಧಾರಣವಾಗಿ ತಾವು ತೆಗೆದುಕೊಳ್ಳುತ್ತಿದ್ದುದು ಗೋಕಟ್ಟೆ, ರಸ್ತೆ ಮತ್ತು ಇತರ ಕೆಲವು ಕೆಲಸಗಳು. ಆದರೆ ಈ ಸಾರಿ ಬರೀ ಗೋಕಟ್ಟೆಗಳನ್ನು ನೀರಾವರಿ ಬಾವಿಗಳನ್ನು ಮಾತ್ರ ಮಾಡಿಸಬೇಕಾಗಿದೆ, ರಸ್ತೆ ಕೆಲಸಗಳನ್ನು ತೆಗೆಯಕೊಳ್ಳಬೇಡಿ ಎಂದು ಸರ್ಕಾರದಿಂದ ನಿರ್ದೇಶನ ಹೋದಂತೆ ಕಾಣುತ್ತದೆ. ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಕಪ್ಪು ಭೂಮಿ ಅಥವಾ ಎರೆ ಭೂಮಿ ಇರತಕ್ಕ ಕಡೆ ಮಾಡಿದ ರಸ್ತೆ ಕಾಮಗಾರಿಗಳು ಬರೇ ಮಣ್ಣಿನ ಕೆಲಸದಿಂದ ಏನೂ ಅನುಕೂಲ ವಾಗುವುದಿಲ್ಲ. ಆದರೆ ಕೆಂಪು ಭೂಮಿ, ಕಲ್ಲಿರತಕ್ಕ ಗ್ರಾವೆಲಿ ಸಾಯಿಲ್ ಇರುವ ಕಡೆ ಮಣ್ಣಿನ ಕೆಲಸ ಮಾಡಿದರೂ ಕೂಡ ರಸ್ತೆಗಳು ಉಪಯೋಗವಾಗುತ್ತವೆನ್ನುವುದನ್ನು ನಾವು ಕಂಡಿದ್ದೇವೆ. ಇವತ್ತು ನಮ್ಮ ತಾಲ್ಲೂಕಿನಲ್ಲಿರುವ ಅನೇಕ ರಸ್ತೆಗಳೆಲ್ಲ ಕ್ಷಾಮ ಪರಿಹಾರ ಕಾರ್ಯಗಳಲ್ಲಿ ಆಗಿರುವಂಥ ರಸ್ತೆಗಳು. ಅಲ್ಲಿ ಗೋಕಟ್ಟೆಗಳನ್ನು ಮಾಡುವುದಕ್ಕೆ ಅವಕಾಶವಿಲ್ಲ, ಕೆರೆಕಟ್ಟೆಗಳನ್ನು ಕಟ್ಟುವುದಕ್ಕೆ ಅವಕಾಶವಿಲ್ಲ. ಎಲ್ಲಿ ಜನರಿಗೆ ಪರಿಹಾರ ಕೊಡಬೇಕಾದ ಅವಶ್ಯಕತೆ ಇದೆಯೋ ಅಂಥ ಕಡೆಗಳಲ್ಲಿ ಈ ನಿರ್ಬಂಧವನ್ನು ಸಡಿಲಗೊಳಿಸಿ ರಸ್ತೆಗಳನ್ನು ತೆಗೆದುಕೊಳ್ಳತಕ್ಕ ರೀತಿಯಲ್ಲಿ ಮಾರ್ಪಾಡು ಮಾಡಿ ಆರ್ಡರು ಕೊಡತಕ್ಕದ್ದು ಅಗತ್ಯವೆಂದು ಸರ್ಕಾರಕ್ಕೆ ಈ ಸಂದರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ.

ನೀರಾವರಿ ಬಾವಿಗಳಿಗೆ ಹಣ ಕೊಡುತ್ತಾರೆ. ಅದರಿಂದ ಸಾಕಷ್ಟು ಉದ್ಯೋಗ ಸಿಕ್ಕುತ್ತದೆ ಮತ್ತು ಶಾಶ್ವತ ಪರಿಹಾರವಾಗುತ್ತದೆ ಎನ್ನುವುದರಲ್ಲಿ ಎರಡು ಅಭಿಪ್ರಾಯಗಳಿಲ್ಲ. ಈಗ ಸರ್ಕಾರ ಸಡಿಲಗೊಳಿಸಿರತಕ್ಕ ನಿಬಂಧನೆಗಳ ಪ್ರಕಾರ ಮೊದಲು ಕೊಡುತ್ತ ಇದ್ದುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಈ ಸಾರಿ ಬಾವಿಗಳಿಗೆ ಹಣವನ್ನು ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಸರ್ಕಾರವನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ರೈತರೂ ಸಹ ಈ ವಿಚಾರದಲ್ಲಿ ಸರ್ಕಾರಕ್ಕೆ ಕೃತಜ್ಞರಾಗಿದ್ದಾರೆ. ಆದರೆ ಸಮಸ್ಯೆ ಮಾತ್ರ ಇನ್ನೂ ಬಗೆಹರಿದಿಲ್ಲ. ಇದಕ್ಕೆ ಕಾರಣ ಹೆಚ್ಚಿನ ಹಣ ಒದಗಿಸದೆ ಇರುವುದು ಮತ್ತು ನಿಬಂಧನೆಗಳನ್ನು ಇನ್ನೂ ಸಡಿಲಗೊಳಿಸದೆ ಇರುವುದು. ನಿಬಂಧನೆಗಳನ್ನು ಇನ್ನೂ ಸ್ವಲ್ಪ

ಸಡಿಲಗೊಳಿಸಿದರೆ 10-15 ಎಕರೆ ಇರತಕ್ಕ ರೈತರೂ ಬಾವಿಯನ್ನು ತೆಗೆಸುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಸಡಿಲಗೊಳಿಸಬೇಕಾದ್ದು ಅಗತ್ಯವೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಪಡುತ್ತೇನೆ. ಈಗಾಗಲೇ ಹೆಚ್ಚಿನ ಅನುಕೂಲವಿರತಕ್ಕವರು, ಧನಿಕರು ತೆಗೆದು ಕೊಂಡಿರುತ್ತಾರೆ. ಅನುಕೂಲ ಸ್ಥಿತಿಯಲ್ಲಿಲ್ಲದೆ ಇರುವವರಿಗೆ ಅನುಕೂಲವಾಗುವ ರೀತಿಯಲ್ಲಿ ನಿಯಮಗಳನ್ನು ಸ್ವಲ್ಪ ಸಡಿಲ ಗೊಳಿಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಹೋದ ವರ್ಷ ಕೊಡದೆ ಉಳಿದಿರುವವರಿಗೆ ಮತ್ತು ಹೊಸದಾಗಿ ಬಾವಿಗಳನ್ನು ತೆಗೆಯಲು ಅರ್ಜಿಗಳನ್ನು ಕೊಟ್ಟಿರುವವರಿಗೆ ಹಂಚಲು ಸಾಕಷ್ಟು ಹಣವನ್ನು ಒದಗಿಸಿಲ್ಲ. ನನ್ನ ತಾಲ್ಲೂಕಿನ ವಿಚಾರ ಹೇಳಬೇಕು ಎಂದರೆ ಸರ್ಕಾರ ಅರ್ಜಿ ಕೂಡ ಬೇಕು ಎಂದು ಹೇಳದೆ ಈಗಾಗಲೇ 300-400 ಅರ್ಜಿಗಳು ಬಂದಿವೆ. ಇನ್ನೂ 400-500 ಅರ್ಜಿಗಳು ಬರತಕ್ಕದ್ದು ಇದೆ. ಹೀಗಿರತಕ್ಕ ಪರಿಸ್ಥಿತಿಯಲ್ಲಿ ಜಾಗ್ರತೆ ಬೇಕಾದಷ್ಟು ಹಣವನ್ನು ಈ ವರ್ಷ ಒದಗಿಸಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತಿದ್ದೇನೆ.

ಕೆಲವಾರು ಕೇಸುಗಳಲ್ಲಿ ಜನರಿಗೆ ತೊಂದರೆಯಾಗಿದೆ. ಯಾವ ದುರದೃಷ್ಟದಿಂದಲೋ ಏನೋ ಅವರು ತೆಗೆದಿರುವ ಬಾವಿಗಳಲ್ಲಿ ಬಂಡೆ ಸಿಕ್ಕಿ ಸರ್ಕಾರದವರು ಕೊಟ್ಟಿರತಕ್ಕ 3000 ರೂಪಾಯಿಗಳ ಜೊತೆಗೆ ಅವರ ಕೈಯಲ್ಲಿದ್ದ ಅಲ್ಪ ಸ್ವಲ್ಪ ದುಡ್ಡನ್ನೂ ಖರ್ಚು ಮಾಡಿದರೂ ಉಪಯೋಗವಾಗಿಲ್ಲ. ಇಂಥವರಿಗೆ ತಕಾವಿ ಸಾಲದ ರೂಪದಲ್ಲಾದರೂ ಒಂದೆರಡು ಸಾವಿರ ರೂಪಾಯಿಗಳನ್ನು ಹೆಚ್ಚಾಗಿ ಕೊಟ್ಟು ಬಾವಿಗಳನ್ನು ಪೂರ್ತಿಗೊಳಿಸತಕ್ಕ ರೀತಿಯಲ್ಲಿ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ನೀರಾವರಿ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಸಂದರ್ಭದಲ್ಲಿಯೂ ಕೂಡ ಅಭಿನಂದನೀಯವಾದ ಕೆಲಸಗಳನ್ನು ಮಾಡಿದ್ದಾರೆ. ನಿಬಂಧನೆಗಳನ್ನು ಸಡಿಲಿಸಿ ಆಧಾರ, ಎನಕಂಬರೆನ್ಸ್ ತಪ್ಪಿಸಿ ಪಂಪು ಸೆಟ್ಟುಗಳನ್ನು ಸುಲಭ ರೀತಿಯಲ್ಲಿ ಕೊಡತಕ್ಕ ಪದ್ಧತಿಯನ್ನು ಮಾಡಿದ್ದಾರೆ. ಸಂತೋಷ. ಇನ್ನೂ ಹೆಚ್ಚಿನ ಅಗತ್ಯ ಇರುವುದರಿಂದ ಹೆಚ್ಚಿನ ಪಂಪು ಸೆಟ್ಟು ಗಳನ್ನು ಕೊಡತಕ್ಕದ್ದು ಮುಖ್ಯ. ಮೂರು ತಿಂಗಳಾದರೂ ಸರ್ವಿಸ್ ಕೊಡದೆ ಇರತಕ್ಕ ಸಂದರ್ಭಗಳು ಬಹಳ ಇವೆ. ಅವುಗಳಿಗೆಲ್ಲ ವಿದ್ಯುಚ್ಛಕ್ತಿಯನ್ನು ಒದಗಿಸಿ ಜಾಗ್ರತೆ ಸರ್ವಿಸ್ ಕೊಡತಕ್ಕ ರೀತಿಯಲ್ಲಿ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ಹಿರಿಯೂರು ತಾಲ್ಲೂಕಿನ ವಿದ್ಯುತ್‌ಶಕ್ತಿ ಪೂರೈಕೆಬಗ್ಗೆ ಹೇಳುವುದಾದರೆ ವಿದ್ಯುತ್‌ಶಕ್ತಿ ಉಪಯೋಗಿಸುವವರು ಹೆಚ್ಚಾಗಿದ್ದರೂಕೂಡ ಸರಿಯಾಗಿ ಪೂರೈಕೆ ಮಾಡುತ್ತಿಲ್ಲ. ಇಂಥ ಪರಿಸ್ಥಿತಿ ಯಲ್ಲಿ ಬೆಳೆ ಸರಿಯಾಗಿ ಸಿಗದಂತಾಗಿದೆ. ತೆಗೆದುಕೊಂಡಿರುವ ಪಂಪ್ ಸೆಟ್ಟುಗಳು ಉಪಯೋಗಕ್ಕೆ ಬರುತ್ತಾ ಇಲ್ಲ. ಆದುದರಿಂದ ಒಂದು ಫೀಡರ್ ಲೈನ್ ಬೇರೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಸರಿಯಾಗಿ ವಿದ್ಯುತ್‌ಶಕ್ತಿ ಪೂರೈಕೆಯಾಗುವ ಹಾಗೆ ಮಾಡಬೇಕೆಂದು ತಿಳಿಸಲು ಬಯಸುತ್ತೇನೆ.

ಇನ್ನು ಒಂದು ಮುಖ್ಯವಾದ ಅಂಶವನ್ನು ಈ ಸಂದರ್ಭದಲ್ಲಿ ಮಾನ್ಯ ಸರಕಾರದ ಗಮನಕ್ಕೆ ತಮ್ಮ ಮೂಲಕ ತರಲು ಇಚ್ಛೆ ಪಡುತ್ತೇನೆ. ದೇಶದಲ್ಲಿ ಆಹಾರ ಧಾನ್ಯಗಳ ಬೆಳವಣಿಗೆ ಹೆಚ್ಚಾಗ ಬೇಕು ಅಂದರೆ ಅಭಾವ ಪರಿಸ್ಥಿತಿ ಹೋಗಲಾಡಿಸಲು ಸಾಧ್ಯವಾಗುತ್ತದೆ. ಇದನ್ನು ಕೇಂದ್ರ ಸರ್ಕಾರ ಪ್ಲಾನಿಂಗ್ ಕಮಿಷನ್‌ಸಹ ಒಪ್ಪಿಕೊಂಡಿವೆ. ಇದರಲ್ಲಿ ಧಾರಣೆವಾಸಿ ಮುಖ್ಯ ಅಂಶ ಎಂದು ಹೇಳಬೇಕಾಗುತ್ತದೆ. ಇದನ್ನು ಶ್ರೀಮಾನ್ ಹುಚ್ಚಮಾಸ್ತಿಗೌಡರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಒಂದು ಮುಖ್ಯವಾದ ಶಾಸ್ತ್ರೀಯವಾದ ಅಂಶವನ್ನು ತಮ್ಮೆಲ್ಲರ ಗಮನಕ್ಕೆ ತರುತ್ತೇನೆ. ಧಾರಣೆವಾಸಿ ಮೇಲೆ ಒಂದು ನಿಯಂತ್ರಣವಿರಬೇಕು. ಇದರಬಗ್ಗೆ ಒಂದು ನಿದರ್ಶನ ಕೊಡುತ್ತೇನೆ. ಅಮೇರಿಕಾ ದೇಶದಲ್ಲಿ ಈ ಬಗ್ಗೆ ಒಂದು ವ್ಯವಸ್ಥೆ ಇದೆ. ಅಲ್ಲಿ ಪೇನ್, ಫಾರಂ ಬ್ಯೂರೋ ಫೆಡರೇಶನ್, ನ್ಯಾಷನಲ್ ಫಾರ್ಮರ್ಸ್ ಫೆಡರೇಶನ್ ಎಂದು ಮಾಡಿಕೊಂಡಿದ್ದಾರೆ. ದೊಡ್ಡದೊಡ್ಡ ಹಿಡುವಳಿದಾರರು ಅಂದರೆ ಎರಡು ಸಾವಿರ ಎಕರೆ ಜಮೀನು ಇರುವವರು ಒಂದು ಫೆಡರೇಶನ್ನಿನಲ್ಲಿ ಇದ್ದಾರೆ. ಇನ್ನೊಂದರಲ್ಲಿ ಸಣ್ಣ ಹಿಡುವಳಿದಾರರು ಸದಸ್ಯರಾಗಿದ್ದಾರೆ. ಆಹಾರ ಧಾನ್ಯ ವಿಷಯದಲ್ಲಿ ಸಂಪೂರ್ಣವಾಗಿ ಮಿನಿಮಂ ಪ್ರೈಸ್ ಗ್ಯಾರಂಟೀ ಕೊಟ್ಟಿದ್ದಾರೆ. ಅದರಿಂದ ಉತ್ಪಾದನೆ ಯಥೇಚ್ಛವಾಗಿ ಬೆಳೆಸಿದ್ದಾರೆ. ಹಿಂದಕ್ಕೆ ಶೇಕಡ 25ರಷ್ಟು ರೈತರು ಇದ್ದರೆ ಇಂದು ಶೇಕಡ 13ರಷ್ಟು ಜನ ರೈತರು ಅಲ್ಲಿ ಇದ್ದಾರೆ. ಇಷ್ಟು ಕಡಿಮೆ ವ್ಯವಸಾಯ ಮಾಡುವವರು ಇದ್ದರೂ ಕೂಡ ತಮಗೆ ಸಾಕಾಗುವಷ್ಟು ಧಾನ್ಯ ಉತ್ಪಾದನೆ ಮಾಡುವುದಲ್ಲದೆ ಹೊರಗಡೆಕೂಡ ಆಹಾರ ಧಾನ್ಯ ಕಳಿಸಿಕೊಡುತ್ತಿದ್ದಾರೆ. ಅಂಥ ಒಂದು ಶಕ್ತಿ ಅವರು ವ್ಯವಸಾಯದಲ್ಲಿ ಸಂಪಾದನೆ ಮಾಡಿದ್ದಾರೆ. ಇದಕ್ಕೆ ಕಾರಣವೇನೆಂದರೆ ಆಹಾರ ಧಾನ್ಯಗಳ ಧಾರಣೆವಾಸಿ ಬಗ್ಗೆ ಒಂದು ಗ್ಯಾರಂಟೀ ಇದೆ. ಈ ಧಾರಣೆವಾಸಿ ಗ್ಯಾರಂಟಿ ರದ್ದು ಮಾಡಬೇಕೆಂದು ದೊಡ್ಡ ಹಿಡುವಳಿದಾರ ರಿಗೂ ಸಣ್ಣ ಹಿಡುವಳಿದಾರರಿಗೂ ಒಂದು ಸಲ ವಾದ ಎದ್ದಿತು. ದೊಡ್ಡ ಹಿಡುವಳಿದಾರರು ಹೇಳುವುದೇನೆಂದರೆ ಪ್ರೈಸ್ ಗ್ಯಾರಂಟಿ ರದ್ದಾದರೂಕೂಡ ಕಡಿಮೆ ಬೆಲೆಗೆ ಧಾನ್ಯ ಮಾರುವುದಾದರೆ

(ಶ್ರೀ ವಿ. ಮಾಸಿಯಪ್ಪ)

ಅದರಿಂದಲೂ ಸಹ ಹಾನಿಯಾಗುವುದಿಲ್ಲ. ಯಾಕೆಂದರೆ ದೊಡ್ಡ ಪ್ರಮಾಣದಲ್ಲಿ ವ್ಯವಸಾಯ ಮಾಡುವುದರಿಂದ ಇಕ್ವಿಪ್‌ಮೆಂಟು ಎಸ್ಟಾಬ್ಲಿಶ್‌ಮೆಂಟ್ ಖರ್ಚು ಕಡಿಮೆ ಬರುತ್ತದೆ. ಆದರೆ ಸಣ್ಣ ಹಿಡುವಳಿದಾರರು ಪ್ರೈಸ್ ಗಾರಂಟೀ ಮುಂದುವರಿಸಿಕೊಂಡು ಹೋಗಬೇಕೆಂದು ಹೇಳಿದರು. ಯಾಕೆಂದರೆ ಪ್ರೈಸ್ ಗ್ಯಾರಂಟೀ ಇಲ್ಲವಿದ್ದರೆ ಅವರಿಗೆ ಹಾನಿಯಾಗುತ್ತದೆ. ಈ ರೀತಿ ಒಂದು ಪ್ರೈಸ್ ಗ್ಯಾರಂಟಿ ಇರುವುದರಿಂದ ಯಥೇಚ್ಛವಾಗಿ ಉತ್ಪಾದನೆ ಮಾಡಿ ಸಾಕಷ್ಟು ವರಮಾನ ಪಡೆಯುತ್ತಿದ್ದಾರೆ. ಅಲ್ಲದೆ ಸ್ಟಾಂಡರ್ಡ್ ಆಫ್ ಲೈಫ್ ಮೆಂಟೇನ ಮಾಡಿಕೊಂಡಿದ್ದಾರೆ. ಸಣ್ಣ ಹಿಡುವಳಿದಾರರು ಪ್ರೈಸ್ ಗ್ಯಾರಂಟೀ ರದ್ದು ಮಾಡಬಾರದು ಎಂದು ಹೇಳುವುದಕ್ಕೆ ಕಾರಣವೇನೆಂದರೆ, ಉತ್ಪಾದನೆ ಖರ್ಚು ಅವರಿಗೆ ಜಾಸ್ತಿ ಬರುತ್ತದೆ, ಜೀವನ ನಿರ್ವಹಿಸುವುದು ಕಷ್ಟವಾಗುತ್ತದೆ. ನಮ್ಮ ದೇಶದಲ್ಲಿರತಕ್ಕಂಥ ದೊಡ್ಡ ಹಿಡುವಳಿದಾರರಿಗೂ ಅಮೇರಿಕಾ ದೇಶದಲ್ಲಿಯ ಸ್ಮಾಲ್ ಹೋಲ್ಡರ್ಸ್‌ಗಳಿಗೂ ಹೋಲಿಸಬಹುದು. ನಮ್ಮಲ್ಲಿ ಸಣ್ಣ ಮತ್ತು ದೊಡ್ಡ ಹಿಡುವಳಿದಾರರ ಪರಿಸ್ಥಿತಿ ಸಮವಾಗಿಯೇ ಇದೆ. ಪ್ರೈಸ್ ಗ್ಯಾರಂಟೀ ಇರಬೇಕಾದುದು ಅತ್ಯಗತ್ಯವಾಗಿದೆ. ಈ ಸಂದರ್ಭದಲ್ಲ ಒಂದು ವಿಷಯ ತಿಳಿಸಬೇಕಾಗಿದೆ. ಧ್ವಜ ಮೆರವಣಿಗೆ ಇಲ್ಲದೇ ಇರತಕ್ಕ ಒಂದು ಸಣ್ಣ ಚಳುವಳಿ ರೈತರಲ್ಲಿ ಸುರು ಆಗಿದೆ. ಅದೇನೆಂದರೆ ಜೋಳ ಗೋದಿ ಮುಂತಾದ ಆಹಾರ ಧಾನ್ಯ ಬೆಳೆಯುವುದನ್ನು ಬಿಟ್ಟು ಇಂದು ಕ್ಯಾಷ್ ಕ್ರಾಪ್ಸ್ ಅಂದರೆ ನೀರುಳ್ಳಿ, ಆಲೂಗಡ್ಡೆ ಮುಂತಾದವುಗಳನ್ನು ಬೆಳೆಯುತ್ತಿದ್ದಾನೆ. ಇವುಗಳಿಂದ ಅವನಿಗೆ ಹೆಚ್ಚು ಲಾಭ ಬರುತ್ತದೆಂದು ರೈತನಿಗೆ ಗೊತ್ತಾಗಿದೆ. ಆಹಾರ ಧಾನ್ಯ ಬೆಳೆಯದೆ ಹೆಚ್ಚು ಹಣ ಕೊಡತಕ್ಕಂಥ ಕ್ಯಾಷ್ ಕ್ರಾಪ್ಸ್ ಬೆಳೆಯಬೇಕೆಂಬ ಮನೋಭಾವ ಸುರು ಆಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಹತ್ತಿ ಜೋಳ ಬೆಳೆಯುತ್ತಿದ್ದರು. ಆದರೆ ಇತ್ತೀಚೆಗೆ ಸಾವಿರಾರು ಎಕರೆ ಭೂಮಿಯಲ್ಲಿ ನೀರುಳ್ಳಿ ಬೆಳೆಯುತ್ತಿರುವುದು ಎಲ್ಲ ನೋಡಿದಲ್ಲಿ ಕಾಣುತ್ತದೆ. ಇದಕ್ಕೆ ಕಾರಣವೇನೆಂದರೆ ಬೇರೆ ಆಹಾರ ಧಾನ್ಯಕ್ಕಿಂತಲೂ ಇವುಗಳಿಂದ ಧಾರಣೆವಾಸಿ ಹೆಚ್ಚು ಸಿಕ್ಕು ಆದಾಯ ಜಾಸ್ತಿಯಾಗುತ್ತದೆ. ಈ ಪರಿವರ್ತನೆ ಆಗುತ್ತಿದೆ. ಮುಂದೆ ಒಂದು ಪರಿಸ್ಥಿತಿ ಬರಬಹುದು ಅದೇನೆಂದರೆ ಆಹಾರ ಬೆಳೆಯಲು ಪ್ರಚಾರ ಮಾಡಬೇಕಾಗಬಹುದು. ಆದುದರಿಂದ ಮೊದಲನಿಂದಲೇ ಎಚ್ಚರಿಕೆ ವಹಿಸಿ, ಆಹಾರ ಧಾನ್ಯಕ್ಕೆ ಒಂದು ಕನಿಷ್ಠ ಬೆಲೆಯ ಗ್ಯಾರಂಟಿ ಕೊಡಬೇಕು. ಈ ವಿಚಾರದಲ್ಲಿ ಕೇಂದ್ರ ಸರಕಾರದ ನೀತಿಯಲ್ಲಿಯೂಕೂಡ ಪರಿವರ್ತನೆಯಾಗಿರುವುದನ್ನು ಕಾಣುತ್ತಿದ್ದೇವೆ. ಆಹಾರ ಧಾನ್ಯಕ್ಕೆ ಒಂದು ಕನಿಷ್ಠ ಧಾರಣೆ ಗೊತ್ತುಮಾಡಿದರೆ ಪ್ಲಾನ್ ಪ್ರೋಗ್ರಾಂ ತಲೆಕೆಳಗಾಗುತ್ತದೆಂದು ಹಿಂದಕ್ಕೆ ಹೇಳುತ್ತಿದ್ದರು. ಆದರೆ ಗ್ಯಾರಂಟೀ ಕೊಡಬೇಕಾಗುತ್ತದೆ ಎಂದು ಇಂದು ಅವರು ಮನಗಂಡಿದ್ದಾರೆ.

Mr. SPEAKER.—How much time does the Hon'ble member require ?

Sri V. MASIYAPPA.—I want another three or five minutes, Sir.

Mr. SPEAKER.—I have got a list of 31 Members who want to participate in the Debate. I am thinking whether to fix a time-limit or to allow the debate to go on without any such time-limit. I have no objection to allow the Debate if the House so desires. I will be the last person to impose my decision. Is it the sense of the House that I should fix up a time-limit ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಟೈಂ ಲಿಮಿಟ್ ಹಾಕುವುದು ಬೇಡ, ಸ್ವಾಮಿ ?

Mr. SPEAKER.—Even if time-limit is fixed, how will we find time? Time-limit may be necessary. We will see.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಟೈಂ ಲಿಮಿಟ್ ಹಾಕುವುದು ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ.

ಶ್ರೀ ವಿ. ಮಸಿಯಪ್ಪ.—ನಾನು ಈಗ ಕೇಂದ್ರ ಸರ್ಕಾರದಲ್ಲೂಕೂಡ ಬದಲಾವಣೆಯ ಮನೋಭಾವ ಕಾಣುತ್ತಾ ಇದೆ ಎಂದು ಹೇಳುತ್ತಾ ಇದ್ದೆ. ಒಂದಾನೊಂದು ಕಾಲದಲ್ಲಿ ಆಹಾರ ಧಾನ್ಯಗಳಿಗೆ ಗ್ಯಾರಂಟಿ ಕೊಡುತ್ತಾ ಇರುವುದನ್ನು ಒಪ್ಪಿಕೊಳ್ಳುವುದಕ್ಕೆ ಯಾವತ್ತೂ ಸಿದ್ಧವಾಗಿಲ್ಲದೇ ಇರತಕ್ಕ ಮಂತ್ರಿಮಂಡಲವಾಗಲೀ ಪ್ಲಾನಿಂಗ್ ಕಮಿಷನ್‌ಆಗಲೀ ಇವತ್ತು ಪುನರ್ವಿಮರ್ಶೆಮಾಡಿ ಕನಿಷ್ಠ ಬೆಲೆ ಕೊಡದಿದ್ದರೆ ಸಾಧ್ಯವಿಲ್ಲ ಎಂದು ಹೇಳತಕ್ಕ ಮನೋಭಾವ ಬೆಳೆಯುತ್ತಾ ಇದೆ. ಆದ್ದರಿಂದ ನಾನು ಅರಿಕೆ ಮಾಡಿಕೊಳ್ಳುವುದು ಇಷ್ಟೇ. ಕಬ್ಬಿಣ ಕಾದಾಗ ಬಡಿಯಬೇಕು ಅನ್ನುವ ಹಾಗೆ

ಮಾನಸಿಕ ಪರಿವರ್ತನೆಯಾಗಿರುವಾಗ ತಮ್ಮ ಪ್ರಭಾವವನ್ನು ಒತ್ತಾಯವನ್ನು ಹೆಚ್ಚುಹೆಚ್ಚಾಗಿ ಕೇಂದ್ರ ಸರ್ಕಾರದ ಮತ್ತು ಪ್ಲಾನಿಂಗ್ ಕಮಿಷನ್ ಅವರ ಮುಂದೆ ತಂದು ಆದಷ್ಟು ಜಾಗ್ರತೆ ಒಂದು ಕನಿಷ್ಟ ದರದ ಭರವಸೆ ರೈತರಿಗೆ ಸಿಕ್ಕುವ ಏರ್ಪಾಡು ಮಾಡಬೇಕೆಂದು ಸರ್ಕಾರದ ಮುಂದೆ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಒಂದು ಮಾತು ಹಿರಿಯೂರು ತಾಲ್ಲೂಕಿನಲ್ಲಿ ವಾಣೀವಿಲಾಸ ಸಾಗರ ಎಂಬ ಒಂದು ದೊಡ್ಡ ಕೆರೆ ಇದೆ ಸುಮಾರು 24 ಸಾವಿರ ಎಕರೆ ಸಾಗು ಆಗುತ್ತಾ ಇದೆ. ಅದು ಇಲ್ಲದೇ ಇದ್ದಿದ್ದರೆ ಕ್ಷಾಮ ಪರಿಸ್ಥಿತಿ ಎಂದರೆ ಏನು ಎಂಬುದು ನಮಗೆ ಚೆನ್ನಾಗಿ ಅರ್ಥವಾಗುತ್ತಿತ್ತು. ಹಿಂದೆ 1898ರಲ್ಲಿ ಹಿರಿಯೂರು ತಾಲ್ಲೂಕು ಕೇವಲ ಕ್ಷಾಮ ಪ್ರದೇಶ ಎಂದು ಆಗಿನ ಸರ್ಕಾರ ಮತ್ತು ಆಗಿನ ರಾಜ ಮನೆತನದವರು ಆ ಕೆರೆಯನ್ನು ಕಟ್ಟಿಸಿದರು ಅದರಿಂದ 40 ಹಳ್ಳಿಗಳಲ್ಲಿ ಕ್ಷಾಮ ಎಂದರೆ ಏನು ಎಂಬುದು ಅರ್ಥವಾಗುವುದಿಲ್ಲ ಎನ್ನುವ ರೀತಿಯಲ್ಲಿ ಇವೆ. ಆದರೆ ಇದೇ ಒಂದು ಸನ್ನಿವೇಶದಲ್ಲಿ ಸರಕಾರದವರು ಮೈನರ್ ಕೆರೆಗಳನ್ನು ಸಣ್ಣ ನೀರಾವರಿ ಯೋಜನೆಗಳನ್ನು ಕೈಕೊಳ್ಳುವಾಗ 3 ಪರ್ಸೆಂಟ್, 4 ಪರ್ಸೆಂಟ್, 2 ಪರ್ಸೆಂಟ್ ರಿಟರ್ನ್ ಬರಬೇಕೆಂಬ ನಿಯಮವನ್ನು ಆಗಿನ ಕಾಲಕ್ಕೆ ವಾಣಿ ವಿಲಾಸ ಸಾಗರಕ್ಕೆ ಹಾಕಿದ್ದರೆ ಬಹುಶಃ ಇಲ್ಲಿ ಬಂದು ನಿಂತುಕೊಂಡು ನಾವು ಈ ರೀತಿ ಮಾತನಾಡುವುದಕ್ಕೆ ಆಗುತ್ತಾ ಇರಲಿಲ್ಲ. ಆದ್ದರಿಂದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಹೇಳಿದಹಾಗೆ ಆ ನಿಬಂಧನೆಯನ್ನು ತೆಗೆದುಹಾಕಿ ಒಂದು ಮಾಸ್ಟರ್‌ಪ್ಲಾನ್ ತಯಾರುಮಾಡಿ ಸಣ್ಣನೀರಾವರೀ ಯೋಜನೆಗಳನ್ನು ಮತ್ತು ಮೈನರ್ ಕೆರೆ ರಿಪೇರಿ ಕೆಲಸವನ್ನು ತೆಗೆದುಕೊಳ್ಳಬೇಕು.

ಹೀಗೆಯೇ ವಾಣೀವಿಲಾಸ ಸಾಗರಕ್ಕೆ ಹಾಸನ ಡಿಸ್ಟ್ರಿಕ್ಟಿನ ಯಗಚಿ ನದಿಯ ನೀರನ್ನು ತಿರುಗಿಸಿ ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು ತಾಲ್ಲೂಕುಗಳಿಗೆ ಅನುಕೂಲವಾಗತಕ್ಕ ಒಂದು ದೊಡ್ಡ ಯೋಜನೆಯನ್ನು ರೂಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದು ಹೆಚ್ಚಿನ ನಷ್ಟದಾಯಕವೂ ಅಲ್ಲ, ಲಾಭದಾಯಕವೂ ಅಲ್ಲ; ಎಂದು ಕೇಳಿದ್ದೇನೆ ಅದನ್ನು ಪೂರ್ಣವಾಗಿ ಪರಿಶೀಲನೆಮಾಡಿ ಆದಷ್ಟು ಜಾಗ್ರತೆ ಅದು ಕಾರ್ಯರೂಪಕ್ಕೆ ಬರುವಹಾಗೆ ಮಾಡಿ ಅಲ್ಲಿ ವ್ಯವಸಾಯದ ಕೆಲಸ ಚೆನ್ನಾಗಿ ಮುಂದುವರಿಯುವಹಾಗೆ ಮತ್ತು ವಿದ್ಯುಚ್ಛಕ್ತಿಕೂಡ ಉತ್ಪಾದನೆ ಮಾಡಲಿಕ್ಕೆ ಸಾಧ್ಯವಿದೆ ಎಂದು ಕೇಳುತ್ತೇನೆ ಅದನ್ನೂಕೂಡ ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರಬೇಕೆಂದು ಹೇಳಿ ಈ ಒಂದು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I will now call upon Sri Andaniah to speak. Meanwhile, whips of the parties may meet and try to have some sort of understanding so that I may sift it, and with regard to the time limit also. The Hon'ble members may kindly discuss it among themselves and come to some arrangement.

† ಶ್ರೀ ಅಂದಾನಯ್ಯ (ಕುಣಿಗಲ್).—ಮಾನ್ಯ ಸಭಾಪತಿಗಳೇ, ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಸಭೆಯ ಮುಂದೆ ಮಂಡಿಸಿರತಕ್ಕ ಈ ನಿರ್ಣಯವನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಒಂದೆರಡು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ನಮ್ಮ ದೇಶದಲ್ಲಿ ವ್ಯವಸಾಯವನ್ನು ಅವಲಂಬಿಸಿರ ತಕ್ಕ ಜನರು ನೂರಕ್ಕೆ ಎಂಭತ್ತು ಜನ ಇದ್ದಾರೆ. ಪದೇ ಪದೇ ಈ ಒಂದು ಕ್ಷಾಮ ಪರಿಸ್ಥಿತಿ, ಅಭಾವ ಪರಿಸ್ಥಿತಿ ನಮ್ಮ ದೇಶದಲ್ಲಿ ತಲೆ ಹಾಕುತ್ತಾ ಇರುವುದನ್ನು ನೋಡಿದರೆ ನಿಜವಾಗಿಯೂ ಆಶ್ಚರ್ಯವಾಗುತ್ತದೆ. ಇದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ನಮ್ಮ ದೇಶದಲ್ಲಿ ಯಾವ ಕಾಲದಲ್ಲಿ ಮಳೆಯಾಗಬೇಕೋ ಆ ಕಾಲದಲ್ಲಿ ಮಳೆಯಾಗುತ್ತಿಲ್ಲ, ಯಾವಾಗ ಮಳೆ ಬೇಕಿಲ್ಲವೋ ಆಗ ಮಳೆಯಾಗುತ್ತಾ ಇದೆ. ಹೀಗಾಗಿ ರೈತ ಇಂಟ್ಟಂಥ ಬೆಳೆ ಸಕಾಲದಲ್ಲಿ ಮಳೆಯಾಗದೆ ಅಭಾವ ಪರಿಸ್ಥಿತಿಯುಂಟಾಗಲು ಅದು ಒಂದು ಮುಖ್ಯ ಕಾರಣವಾಗಿದೆ. ಇಂಥಾ ಪರಿಸ್ಥಿತಿ ನಮ್ಮ ದೇಶದಲ್ಲಿರುವಾಗ ದೇಶದಲ್ಲಿ ಎಲ್ಲಿ ನೀರು ಪೋಲಾಗಿ ಹೋಗುತ್ತಾ ಇದೆ ಅಂಥಾ ಕಡೆ ಸಣ್ಣ ಸಣ್ಣ ಕೆರೆಗಳು ಮತ್ತು ಪಿಕ್‌ಅಪ್‌ಗಳನ್ನು ಕಟ್ಟುವುದರ ಮೂಲಕ ರೈತನಿಗೆ ಮೊದಲು ನೀರಿನ ಅವಶ್ಯಕತೆ ಯನ್ನು ಪೂರೈಸಿಕೊಡಬೇಕು ಮತ್ತು ನೀರಾವರೀ ಬಾವಿಗಳನ್ನು ತೆಗೆಯುವುದಕ್ಕೆ ಹೆಚ್ಚಿನ ಧನ ಸಹಾಯವನ್ನು ಸರ್ಕಾರದವರು ಮಾಡಬೇಕು. ನೀರಾವರಿ ಬಾವಿಗಳಿಗೆ ಸರ್ಕಾರದವರು ಕೊಡು ತ್ತಿರುವ ಸಾಲವನ್ನು ರೈತ ಹೊತ್ತುಕೊಂಡು ಪಂಪ್‌ಸೆಟ್ಟುಗಳನ್ನು ಕೊಂಡುಕೊಂಡು ವ್ಯವಸಾಯ ಮಾಡುವುದಕ್ಕೆ ಕಷ್ಟವಾಗುತ್ತದೆ. ಹೀಗಿರುವಾಗ ಸರ್ಕಾರದವರು ಸಾಮೂಹಿಕ ನೀರಾವರಿ ಬಾವಿ ಗಳನ್ನು (ಕಮ್ಯೂನಿಟಿ ವೆಲ್ಸ್) ಮಾಡಲು ಸರ್ಕಾರದವರೇ ನೇರವಾದ ಕಾರ್ಯಕ್ರಮವನ್ನು ಕೈಕೊಂಡು ರೈತನಿಗೆ ನೀರಿನ ಅನುಕೂಲತೆಯನ್ನು ಮಾಡಿಕೊಡಲು ಪ್ರಯತ್ನ ಮಾಡಬೇಕು. ಕೆರೆ

(ಶ್ರೀ ಅಂದಾನಯ್ಯ)

ಕಟ್ಟೆ ಕಟ್ಟಿಸಿ ವಾಟರ್‌ರೇಟ್ ಯಾವ ರೀತಿ ವಸೂಲು ಮಾಡುತ್ತೀರೋ ಅದೇ ರೀತಿ ಸಾಮೂಹಿಕ ನೀರಾವರಿ ಬಾವಿಗಳನ್ನೂ ಕೂಡ ಕಟ್ಟಿಸಿಕೊಟ್ಟು ವಾಟರ್‌ರೇಟ್ ಮುಂತಾದುವನ್ನು ಬೇಕಾದರೆ ವಸೂಲು ಮಾಡಿಕೊಳ್ಳಬಹುದೆಂದು ಈ ಸಮಯದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀಮಾನ್ ಹುಚ್ಚಮಾಸ್ತಿಗೌಡರು ಭಾಷಣ ಮಾಡುತ್ತಾ ನಮ್ಮ ದೇಶದಲ್ಲಿ ಅನೇಕ ಕಡೆ ನೀರೂ ಪೋಲಾಗುತ್ತಾ ಇದೆ ಅದನ್ನು ತಡೆಗಟ್ಟಲು ಮಾಸ್ಟರ್ ಪ್ಲಾನ್ ತಯಾರು ಮಾಡಬೇಕೆಂದು ಹೇಳಿದರು. ಈಗಾಗಲೇ ದೇಶದಲ್ಲಿ ನಾಲ್ಕು ಡಿವಿಜನ್‌ಗಳು ಇವೆ. ಈ ನಾಲ್ಕು ಮೈನರ್ ಇರಿಗೇಷನ್ ಡಿವಿಜನ್‌ಗಳಿಗೂ ಸಂಬಂಧಪಟ್ಟ ಹಾಗೆ ಎಕ್ಸಿಕ್ಯೂಟೀವ್ ಇಂಜನಿಯರ ಕೇಡರ್‌ನ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕ ಮಾಡಿ ಎಷ್ಟು ಕೆಲಸ ಇವೆ ಎಂಬ ಬಗ್ಗೆ ಸರ್ವೇ ನಡೆಸಿ ಒಂದು ಅಂದಾಜನ್ನು ತಯಾರು ಮಾಡಿಸಬೇಕು. ಈ ದಿವಸ ಆಂಧ್ರ ದೇಶದವರು ಮತ್ತು ಮದರಾಸ್ ದೇಶದವರು ಕೇಂದ್ರ ಸರ್ಕಾರದವರಲ್ಲಿ ಮೊರೆ ಇಟ್ಟು ಯಾವ ರೀತಿ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳುತ್ತಾ ಇದ್ದಾರೆ ಅದೇ ರೀತಿ ತಮ್ಮಲ್ಲಿ ಎಷ್ಟು ಅಂದಾಜುಗಳಿಗೆ, ಎಷ್ಟು ಕೋಟಿ ರೂಪಾಯಿ ಬೇಕಾಗಿದೆ ಎಂಬ ಅಂಶವನ್ನು ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರದವರಲ್ಲಿ ಹಿಡಿದು ಹೆಚ್ಚಿನ ಹಣವನ್ನು ಪಡೆಯಬೇಕು. ಆದರೆ ಆ ರೀತಿ ತಾವು ಮಾಡುತ್ತಾ ಇರುವುದನ್ನು ನಾವು ನೋಡುತ್ತಾ ಇಲ್ಲ ಅದಕ್ಕೆ ಸಾಕಾದಷ್ಟು ಸಿಬ್ಬಂದಿ ಇಲ್ಲ. ಆದ್ದರಿಂದ ನಾನು ಆಗಲೇ ಹೇಳಿದ ಹಾಗೆ ನಾಲ್ಕು ಮೈನರ್ ಇರಿಗೇಷನ್ ಡಿವಿಜನ್‌ಗೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕ ಮಾಡಿ ಎಷ್ಟು ಕೆಲಸವಾಗಬೇಕು ಎಂಬ ಅಂದಾಜನ್ನು ತಯಾರು ಮಾಡಿಸಿ ಕೇಂದ್ರ ಸರ್ಕಾರಕ್ಕೆ ಮೊರೆ ಇಟ್ಟಲ್ಲಿ ನಿಜವಾಗಿಯೂ ಧನ ಸಹಾಯ ದೊರೆಯುತ್ತದೆ. ಈ ಕೆಲಸವನ್ನು ಮೊದಲು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ವ್ಯವಸಾಯ ಮಾಡತಕ್ಕ ರೈತನಿಗೆ ಹೆಚ್ಚಿನ ಸೌಲಭ್ಯ ಮತ್ತು ಪ್ರೋತ್ಸಾಹ ನಮ್ಮ ದೇಶದಲ್ಲಿ ದೊರಕುತ್ತಿಲ್ಲ. ಇವತ್ತು ಅಕ್ಕಸಾಲಿಗರು ಕೆಲಸ ಕಳೆದುಕೊಂಡರೂ ಕೂಡ ಒಂದು ದೊಡ್ಡ ಕೂಗು ಎಬ್ಬಿಸಿದರು ಸ್ಟ್ರೈಕ್ ಮಾಡಿದರು ಸರ್ಕಾರದವರು ಅವರಿಗೆ ಬೇಕಾದ ಸೌಲಭ್ಯಗಳನ್ನು ಕೊಡುತ್ತೇವೆ ಎಂದು ವಾಗ್ದಾನ ಮಾಡುತ್ತಾ ಇದ್ದಾರೆ. ಅದೇ ಪ್ರಪಂಚಕ್ಕೇ ಅನ್ನ ಕೊಡತಕ್ಕ ರೈತನಿಗೆ ಕಷ್ಟ ಬಂದಿರುವಾಗ ಆ ರೈತನಿಗೆ ಹೆಚ್ಚು ಪ್ರೋತ್ಸಾಹ ಕೊಡುತ್ತಿಲ್ಲ. ಆದ್ದರಿಂದ ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಇಡೀ ಪ್ರಪಂಚಕ್ಕೇ ಅನ್ನ ಕೊಡತಕ್ಕ ರೈತನಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಅವನಿಗೆ ಒದಗಿರತಕ್ಕ ಕಷ್ಟವನ್ನು ನೀಗಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇವತ್ತಿನ ದಿವಸ ಅಮೆರಿಕಾ ಮತ್ತು ಇತರ ದೇಶಗಳವರನ್ನು ನೋಡಿದರೆ ಅವರು ರೈತ ಬೆಳೆದಂಥ ಬೆಳೆಯನ್ನು ಸರಿಯಾದ ಬೆಲೆಗೆ ಮಾರಾಟ ಮಾಡಲು ಒಂದು ಅವಕಾಶವನ್ನು ಮಾಡಿ ಕೊಟ್ಟಿದ್ದಾರೆ, ಅಂತಹ ಒಂದು ಪ್ರೋತ್ಸಾಹ ಅವರಿಗೆ ದೊರೆತಿದೆ. ರೈತ ಬೆಳೆದ ಬೆಳೆಗೆ ಅವನು ಅದನ್ನು ಎಲ್ಲೇ ಮಾರಲಿ ನಿರ್ದಿಷ್ಟವಾದ ಬೆಲೆ ದೊರಕುವಂತಹ ಏರ್ಪಾಡು ಮಾಡಿದ್ದಾರೆ ಆ ಅನುಕೂಲ ನಮ್ಮ ದೇಶದಲ್ಲಿ ಇಲ್ಲ. ರೈತನಿಗೆ ಉತ್ತೇಜನ ಕಡಿಮೆಯಾಗುತ್ತಾ ಇದೆ. ಉದಾಹರಣೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಹೆಚ್ಚು ಕಬ್ಬು ಬೆಳೆಯುತ್ತಾರೆ 20-30 ವರ್ಷದಿಂದ ಕಬ್ಬಿನ ಬೆಳೆ ಇಟ್ಟಂಥ ರೈತರು ಎಷ್ಟು ಖರ್ಚು ಮಾಡಿದರೋ ಅಷ್ಟೇ ಹಣವನ್ನು ಸಂಪಾದನೆ ಮಾಡಿದ್ದಾರೆ, ಕಬ್ಬಿನ ಬೆಳೆ ಇಡದೇ ಹೋದರು, ಇದ್ದಕ್ಕಿದ್ದ ಹಾಗೆ ಬೆಲೆ ಜಾಸ್ತಿಯಾಯಿತು. ಹೀಗಾಗಿ ರೈತ ತನ್ನ ವ್ಯವಸಾಯವನ್ನು ಬಿಟ್ಟು ಬೇರೆ ಕಸುಬಿನಕಡೆಗೆ ಗಮನ ಕೊಡಬೇಕಾಗಿ ಬಂದಿದೆ. ಸರ್ಕಾರದವರು ಇದಕ್ಕೆ ಅವಕಾಶಕೊಡದೆ ರೈತನಿಗೆ ನಿರ್ದಿಷ್ಟವಾದ ಬೆಲೆ ಸಿಕ್ಕುವಂತೆ ಏರ್ಪಾಟು ಮಾಡಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಸರ್ಕಾರದವರು ಮೂರು ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಾ ಒಂದು ಮತ್ತು ಎರಡನೇ ಯೋಜನೆಗಳು ಮುಗಿದು ಮೂರನೆಯ ಪಂಚವಾರ್ಷಿಕ ಯೋಜನೆಯ ಮೂರನೆಯ ವರ್ಷದಲ್ಲಿದ್ದೇವೆ. ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡುತ್ತಾ ಇದ್ದಾರೆ. ಅಷ್ಟು ಖರ್ಚುಮಾಡಿದರೂ ಕೂಡ ರೈತನ ಜೀವನಮಟ್ಟ ನಮ್ಮ ದೇಶದಲ್ಲಿ ಹಿಂದೆ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿದೆ. ಈ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡುವಾಗ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದೆ, ಮಾಡಿಲ್ಲ ಎಂದು ಹೇಳುವುದಿಲ್ಲ ಆದರೆ ಒಂದು ರೀತಿನೀತಿ ಅನುಸರಿಸಿ ಸರ್ಕಾರ ಈ ಕೆಲಸಗಳನ್ನು ಮಾಡಿಸಬೇಕು. ಇವತ್ತು ನಮ್ಮ ದೇಶದಲ್ಲಿ ಏನೊಂದು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ ಇದ್ದಾರೆ ಅದನ್ನು ನೋಡಿದರೆ ತಿರುಪತಿಯಲ್ಲಿ ಹೋದಂಥ ಭಕ್ತರನ್ನು ಅಲ್ಲಿ ಕ್ಷೌರ ಮಾಡುವವನು ಕ್ಷೌರಿಕ ಎಲ್ಲರನ್ನೂ ನಿಲ್ಲಿಸಿ ಒಬ್ಬೊಬ್ಬರಿಗೂ ಪಟ್ಟೆ ಹೊಡೆದು ಕಳುಹಿಸಿರು

ತ್ತಾನೆ. ಅವನನ್ನು ಬಿಟ್ಟು ಅವರು ಬೇರೆ ಕಡೆಗೆ ಹೋಗುವ ಹಾಗಿಲ್ಲ. ಆ ರೀತಿ ನಮ್ಮ ದೇಶದಲ್ಲಿ ಅಭಿವೃದ್ಧಿಕಾರ್ಯ ನಡೆದಿದೆ. ಒಂದು ಕಡೆ ಅರ್ಧ ಫರ್ಲಾಂಗ್ ರಸ್ತೆ ಮಾಡುವುದು ಅದನ್ನು ಅಲ್ಲಿಗೇ ಬಿಡುವುದು ಮತ್ತೆ ಬೇರೆ ಕಡೆಗೆ ಹೋಗುವುದು. ಈ ರೀತಿ ಎಲ್ಲಾ ಕಡೆಯೂ ಅರ್ಧಮರ್ಧ ಕೆಲಸ ವಾಗಿದೆ.

2. P.M.

ಇನ್ನೊಂದು ಕಡೆ ಒಂದು ಶಾಲಾ ಕಟ್ಟಡವನ್ನು ಪ್ರಾರಂಭಿಸಿ ಅದನ್ನೂ ಅರ್ಧಮರ್ಧ ಮಾಡಿ ಹಾಗೇ ಕೆಲಸವನ್ನು ನಿಲ್ಲಿಸಿಬಿಟ್ಟಿರುತ್ತಾರೆ. ಹೀಗೆ ಮಾಡಿದರೆ ಯಾವ ಕೆಲಸವೂ ನೆಟ್ಟಗಾಗುವುದಿಲ್ಲ. ಇದರಿಂದ ದೇಶಕ್ಕೆ ನಷ್ಟವೇ ವಿನಾ ಪ್ರಯೋಜನವೇನೂ ಇರುವುದಿಲ್ಲ. ಈಗ ಒಂದು ರಸ್ತೇ ಕೆಲಸ ತೆಗೆದುಕೊಂಡರೂ ಅದನ್ನು ಅರ್ಧಮರ್ಧ ಮಾಡಿ ಹಾಗೇ ಕೈಬಿಟ್ಟರೆ ಅದರಿಂದ ಜನರಿಗಾದ ಪ್ರಯೋ ಜನವೇನು ? ಆದುದರಿಂದ ಯಾವಕೆಲಸವನ್ನೇ ನಡೆಸಲಿ—ಅದು ಪೂರ್ಣವಾಗುವವರೆಗೂ ಕೈಬಿಡ ಬಾರದು. ಅದರ ಫಲ ಜನರಿಗೆ ಲಭಿಸುವಂತೆ ಅದನ್ನು ಪೂರ್ತಿಮಾಡಿದರೆ ಉತ್ತಮ. ಹಣ ಖರ್ಚಾದಕ್ಕೂ ಅನುಕೂಲವಾಗಬೇಕು. ನಾವು ಖರ್ಚುಮಾಡತಕ್ಕ ಪ್ರತಿಯೊಂದು ನಯಾಪೈಸೆಯೂ ನ್ಯಾಯರೀತಿಯಲ್ಲಿ ಜನರಿಗೆ ಉಪಯೋಗವನ್ನುಂಟುಮಾಡತಕ್ಕ ರೀತಿಯಲ್ಲಿ ವಿನಿಯೋಗ ಮಾಡಬೇಕಾ ದುದು ಅತ್ಯವಶ್ಯಕ.

[MR. DEPUTY SPEAKER in the Chair.]

ಇನ್ನು ಕೊನೆಯದಾಗಿ ನಮ್ಮ ತಾಲ್ಲೂಕಿನಲ್ಲಿ ಕಳೆದೆರಡು ತಿಂಗಳಿಂದಲೂ ಮಳೆಯಿಲ್ಲ. ಎಲ್ಲಿಯೋ ಕೆಲವು ಕಡೆ ಮಾತ್ರ ನೆನ್ನೆ ಮೊನ್ನೆ ಸ್ವಲ್ಪ ಬಿದ್ದಿದೆ. ನಮ್ಮ ಕಡೆ ಜನರಿಗೆ ತಿನ್ನಲು ಕಾಳಿಲ್ಲ; ಕುಡಿಯಲು ನೀರಿಲ್ಲ. ಹೀಗಾಗಿದೆ. ಅಲ್ಲಿ ಸರ್ಕಾರದವರು ಬೇಗ ರಿಲೀಫ್ ಕಾಂಗಾರಿ ಗಳನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೇ ನಮ್ಮಲ್ಲಿ ಎಲ್ಲಕಡೆಗಳಲ್ಲಿಯೂ ಈ ಫೇರ್‌ಪ್ರೈಜ್ ಡಿಪೋಗಳನ್ನೂ ಸಹ ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಪ್ರಾಂತ್ಯ ಈ ವರ್ಷ ದುರ್ಭಿಕ್ಷಕ್ಕೊಳಪಟ್ಟಿರುವುದರಿಂದ ಅಲ್ಲಿ ಈ ಸರ್‌ಛಾರ್ಜು ಮತ್ತು ಕಂದಾಯವನ್ನು ಪೂರ್ತಿ ಯಾಗಿ ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನಮ್ಮ ತಾಲ್ಲೂಕಿನಲ್ಲಿ ಒಂದು ಮೈನರ್ ಇರ್‍ರಿಗೇಷನ್ ಡಿವಿಜನನ್ನು ಪ್ರಾರಂಭಿಸಿ ಅಲ್ಲಿ ಸುಮಾರು 250-350 ಕೆಲಸಗಳ ಒಂದು ಪಟ್ಟಿಯನ್ನು ತಯಾರಿಸಿದ್ದಾರೆ. ಆ ಕೆಲಸಗಳನ್ನು ಕಾರ್ಯಗತಮಾಡಬೇಕಾಗಿದ್ದರೆ ಅಲ್ಲಿಗೆ ಸುಮಾರು 40-50 ಲಕ್ಷ ರೂಪಾಯಿಗಳು ಬೇಕಾಗುತ್ತದೆಂದು ಅಂದಾಜ ಮಾಡಿದ್ದಾರೆ. ಆ ಪಟ್ಟೀ ಪ್ರಕಾರ ಅತಿ ಶೀಘ್ರವಾಗಿ ಆ ಕೆಲಸಗಳನ್ನೆಲ್ಲಾ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸರ್ಕಾರದವರೊಂದು ಆದೇಶವನ್ನು ಕಳುಹಿಸಬೇಕೆಂದು ಮನವಿ ಮಾಡಿಕೊಂಡು, ನನಗಿಷ್ಟು ಮಾತ ನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಫ್. ಎಸ್. ತಾವರೆ (ಶಿಗ್ಗಾಂವಿ).—ಸಭಾಧ್ಯಕ್ಷರೇ, ಶ್ರೀ ಎನ್. ಹುಚ್ಚಮಾಸ್ತಿ ಗೌಡರು ಬರಗಾಲ ನಿವಾರಣೆಯ ಮಂಡಿಸಿರತಕ್ಕ ಸೂಚನೆ ಕಾಲೋಚಿತವಾಗಿದೆ. ಈ ನಿರ್ಣಯ ವನ್ನು ನಾನು ಸ್ವಾಗತಿಸುತ್ತ ಕೆಲವು ವಿಚಾರಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರ ಬಯಸುತ್ತೇನೆ. ನಮ್ಮಲ್ಲಿ ಒಂದು ನಾಣ್ಣುಡಿಯಿದೆ. ಬರಮೂರುದಿವಸ—ಮಾತು ನಿರಂತರ ಅಂತ. ನಾವು ಈ ದಿವಸ ಒಂದು ಒಳ್ಳೆಯದನ್ನೇ ಮಾಡಲಿ-ಕೆಟ್ಟದ್ದನ್ನೇ ಮಾಡಲಿ, ಈ ದಿವಸ ಈ ವಿಚಾರದಲ್ಲಿ ಸರ್ಕಾರದವರು ಹೇಳತಕ್ಕ ಮಾತುಗಳೇನಿದೆ ಅವು ಬಹುಕಾಲ ನಿಲ್ಲತಕ್ಕವುಗಳಾಗಿವೆ-ಆದುದರಿಂದ ಈ ವಿಚಾರವನ್ನು ಸರ್ಕಾರದವರು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕಾದ್ದು ಅಗತ್ಯ ಎಂಬ ದೃಷ್ಟಿಯಿಂದ ನಾನೀಗ ಈ ನಿರ್ಣಯವನ್ನು ಸ್ವಾಗತಿಸಿ ನಾಲ್ಕು ಮಾತುಗಳನ್ನಾಡಲು ನಿಂತಿದ್ದೇನೆ-ಹಿಂದೆ ಒಬ್ಬರು ಮಾತನಾಡುತ್ತ ಈ ಸ್ಕೇರ್ಸಿಟಿ, ಫ್ಯಾಮಿನ್ ಮತ್ತು ಫ್ಲಡ್ಸ್‌ಗಳ ವಿಚಾರವೇನಿದೆ ಇವುಗಳನ್ನು ನಾವು ಆ ಚೈನಾ ಯುದ್ಧದವಿಚಾರದಲ್ಲಿ ಎಷ್ಟು ಗಂಭೀರ ರೀತಿಯಲ್ಲಿ ಮಾತನಾಡುತ್ತಿದ್ದೇವೋ ಅದೇರೀತಿ ಇವುಗಳ ವಿಚಾರದಲ್ಲಿ ನಾವು ಮಾತನಾಡಬೇಕಾಗಿದೆ ಎಂತ ಅವರು ಆಗ ಹೇಳಿದ್ದರು. ಈ ಮಾತುಗಳು ನನ್ನ ಮನಸ್ಸಿಗೆ ಚೆನ್ನಾಗಿ ಹಿಡಿದವು. ಆದರೆ ನಾನೀಗ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತರಬೇಕಾಗಿದೆ. ಆದರೆ ಈ ದಿವಸ ಇಲ್ಲಿ ಅಸೆಂಬ್ಲಿ ನಡೆಯುತ್ತಿರ ಬಹುದು. ಇದನ್ನು ನಡೆಸಲು ಇಲ್ಲಿ ಬೇರೆ ಮಂತ್ರಿಗಳು ಸಾಕಷ್ಟಿದ್ದಾರೆ. ಆದ್ದರಿಂದ ಮಾನ್ಯ ರೆವಿನ್ಯೂ ಮಂತ್ರಿಗಳು ಎಲ್ಲೆಲ್ಲಿ ಬರಗಾಲ ಬಿದ್ದಿದೆಯೋ ಆ ಪ್ರದೇಶಗಳಿಗೆಲ್ಲ ಹೋಗಿ ಅಲ್ಲಿಯ ಜನರಲ್ಲಿ ಒಂದು ಆಶಾಕಿರಣವನ್ನು ತುಂಬಿ ಅವರಲ್ಲಿ ಒಂದು ಉತ್ಸಾಹ ಮೂಡುವಂತೆ ಮಾಡಬೇಕಾದ್ದು ಬ

(ಶ್ರೀ ಎಫ್. ಎಸ್. ತಾವರೆ)

ಮುಖ್ಯ. ಏಕೆಂದರೆ ಸಾವಿಗಿಂತ ನಿರಾಶೆ ಬಹಳ ದೊಡ್ಡದು. ಮಂತ್ರಿಗಳಂಥ ದೊಡ್ಡ ವ್ಯಕ್ತಿಗಳು ಕಂಗಾಲಾಗಿರತಕ್ಕ ಜನಗಳಿಗೆ ಒಂದು ಆಶಾಕಿರಣವನ್ನು ತುಂಬಬೇಕಾದ್ದು ಈ ಸಂದರ್ಭದಲ್ಲಿ ಅತ್ಯವಶ್ಯಕ ಎಂತ ಹೇಳುತ್ತೇನೆ.

ನಾವು ಈ ಬರಗಾಲ ಪರಿಸ್ಥಿತಿಯನ್ನು ಪರಿಶೀಲನೆ ಮಾಡುವಾಗ ನಮ್ಮ ದೇಶವನ್ನು ಎರಡು ಭಾಗ ಮಾಡಬಹುದು. ಒಂದು ಹಳೇ ಮೈಸೂರು ಪ್ರದೇಶ-ಮತ್ತೊಂದು ಇಂಟಿಗ್ರೇಟೆಡ್ ಪ್ರದೇಶ ಎಂತ ಎರಡು ವಿಭಾಗ ಮಾಡಬಹುದು. ಈ ರೀತಿ ವಿಭಾಗ ಮಾಡುವುದು ಒಳ್ಳೆಯದೆಂದು ನನಗೆ ಅನಿಸುತ್ತಿದೆ. ಹಳೇ ಮೈಸೂರು ಪ್ರದೇಶದಲ್ಲೆಲ್ಲಾ ಇಲ್ಲಿದ್ದ ಹಿಂದಿನ ರಾಜಮಹಾರಾಜಗಳು, ಪಾಳೇಗಾರರೂ ಮತ್ತು ಇಲ್ಲಿನ ಜನರೂ ಬಹಳ ಬುದ್ಧಿವಂತರು, ಹಾಗೂ ಮುಂದಾಲೋಚನೆಯುಳ್ಳ ಜನರಾಗಿದ್ದುದರಿಂದ-ಈ ದಿವಸ ನಾವು ಮೈಸೂರು ದೇಶದಲ್ಲಿ ಯಾವ ವಿಭಾಗದಲ್ಲಿ ತಿರುಗಾಡಿ ನೋಡಿದರೂ ಪ್ರತಿಯೊಂದು ಹಳ್ಳಗಳಿಗೂ ಕೆರೆ-ಕಾಲುವೆಗಳನ್ನು ಮಾಡಿ ಆಕಾಶದಿಂದ ಬಿದ್ದ ಪ್ರತಿಯೊಂದು ಹನಿ ನೀರನ್ನೂ ಅಲಾಕಾಗದಂತೆ ತಡೆಗಟ್ಟಿ ಅದರಿಂದ ದೇಶಕ್ಕೆ ಒಂದು ಅನುಕೂಲವಾಗುವಂತೆ ಮಾಡಿರ ತಕ್ಕದ್ದನ್ನು ನೋಡಿದರೆ ನಾವೆಲ್ಲರೂ ಬಹಳವಾಗಿ ಮೆಚ್ಚಿಕೊಳ್ಳುವಂಥ ಕೆಲಸಗಳಾಗಿವೆ ಅವು. ಇನ್ನು ಬೇರೆ ಭಾಗಗಳ ವಿಚಾರ ತೆಗೆದುಕೊಂಡರೆ-''ಗಡ್ಡಕ್ಕೆ ಬೆಂಕಿ ಬಿದ್ದಾಗ-ಬಾವಿ ತೆಗೆಸುವಂತೆ'' ನಮ್ಮಲ್ಲಿ ಪೂರಾ ಮಳೆ ಬೆಳೆಗಳೆಲ್ಲ ಹೋಗಿ ಬರಗಾಲ ತಾಂಡವವಾಡುತ್ತಿರುವಾಗ ಶ್ರೀಮಾನ್ ಕೃಷ್ಣಪ್ಪನವರ ಹತ್ತಿರ ಬಂದು ನಮಗೆ ನೀರುಕೊಡಿ. ಹಾಗೆಮಾಡಿ-ಹೀಗೆಮಾಡಿ ಎಂತ ಕೇಳತಕ್ಕದ್ದನ್ನು ನೋಡಿದರೆ ನಮ್ಮಲ್ಲಿನ್ನೂ ಎಷ್ಟು ದಡ್ಡತನವಿದೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ನಾವೆಲ್ಲರೂ ಒಂದು ಸಮರೀತಿಯಲ್ಲಿ ಬಾಳುವಂತೆ ನಾವೀಗ ನಮ್ಮೆಲ್ಲರ ಮನಸ್ಸನ್ನೂ ಒಟ್ಟುಗೂಡಿಸಿ ಒಂದು ನಿರ್ಣಯವನ್ನು ಮಾಡಿಕೊಳ್ಳಬೇಕಾಗಿದೆ. ಈ ಹಿಂದೆ ಕೆಲವರೇನು ಒಂದು ಅನುಕೂಲಪರಿಸ್ಥಿತಿಯಲ್ಲಿದ್ದುಕೊಂಡು ಮಾತನಾಡಿದ್ದಾರೋ ಅವರಿಗೆ ಆ ಬರ ಬಿದ್ದಿರತಕ್ಕ ಪ್ರದೇಶದಲ್ಲಿರತಕ್ಕ ಜನರ ಪಾಡೇನಾಗಿದೆ ಎಂಬುದು ಅವರಿಗೆ ಪೂರ್ಣವಾಗಿ ಅರ್ಥವೇ ಆಗಿಲ್ಲವೆಂದು ನನಗೆ ಅನಿಸುತ್ತಿದೆ. ಈ ಹಿಂದೆ ಇದೇ ಬೆಂಗಳೂರು ನಗರಕ್ಕೆ ನೀರು ಸರಬರಾಯಿ ಮಾಡಬೇಕೆಂಬ ಪ್ರಶ್ನೆ ಈ ಸಭೆಯ ಮುಂದೆ ಬಂದಿದ್ದ ಕಾಲದಲ್ಲಿ ಒಬ್ಬ ಮಾನ್ಯ ಸದಸ್ಯರು ಮಾತನಾಡಲು ಪ್ರಾರಂಭಿಸಿದಾಗ ಅವರ ಮುಖದಲ್ಲಿದ್ದ ಒಂದು ಚಿಹ್ನೆ ಮತ್ತು ಅವರ ಮುಖದಲ್ಲಿದ್ದ ಒಂದು ಗಾಂಭೀರ್ಯತೆಯನ್ನು ನೋಡಿದಾಗ ನನಗೆ ಏನೋ ಆಕಾಶವೇ ಕಳಚಿ ಅವರ ಮೇಲೆ ಬಿದ್ದಿದೆಯೇನೋ ಎನ್ನುವಂತೆ ಕಂಡುಬಂದಿತು. ಆದರೆ ಅವರು ಭಾಷಣಮಾಡಿ ಆಚೆಗೆ ಬಂದನಂತರ ಅವರನ್ನು ನಾನು ಏನು ಅಂಥಾ ತೊಂದರೆಯಾಗಿದೆ ಎಂತ ಕೇಳಿದಾಗ ಅವರು ಆ ದಿವಸ ನೀರನ್ನು ಅವರ ಪಕ್ಕದಮನೆಗೆ ಹೋಗಿ ಹಿಡಿದುಕೊಂಡು ಬರಬೇಕಾಯಿತು ಎಂತ ಹೇಳಿದರು. ಆಗ ನನಗೆ ಆ ತೊಂದರೆ ಇಷ್ಟೇನೋ ಎಂತ ಅನಿಸಿತು ಆದರೆ ಇಂಥಾ ಜನರು ದೇಶದ ಮತ್ತೊಂದು ಮೂಲೆಯಲ್ಲಿ ಯಾವ್ಯಾವ ರೀತಿ ತೊಂದರೆಗಳನ್ನು ಅನುಭವಿಸತಕ್ಕ ಜನರಿದ್ದಾರೆಂಬುದನ್ನು ಸ್ವಲ್ಪ ಅವರು ಆಲೋಚನೆ ಮಾಡಬೇಕಾದ್ದು ಅತ್ಯಗತ್ಯವೆಂದು ನಾನು ಭಾವಿಸಿದ್ದೇನೆ-ಆ ನಮ್ಮ ಧಿರವಾಡ, ನರಗುಂದ, ನವಿಲುಗುಂದ ಮುಂಡರಗಿ ಈ ಪ್ರಾಂತ್ಯಗಳ ಕಡೆ ಹೋಗಿ ನೋಡುವುದಾದರೆ ಅಲ್ಲಿಯ ಪರಿಸ್ಥಿತಿ ಇಷ್ಟೇ ಎಂತ ಹೇಳುವುದಕ್ಕಾಗುವುದಿಲ್ಲ. ಪ್ರತಿದಿನವೂ-ಎರಡೆತ್ತು, ಒಂದು ಆಳು, ಒಂದು ಚಕ್ಕಡಿ ಇಷ್ಟನ್ನೂ ತೆಗೆದುಕೊಂಡು 8-10 ಮೈಲಿ ಫಾಸಲೆ ಹೋಗಿ ನೀರನ್ನು ತರಬೇಕಾದಂಥ ಪರಿಸ್ಥಿತಿ ಅಲ್ಲಿದೆ. ಆ ನೀರನ್ನು ತಂದು ಅದನ್ನು ಒಂದು ಕಲ್ಲುಬಾನಿಯೊಳಗೆ ಬಿಟ್ಟುಕೊಳ್ಳುತ್ತಾರೆ. ಆ ಬಾನಿಯಿಂದ ಬರತಕ್ಕ ನೀರಿನಲ್ಲಿ ಮೊದಲು ಬಟ್ಟೆ ಒಗೆಯುತ್ತಾರೆ. ಅನಂತರ ಅಲ್ಲಿಂದ ಹೊರಟ ನೀರನ್ನು ದನಕರುಗಳಿಗೆ ಕುಡಿಸಬೇಕು, ಅಲ್ಲಿಂದ ಉಳಿದು ಮುಂದೆ ಹೊರಟ ನೀರಿನಲ್ಲಿ ಬಾಂಡ್ಯೆಗಳನ್ನು ತಿಕ್ಕುವುದಕ್ಕೆ ಬಳಸುತ್ತಾರೆ. ನಾನು ಈ ಅಸೆಂಬ್ಲಿ ಪ್ರಾರಂಭವಾಗುವುದಕ್ಕೆ ಮುನ್ನ ಮೊನ್ನೆತಾನೆ ನಮ್ಮಲ್ಲಿ 8-10 ಗ್ರಾಮಗಳಿಗೆ ಹೋಗಿದ್ದೆನು ಅಲ್ಲಿ ಜನರಿಗೆ ಕುಡಿಯಲು ನೀರಿರಲಿಲ್ಲ. ನೀವುಗಳ್ಯಾರಾದರೂ ಆ ದೃಶ್ಯವನ್ನು ನೋಡಿದ್ದಾರೆ ನಿಮಗೆ ಮೈ ಅಲ್ಲೇ ನಡುಗ ಹುಟ್ಟಿ ಮೈ ಬೆವರುತ್ತಿತ್ತು. ಒಣ ಕೆರೆಗಳಲ್ಲಿ 5-10 ಅಡಿ ಆಳ ಬಾವಿತೆಗೆದು ಆದರ ಬಾಯಿಗೆ ಕಲ್ಲು ಹಾಕಿ-ಮಣ್ಣುಮುಚ್ಚಿ, ಇಡೀ ರಾತ್ರಿಯಲ್ಲಾ ಅಲ್ಲಿ ಮಲಗಿ ಆ ಭಾವಿಯಲ್ಲಿ ಬೆವರಿ ಬಂದ ಒಂದೆರಡು ಕೊಡ ನೀರನ್ನು ತಂದು ಆ ಜನರು ಜೀವನ ಮಾಡಬೇಕಾಗಿದೆ. ಇಂಥ ಒಂದು ಧಾರುಣವಾದ ಪರಿಸ್ಥಿತಿ ನಮ್ಮಲ್ಲಿದೆ. ಹೀಗೆ ಅಲ್ಲಿ ಅನೇಕ ವರ್ಷಗಳಿಂದ ಈ ಒಂದು ಮನೋಭಾವ ಬೆಳೆದು ಬಂದಿದೆ. ಹೀಗಿರುವಾಗ ಉಪ್ಪಿನವ ಅತ್ತ ಎಂದರೆ ತೆಂಗಿನ ಕಾಯಿಯವ ಬಿಕ್ಕಿ ಬಿಕ್ಕಿ ಅತ್ತನೆಂದು ಹೇಳುವಂತೆ ಸಂಕಟದಲ್ಲಿ ಬಿದ್ದಿರತಕ್ಕ ಜನರು ತಮ್ಮ ಸಂಕಟವನ್ನು ಸರ್ಕಾರದವರ ಮುಂದೆ ತೋಡಿಕೊಳ್ಳಲು ಬಂದರೆ-ಸುಖವಾಗಿರತಕ್ಕವರೂ ಕೂಡ ಇದೇ ಸಂಕಟವನ್ನು ತೋಡಿಕೊಳ್ಳಲು ಪ್ರಾರಂಭಿಸಿದರೆ ಸರ್ಕಾರದವರಿಗಾದರೂ ನಿಜ ಪರಿಸ್ಥಿತಿ ಹೇಗೆ ಗೊತ್ತಾಗಬೇಕು?

ಅವರಾದರೂ ನಿಜ ಪರಿಸ್ಥಿತಿ ಗೊತ್ತಿಲ್ಲದಾಗ ಏನು ಮಾಡುತ್ತಾರೆ? ನಮ್ಮ ಆ ಧಾರವಾಡದ ಪರಿಸ್ಥಿತಿ ಏನಾಗಿದೆ ಎಂಬುದನ್ನು ಈಗ ನಾನು ಸಭೆಯ ಮುಂದಿಡುತ್ತಿದ್ದೇನೆ. ಇವೊತ್ತು ಬೆಳಿಗ್ಗೆ ನನಗೆ ಧಾರವಾಡ ಜಿಲ್ಲೆಯಿಂದ ಫೋನು ಬಂದಾಗ ಕೇಳಿದ್ದರಲ್ಲ ಮೊನ್ನೆಯತನಕ ಅರ್ಧ ಇಂಚಿನಷ್ಟೂ ಮಳೆಬಿದ್ದಿಲ್ಲ ಎನ್ನುವ ವರ್ತಮಾನ ಬಂದಿದೆ. ಜೂನು ಆಖ್ಯೆರಿನೊಳಗೆ ಸ್ವಲ್ಪ ಮಳೆ ಬಂತು ಆಗ ಸ್ವಲ್ಪ ಬೀಜ ಬಿತ್ತನೆ ಮಾಡಲಾಗಿ ಅರ್ಧದಷ್ಟು ಪೀಕು ಆದವು ಕೆಲವು ಹಾಳಾಗಿ ಹೋದವು. ಇನ್ನು ಕೆಲಭಾಗಗಳಲ್ಲಿ ಏನೋ ಸುದೈವದಿಂದ ಆಗಸ್ಟ 12—13ನೇ ತಾರೀಖಿನಲ್ಲಿ ಸ್ವಲ್ಪ ಮಟ್ಟಿನ ಮಳೆ ಬಂದುದರಿಂದ ಆ ಕಾಲಕ್ಕೆ ಹಿಂಗಾರು ಬೆಳೆಗಳು, ಜೋಳ, ಹತ್ತಿ, ಪೀಕು ಕೂಡ ಸರಿಯಾಗಿ ಆಗಲಿಲ್ಲ. ಮುಂಗಾರ ಮಳೆ ಆಗದ ಪೈರೆಲ್ಲ ಒಣಗಿದೆ, ಹಾಗೂ ಹಿಂಗಾರಿನ ಪೀಕುಕೂಡ ಈಗ ಒಣಗುತ್ತಿದೆ. ಇಂತಹ ಒಂದು ಚಿತ್ರವನ್ನು ನಮ್ಮ ಧಾರವಾಡ ಜಿಲ್ಲೆಯಲ್ಲಿ ಕಾಣುತ್ತಿದ್ದೇವೆ. ಇಂತಹ ದಾರುಣವಾದ ಅವಸ್ಥೆಯಲ್ಲಿ ರೈತನ ಬಾಳ್ವೆ ಇಲ್ಲಿ ನಡೆಯುತ್ತಿದೆ. ರೈತನಿಗಾಗಿ ಎಷ್ಟೊಂದು ರೊಕ್ಕ ಖರ್ಚುಮಾಡುತ್ತಿದ್ದರೂ ಅವನ ಜೀವನಕ್ಕೆ ಅನುಕೂಲವಾಗುವಂತಹ ಕೆಲಸಗಳನ್ನು ತೀವ್ರವಾಗಿ ಮಾಡುವ ಕಡೆಗೆ ಸರಕಾರದವರು ಏನೇನು ಕಾಮಗಾರಿಗಳನ್ನು ಮಾಡಬೇಕೆಂದಿದ್ದಾರೋ ಅವನ್ನು ತುರ್ತಾಗಿ ಮಾಡಲು ಪ್ರಯತ್ನ ಮಾಡಬೇಕು. ಇಂತಹ ಕಷ್ಟದ ಪರಿಸ್ಥಿತಿಗೆ ರೈತರನ್ನು ಸಿಲುಕಿಸದಿರಲು ಇಂತಹ ಅನೇಕ ಕಾರ್ಯಗಳನ್ನು ಬೇಗ ಪ್ರಾರಂಭಿಸಬೇಕಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಸರಕಾರ ಯೋಗ್ಯವಾದ Liberalised Well Schemes ಅನ್ನು ಕೈಗೊಳ್ಳಬೇಕು. ರೈತನಿಗೆ ಎರಡು ಎಕರೆ ಜಮೀನಿರಲಿ ಅಥವಾ ಮೂರು ಎಕರೆಯಷ್ಟು ಜಮೀನಿರಲಿ, ಅವರಿಗೆ ಹಣ ಕೊಟ್ಟು ಸರಕಾರವೇ ನೇರವಾಗಿ ಬಾವಿ ಅಗೆಯುವ ಕಾರ್ಯವನ್ನು ಆಗಿಂದಾಗ್ಗೆ ಪ್ರಾರಂಭಿಸಬೇಕು. ಇದರಿಂದ ಸರಕಾರಕ್ಕೆ ಕಷ್ಟವೇನಿಲ್ಲ. ಬಾವಿಗಳನ್ನು ಉಪಯೋಗಿಸುವವರಿಂದ ಹಣವನ್ನು ವಾಪಸು ಪಡೆಯಬಹುದು. ಹೀಗೆ ಸುಮಾರು 20—25 ಬಾವಿಗಳನ್ನು ತೆಗೆಸಿದರೆ ಬರಗಾಲದ ಕಾಲದಲ್ಲಿ ರೈತರಿಗೆ ಕೆಲಸ ಸಿಕ್ಕಿದಂತಾಯಿತು. ಆರು ತಿಂಗಳೊಳಗೆ ಬಾವಿ ಕೆಲಸವೂ ಆದಂತಾಯಿತು ಅದರಿಂದ ಬೆಳೆಯನ್ನೂ ಬೆಳೆಯುವಂತಾಗುತ್ತದೆ. ಇದಕ್ಕಾಗಿ ಸರಕಾರ ಸಾಕಷ್ಟು ದುಡ್ಡನ್ನು ಬಾವಿಗಾಗಿ ಮೀಸಲಾಗಿಡಬೇಕು. ಯಾವ ರೈತನೇ ಆಗ ರಾಜ್ಯ ಸರಕಾರವನ್ನು ಬಾವಿಗಾಗಿ ಸಹಾಯ ಕೇಳಿದರೆ ಅವನಲ್ಲಿ ಒಂದು ಎಕರೆ ಇರಲಿ, ಎರಡು, ಮೂರು ಎಕರೆಯಷ್ಟೇ ಭೂಮಿ ಇರಲಿ ಅವನಿಗೆ ಬಾವಿಯನ್ನು ತಗೆಯಲು ಅನುಕೂಲಮಾಡಿ ಕೊಟ್ಟರೆ ಅವನು ಬೆಳೆ ಮಾಡಲು ಸಹಾಯವಾಗುತ್ತದೆ ಮತ್ತು ಆತನಿಗೆ ಬೇರೆ ಮಾರ್ಗವಿಲ್ಲ, ನಾವಾದರೋ ಬೊಂಬಾಯಿ ಭಾಗಧಿಂದ ಬಂದವರು. ನಮ್ಮ ಭಾಗದಲ್ಲಿರುವ ಜನಕ್ಕೆ ಒಂದು ಕಷ್ಟವಿದೆ. ಅಲ್ಲಿರುವ ರೆವೆನ್ಯೂ ಅಧಿಕಾರಿಗಳು ಹಿಂದಿನ ಮುಂಬಯಿ ಸರಕಾರ ಮಾಡಿದ್ದ ಒಂದು ಆರ್ಡರನ್ನು ಇಂದಿಗೂ ನಮ್ಮ ಮುಂದೆ ಹಿಡಿದುಕೊಂಡು ಅಡಚಣೆಮಾಡುತ್ತಿದ್ದಾರೆ. ಅಲ್ಲಿ ನಮಗೆ ಜಮೀನಿನ ಬೆಲೆ ಒಂದು ರೂಪಾಯಿ ಎಂದಿದ್ದರೆ 200 ರೂಪಾಯಿಗಳಷ್ಟು ಹಿಡಿಯಬೇಕು ಎಂದಿತ್ತು. ಇದನ್ನು ತೆಗೆದುಕೊಂಡು ನಮ್ಮ ಮುಂದೆ ಅದನ್ನು ಓದುತ್ತಾರೆ ಅದರಂತೆ 5 ಎಕರೆಯಿಂದ ಹತ್ತು ಎಕರೆಯಷ್ಟು ಜಮೀನು ಒಬ್ಬನಲ್ಲಿದ್ದರೂ ಅವನಿಗೆ ಎಷ್ಟೋ ಸಾರಿ 3,000 ದಷ್ಟು ಸಾಲ ಸಿಗುವುದು ದುರ್ಲಭವಾಗುತ್ತದೆ. ಸಾವಿರಾರು ರೂಪಾಯಿಗಳಷ್ಟು ಜಮೀನಿನ ಬೆಲೆ ಇದ್ದರೂ ಸರಕಾರ ಸಾಲವಾಗಿ ಕೊಡುವ ಹಣ ಧಾರಾಳವಾಗಿ ಸಿಗುತ್ತಿಲ್ಲ. ಬಾವಿಗಾಗಿ ಹಣ ಕೊಡುವಾಗ ರೈತನಲ್ಲಿರುವ ಜಮೀನಿಗೆ ಇವೊತ್ತಿನ ಬೆಲೆ ಏನಿದೆ ಅದನ್ನು ಸರಕಾರ ಯೋಚನೆ ಮಾಡಿ ಅದರ ಮೇಲೆ ಸಹಾಯವನ್ನು ಕೊಡುವಂತಹ ಕಾರ್ಯಕ್ರಮವನ್ನು ಪ್ರಾರಂಭಿಸಬೇಕು. ಆದ್ದರಿಂದ ಸರಕಾರವೇ ಬಾವಿ ತೆಗೆಸುವ ಕೆಲಸವನ್ನು ನೇರವಾಗಿ ಪ್ರಾರಂಭಿಸಬೇಕು.

ಇಷ್ಟೇ ಅಲ್ಲದೆ, ನಮ್ಮ ಭಾಗದಲ್ಲಿ ಅನೇಕ ಕೆರೆಗಳು ಹೂತು ಹೋಗಿವೆ, ಒಡ್ಡುಗಳು ಒಡೆದು ಹೋಗಿವೆ ಇವುಗಳ ರಿಪೇರಿ ಕೆಲಸವನ್ನು ಪಿ.ಡಬ್ಲ್ಯೂ.ಡಿ. ಇಲಾಖೆಯವರು ಮಾಡಲಿಕ್ಕಾಗುವುದಿಲ್ಲ. ರೆವೆನ್ಯೂ ಖಾತೆಯವರೇ ತೆಗೆದುಕೊಂಡು ಬಿಡಲಿ ಎಂದು ಹೇಳುತ್ತಾರೆ. ಇದರಿಂದಾಗಿ ನಮ್ಮ ತಾಲ್ಲೂಕಿನಲ್ಲಿರುವ ತಹಶೀಲುದಾರರ ಟೇಬಲ್ಲಿನ ಮೇಲೆ ಇಲ್ಲಿ ಯಾವ ಯಾವ ಕೆರೆಗಳಿವೆ, ನಾಲಾಗಳಿವೆ ಎನ್ನುವ ವಿವರಗಳನ್ನೊಳಗೊಂಡ ಒಂದು ದೊಡ್ಡ ಪಟ್ಟಿ ಇದೆ. ಇದರಿಂದ ಅವರಿಗೆ ಯಾವ ಯಾವ ಕೆರೆಗಳು ಒಡೆದಿವೆ, ಯಾವ ಕೆರೆಯಲ್ಲಿ ನೀರಿದೆ ಎನ್ನುವುದೊಂದೂ ಗೊತ್ತಾಗುವುದಿಲ್ಲ. ಇದೊಂದು ದೇಶದ ದುರ್ದೈವವೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕಾಗಿ ನಮ್ಮ ರೆವೆನ್ಯೂ ಮಂತ್ರಿಗಳು ಹಾಗು ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಇಬ್ಬರು ಕಲೆತು ಈ ಕೆರೆಗಳ ದುರಸ್ತಿಯನ್ನು ಎಷ್ಟು ಬೇಗ ಮಾಡಿದರೆ ಅಷ್ಟು ನಮ್ಮ ಜನಕ್ಕೆ ಅನುಕೂಲ ಮಾಡಲು ಸಾಧ್ಯವಾಗುತ್ತದೆ. ಈ ಸಭೆಯಲ್ಲಿ ಎಲ್ಲರೂ ಬರಗಾಲ ಬಂದಾಗ ರೆವೆನ್ಯೂ ಸಚಿವರ ಕಡೆಗೆ ಎಲ್ಲ ಜವಾಬ್ದಾರಿಯನ್ನು ಹೊರೆಸಬೇಕೆಂದು ಹೇಳುತ್ತಾರೆ. ಆದರೆ ಬರಗಾಲದ ಪರಿಹಾರ ರೆವೆನ್ಯೂ ಮಿನಿಸ್ಟರೊಬ್ಬರಿಂದಲೇ ಆಗುವ ಕೆಲಸವಲ್ಲ. ಇದು ಎಲ್ಲ ರಾಜ್ಯದ ಸಚಿವರುಗಳ ಮೇಲೆ ಜವಾಬ್ದಾರಿ ಬೀಳುವಂತಹುದು. ರೆವೆನ್ಯೂ ಮಂತ್ರಿಗಳು ಇವೊತ್ತು ಬರಗಾಲದ ಪರಿಹಾರಕ್ಕೆ ಸಾಕಾಗುವಷ್ಟು ದುಡ್ಡನ್ನು ಒದಗಿಸಬಹುದು. ಆದರೆ ಬರ

(ಶ್ರೀ ಎಫ್. ಎಸ್. ತಾವರೆ)

ಗಾಲ ಬಂದಾಗ ಎಲ್ಲ ಶಾಖೆಯ ಮಂತ್ರಿಗಳು ಕೆಲಸಗಳನ್ನು ಹಂಚಿಕೊಳ್ಳಬೇಕು. ಅಗತ್ಯವಾಗಿ ಈಗ ಅಲ್ಲಲ್ಲಿ ಕಾಂಟೂರು ಬಂಡಿಂಗು ಕೆಲಸವನ್ನು ವ್ಯವಸಾಯ ಶಾಖೆ ಸಚಿವರು ಎಲ್ಲೆಲ್ಲಿ ಬೇಗ ಆಗಬೇಕೋ ಅದರ ಕಡೆಗೆ ಪ್ರಾಶಸ್ತ್ಯ ಕೊಟ್ಟು ಬರಗಾಲಕ್ಕೆ ಅನುಕೂಲವಾಗುವಂತೆ ಕಾಂಟೂರು ಬಂಡಿಂಗು ಕೆಲಸಗಳನ್ನು ಮಾಡಿದರೆ ಅಲ್ಲಿನ ಜನರಿಗೆ ಕೆಲಸ ಕೊಟ್ಟಂತಾಗುತ್ತದೆ. ಎರಡನೇದು ಪಿ.ಡಬ್ಲ್ಯು ಡಿ. ಮಿನಿಸ್ಟರು ಬರಗಾಲ ಇರತಕ್ಕ ಭಾಗಗಳಲ್ಲಿ Scarcity ಗಾಗಿ ರಸ್ತೆಗಳ ಕೆಲಸವನ್ನು ಮಾಡಲು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ರೋಡುಗಳಿಗಾಗಿ ಕೊಟ್ಟ ದುಡ್ಡು ಅಪವ್ಯಯವಾಗದಂತೆ ಇವನ್ನು ಪಕ್ಕ ರೋಡ ಗಳನ್ನು ಮಾಡುವುದರ ಮೂಲಕ ನಮ್ಮ ಜನಕ್ಕೆ ಕೆಲಸ ಕೊಟ್ಟಂತಾಯಿತು, ಉತ್ತಮವಾದ ರಸ್ತೆಗಳನ್ನು ಮಾಡಿಕೊಂಡು ಬಂದಂತೆಯೂ ಆಯಿತು. ಇದೇ ಪ್ರಕಾರ ನಮ್ಮ ಫಾರೆಸ್ಟು ಮಿನಿಸ್ಟರವರು ಕೂಡ ಬರಗಾಲ ಪ್ರದೇಶಗಳಲ್ಲಿ ಗಿಡಗಳನ್ನು ಬೆಳೆಸುವ ಕಾರ್ಯ ಮಾಡ ಬಹುದು. ಬರಗಾಲದ ಪ್ರದೇಶಗಳಲ್ಲಿ ಹತ್ತು ಹತ್ತು ಮೈಲಿ ಪ್ರದೇಶಗಳನ್ನು Reserved Forest Area ಎಂದು ಮಾಡಿ ಅಲ್ಲಿ ಮರಗಳು ನಿಲ್ಲುವಂತೆ ಬೆಳೆಸಬೇಕು ಅಲ್ಲಲ್ಲಿ ಟ್ರಂಚುಗಳನ್ನು ತೋಡಿ. ಬೀಜಗಳನ್ನು ಬಿತ್ತಿ ಉತ್ತಮವಾದ ಅರಣ್ಯ ಸಂಪೂರ್ಣವಾಗಿ ಬೆಳೆಯಲು ಅನುಕೂಲ ವಾದೀತು ಅಲ್ಲದೆ ಸ್ಕೇರ್ಸಿಟಿ ಪ್ರದೇಶದ ಜನಕ್ಕೆ ಕೆಲಸವನ್ನು ಒದಗಿಸಿದಂತೆಯೂ ಆಯಿತು. ಹೀಗೆ ನಮ್ಮ ನಮ್ಮ ಪಾಲಿನ ಕೆಲಸವನ್ನು ಬರಗಾಲದ ಕಾಲದಲ್ಲ ಮಾಡುವುದೇನೂ ದುಸ್ತರವಾದುದು ಎಂದು ನಮಗನಿಸುವುದಿಲ್ಲ. ಈ ಪ್ರಸಂಗದೊಳಗೆ ನಮ್ಮ ಅರ್ಥ ಸಚಿವರು ದೊಡ್ಡ ಮನಸ್ಸು ಮಾಡಿ ಬರಗಾಲದ ನಿಧಿಗಾಗಿ ಬೇರೆ ಇತರ ಹೆಡ್ಡಿನಲ್ಲಿ ಉಳಿದಿರುವ ಹಣವನ್ನೆಲ್ಲ, ಸೇರಿಸಿ ಕೊಡುವುದು ಬಹಳ ಕಷ್ಟದ ಕೆಲಸ. ದೊಡ್ಡ ಮನಸ್ಸು ಮಾಡಿ ಸಾಕಷ್ಟು ಹಣ ನೀಡಲಿ ಎಂದು ಅವರನ್ನು ಬೇಡಿ ಕೊಳ್ಳುತ್ತೇನೆ. ಇವೊತ್ತಿನ ದಿನ ಬರಗಾಲಕ್ಕಾಗಿ ಧಾರವಾಡ ಜಿಲ್ಲೆಯಲ್ಲಿ ಸರಕಾರ ಕೈಗೊಂಡಿರುವ ಕೆಲಸಗಳನ್ನು ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ, ವರ್ಷೇ ವರ್ಷೇ ದವಸಗಳನ್ನು ಬೆಳೆಯು ತ್ತಿರುವಾಗ ಚಿಟ್ಟೆ ಹುಳುಗಳ ಹಾವಳಿ ಹೆಚ್ಚಾಗಿತ್ತು. ಹಾವೇರಿ ತಾಲ್ಲೂಕಿನಲ್ಲಂತೂ ಚಿಟ್ಟೆ ಹುಳಗಳು ಹೆಚ್ಚಾಗಿ ಸುಮಾರು 50,000 ಎಕರೆಗಳಷ್ಟು ಭೂಮಿಯ ಬೆಳೆ ನಷ್ಟವಾಗಿ ಹೋಗುತ್ತಿದ್ದುದನ್ನು ಅಗ್ರಿಕಲ್‌ಚರ್ ಇಲಾಖೆಯವರು ನೂತನವಾದ ಪ್ರಯೋಗಗಳನ್ನು ಮಾಡಿ ಕ್ರಿಮಿನಾಶಕ ಪುಡಿಗಳನ್ನು ಪ ಯೋಗಿಸಿ ಈಗಾಗಲೇ ಸುಮಾರು 32,000 ಎಕರೆಗಳಷ್ಟು ಭೂಮಿಯಲ್ಲಿ ಚಿಟ್ಟೆ ಹಾವಳಿಯನ್ನು ತಡೆದು ಈ ಹಾದಿಯಲ್ಲಿ ಯಶಸ್ಸು ಹೊಂದಿದ್ದಾರೆ. ಇದರಿಂದಾಗಿ ಅಭಾವ ಪೀಡಿತ ಪ್ರದೇಶಗಳಿಗೂ ಅನುಕೂಲವಾಯಿತು. ಅಲ್ಲದೆ ನಮ್ಮ ಭಾಗದಲ್ಲಿ ಈಗ ಸುಮಾರು 1,200 ಜನ ಕೆಲಸವಿಲ್ಲದವರು ಇದ್ದರು. ನಾನು ಹೋದ ರವಿವಾರ ಊರಿಗೆ ಹೋಗಿ ಒಂದು ಆರು ತಾಸು ಇದ್ದಾಗ ಈ ಜನರು ಸುಮಾರು ಎರಡು ಮುಕ್ಕಾಲು ಮೈಲಿಯಷ್ಟು ರಸ್ತೆ ಕೆಲಸವನ್ನು ಮುಗಿಸಿದರು ಎನ್ನುವುದು ನನಗೆ ಗೋಚರವಾಯಿತು. ಇದನ್ನು ನೋಡಿದರೆ, ಇಲ್ಲದ ದಾರುಣ ಪರಿಸ್ಥಿತಿ ಗೊತ್ತಾದೀತು. ನಮ್ಮ ಹಿಂದೆ ನಾಲ್ಕು ಎತ್ತು ಇಟ್ಟುಕೊಂಡು ಬೇಸಾಯ ಮಾಡುತ್ತಿದ್ದಾರೈತ ಇವೊತ್ತು ತನ್ನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಒಟ್ಟಾಗಿ ಬುಟ್ಟಿ ಸನಿಕೆ ಇತ್ಯಾದಿಗಳನ್ನು ಹಿಡಿದುಕೊಂಡು ರಸ್ತೆ ಕೆಲಸ ಮಾಡಲು ಬರುತ್ತಿದ್ದಾನೆ. ಅವನಿಗೂ ಅವನ ಹೆಂಡತಿ ಮಕ್ಕಳಿಗೆ ಆಹಾರ ಸಿಕ್ಕದೆ ಉಪವಾಸ ವಿರುವ ಪ್ರಸಂಗ ಬಂದಿದೆ. ಹಾವೇರಿ ತಾಲ್ಲೂಕಿನ ಪೂರ್ವ ಭಾಗದಲ್ಲಿ ಈ ರೀತಿಯಾದ ದಾರುಣ ಪರಿಸ್ಥಿತಿ ಯಾಗಿದೆ. ಮನ ಮರುಗುತ್ತಾ ಇದೆ. ಮಾನ್ಯ ಸಚಿವರಲ್ಲಿ ನಾನು ಇವತ್ತು ಕೇಳಿಕೊಳ್ಳುವುದು, ಸಾಧ್ಯವಾದಷ್ಟು ಬೇಗ ಆ ಜನರನ್ನು ದಡಕ್ಕೆ ಒಯ್ಯಲು ಹಚ್ಚಿರಿ. ಅದನ್ನು ಕೇಳುವ ಕಾಲಕ್ಕೆ ನನಗೆ ನಿಜವಾಗಿಯೂ ನಾಚಿಕೆ ಬರುತ್ತಿದೆ, ದುಃಖ ಕಾಣಿಸುತ್ತಿದೆ. ಏಕೆಂದರೆ ಕೇಳುವಂಥ ಕೆಟ್ಟ ಕಾಲ ಯಾರಿಗೂ ಬರಬಾರದು, ಅಂತ ಒಂದು ಕಡೆಯಲ್ಲ ಕೇಳುವ ಮನುಷ್ಯ, ಸಾಯುವ ಸ್ಥಿತಿಯಲ್ಲಿರುವ ಮನುಷ್ಯ, ಇಬ್ಬರು ಸಮಾನ ಸ್ಥಿತಿಯಲ್ಲಿ ಇರುತ್ತಾರಂತೆ. ಕೇಳಬೇಕಾದರೆ ಕಾಲುಗಳು ಹಿಂದು ಮುಂದು ಆಗುತ್ತವೆ, ಮೈನಡಗುತ್ತದೆ, ಬೆವರು ಬರುತ್ತದೆ, ನಾಲಿಗೆ ತೊದಲಿ ಹಿಂದೆ ಮುಂದೆ ಆಗುತ್ತದೆ. ಕೇಳಿದರೆ ಮಾನ್ಯ ಕೃಷ್ಣಪ್ಪನವರು ಕೊಡುತ್ತಾರೆಯೋ ಇಲ್ಲವೋ. ಒಟ್ಟಿನ ಮೇಲೆ, ಸಾಯುವ ಕಾಲಕ್ಕೆ ಮನುಷ್ಯನಿಗೆ ಯಾವ ಲಕ್ಷಣಗಳು ಬರುತ್ತವೆಯೋ ಅವೇ ಎಲ್ಲ ಲಕ್ಷಣಗಳೂ ಕೇಳುವ ಮನುಷ್ಯನಿಗೂ ಬರುತ್ತವೆ ಎಂದು ಇವತ್ತು ನನಗೆ ಅನ್ನಿಸುತ್ತಿದೆ. ಆದರೂ ಅನಿವಾರ್ಯ ವಾಗಿ, ಆ ಜನರ ದುಃಖ ಕಂಡುಕೊಂಡು, ನಾಚಿಕೆಯನ್ನು ಬದಿಗೆ ಸೇರಿಸಿ, ನಾನು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಧಾರಾಳವಾಗಿ ತಾವು ಮುಂದೆ ಬಂದು ಯಾವ ಒಂದು ರೀತಿಯಿಂದ ಜನಗಳನ್ನು ಉಳಿಸಬೇಕೋ, ಇವತ್ತು ಆದ ಎಡೆಯಿಂದ ಜನಗಳನ್ನು ಉಳಿಸಿ ಕೊಳ್ಳಿ, ಅದಕ್ಕೆ ಮುಂದೆ ಹೋಗಿ ಒಟ್ಟಿನ ಮೇಲೆ ಇವತ್ತಿನ ದಿವಸ ಜನರ ಸಂಕಷ್ಟ ಏನು ಇದೆ ಅನ್ನುವುದು ತೀವ್ರವಾಗಿ ತಿಳಿದುಕೊಳ್ಳಬೇಕು. ನಾನು ರೆವಿನ್ಯು ಸಚಿವರಿಗೆ ಏಕೆ ಇಷ್ಟು ಹೇಳುತ್ತಿದ್ದೇನೆಂದರೆ

ಅನೇಕ ಜವಾಬ್ದಾರಿ ಆಫೀಸರುಗಳು ಜನರ ಸಾವಿನ ಮೇಲೆ ಆಟವಾಡುತ್ತಿದ್ದಾರೆ. ಒಬ್ಬರು ಹೇಳುತ್ತಾ ಇದ್ದರು, 50-100 ಲಕ್ಷ ರೂಪಾಯಿ ಖರ್ಚು ಮಾಡಲು ಏನು ಅವಶ್ಯಕತೆ ಇದೆ, ಏನು ಕೆಲಸ ಇದೆಯೆಂದು, ರಾಜಕೀಯ ಮುಂಖಡರು ತಮ್ಮ ರಾಜಕೀಯ ಬೆಳಸಿಕೊಳ್ಳುವುದಕ್ಕೆ ಬರ, ಬರ ಅಂತ ಹೇಳಿ ಗುಲ್ಲೆಬ್ಬಿಸುತ್ತಿದ್ದಾರೆ, ಈತರಹ ಇಂಪ್ರೆಶನ್ ಕ್ರಿಯೇಟ್ ಮಾಡುತ್ತಿದ್ದಾರೆ ಎಂದು ಹೊಣೆಗಾರಿಕೆ ಇರುವ ಆಫೀಸರುಗಳು ಹೇಳಿ ನಮ್ಮ ಈ ಚಲ್ಲಾಟದೊಳಗೆ ಆ ಬಡ ಜನರು ಸಾಯ ಬಾರದು. ಅದಕ್ಕೋಸ್ಕರ ಮಾನ್ಯ ಸಚಿವರು ತಾವೇ ಬೇಗ ಹೋಗಿ ಪರಿಸ್ಥಿತಿ ಅಭ್ಯಾಸ ಮಾಡಿರಿ. ಇವತ್ತು ಮಳೆ ಬಂದರೂ ಕೂಡ 12 ಪೀಕು ಕೈಗೆ ಹತ್ತುವುದಿಲ್ಲ. ಜೋಳ ಕೆಟ್ಟು ಹೋಯಿತು. ಶೇಂಗಾಯಿ ಹೂವು ಕೂಡ ಬಿಟ್ಟಿಲ್ಲ. ರಾಗಿ ಫಸಲಿನ ಹಣೆಬರಹ ಮುಗಿದು ಹೋಯಿತು. ಇವತ್ತಿನ ದಿವಸ ಪೀಕು ಬರಬೇಕಾದರೆ ಹತ್ತಿ ಒಂದೇ. ಹನಗಲ್ ಜನರು ಸ್ವಲ್ಪ ಬೆಳೆ ತೆಗೆಯಬಹುದು. ಉಳಿದ ಯಾವ ಕಡೆಯಲ್ಲಿಯೂ ಹತ್ತು ಇಂಚು ಮಳೆ ಬಿದ್ದರೂ ಯಾವ ಲಾಭವೂ ಆಗುವುದಿಲ್ಲ. ನಮ್ಮ ಜನತೆ ಮಳೆ ದಾರಿ ನೋಡುವ ಪರಿಸ್ಥಿತಿಯಲ್ಲಿಯೇ ಇಲ್ಲ. ಮಾನ್ಯ ಸಚಿವರು ಬೆಂಗಳೂರಿನಲ್ಲಿ ಮಳೆ ಬಂತು ಎಂದು ಅಂದುಕೊಂಡು, ಅಲ್ಲಿ ಜನಕ್ಕೂ ಸುಖವಾಗುತ್ತದೆ ಎಂದು ಉಸಿರು ಬಿಡಬಾರದು. ಅಲ್ಲಿರತಕ್ಕ ಜನಗಳ ಪಾಡು ಬಹಳ ಕಷ್ಟ. ನಿಮ್ಮ ಕಾಲದಲ್ಲಿ ಅವರು ಸ್ಮರಿಸಿಕೊಳ್ಳುವ ಸಹಾಯ ವಾಗಬೇಕು. ಕೃಷ್ಣಪ್ಪನವರು ಅಂತ ಮೈಸೂರು ರಾಜ್ಯದಲ್ಲಿ ಉದಾರ ಸಚಿವರು ಇದ್ದರು, ಅವರು ಜನರ ಕಷ್ಟವನ್ನು ನೀಗಿಸಲು ಭಾರಿ ಶ್ರಮ ಪಟ್ಟರು ಎಂಬ ಕೀರ್ತಿಯನ್ನುಗಳಿಸಿ, ಕಷ್ಟದಲ್ಲಿರುವ ಜನರನ್ನು ಆ ಕಡೆಗೆ ಪಾರು ಮಾಡಬೇಕೆಂದು ಹೇಳಿ ಇವತ್ತು ನಾನು ಸಚಿವರನ್ನು ಕೇಳುತ್ತೇನೆ.

ಜನಗಳನ್ನು ಉಳಿಸುವಂಥ ಜವಾಬ್ದಾರಿ ನಮ್ಮ ಮೇಲೆ ಎಷ್ಟಿದೆಯೋ, ರೈತನ ಸಂಪತ್ತಾದಂಥ ದನಗಳನ್ನು ಕೂಡ ಕಾಪಾಡತಕ್ಕಂಥ ಜವಾಬ್ದಾರಿ ಅಷ್ಟೇ ಇದೆ. ತಮಗೆ ಗೊತ್ತಿದೆ. ಕಳೆದ 3-4 ವರ್ಷದಿಂದ ಅಲ್ಲಿ ಎಲ್ಲಾ ಫಸಲುಗಳಿಗೂ ಚಿಟ್ಟೆ, ಮಿಡಿತೆ ಹಾವಳಿ ಬಂದು, ಅದರ ಕೀಟಲೆಯನ್ನು ಬೇರೆ ಜನ ಅನುಭವಿಸುತ್ತಾ ಇದ್ದಾರೆ. ಈ ಹೊತ್ತು ಆ ಮೇವನ್ನು ದನಗಳಿಗೆ ಕೊಟ್ಟರೆ, ಅವು ಸಾವಿಗೀಡಾಗುತ್ತವೆ. ರೈತನಿಗೆ ಈ ತೊಂದರೆ ಬೇರೆ ಇದೆ. ಆದ್ದರಿಂದ ರಾಜ್ಯದ ಬೇರೆ ಬೇರೆ ಮೂಲೆಯಲ್ಲಿ ಎಲ್ಲೆಲ್ಲಿ ಹುಲ್ಲು ಸಿಗುತ್ತದೆಯೋ, ಅದನ್ನು ಸಂಗ್ರಹಿಸಿ, ನಮ್ಮ ಜಿಲ್ಲೆಗೆ ಒದಗಿಸುವ ಜವಾಬ್ದಾರಿಯನ್ನು ಹೊತ್ತುಕೊಂಡರೆ. ರೈತನ ದೊಡ್ಡ ಸಂಪತ್ತಾದಂಥ ಧನಗಳನ್ನು ಜೋಪಾನ ಮಾಡಬಹುದು. ಈ ಹುಲ್ಲು ಮೇವನ್ನು ದೊಡ್ಡ ರೀತಿಯಲ್ಲಿ ಸರಬರಾಯಿ ಮಾಡುವಂಥ ಜವಾಬ್ದಾರಿಯನ್ನು ಮರೆಯದಂತೆ ನಿರ್ವಹಿಸಬೇಕೆಂದು ಸರ್ಕಾರವನ್ನು ಬೇಡಿಕೊಳ್ಳುತ್ತಿದ್ದೇನೆ.

ಈ ತಕಾವಿ ಸಾಲವನ್ನು ಹಣದ ರೂಪದಲ್ಲಿ ರೈತನ ಕೈಗೆ ಕೊಡುವುದರಲ್ಲಿ ನನಗೆ ವಿಶ್ವಾಸವಿಲ್ಲ, ಎತ್ತು ಹಸು ಕೊಳ್ಳುವುದಕ್ಕೆಂದು ಕೊಡುತ್ತೀರಾ, ಅದರಲ್ಲಿ ನನಗೆ ನಂಬಿಕೆ ಇಲ್ಲ. ರೈತನ ಹೊಟ್ಟೆಗೇ ಅನ್ನ ವಿಲ್ಲದೆ ಇರುವುದರಿಂದ, ಅವನು ಆ ಹಣವನ್ನು ತನ್ನ ಉದರ ಪೋಷಣೆ ಮಾಡಿಕೊಳ್ಳುವುದಕ್ಕೆ ಉಪಯೋಗಿಸುವುದು ಸ್ವಾಭಾವಿಕ ಆ ಮೇಲೆ ತನ್ನ ಹೆಂಡತಿ, ಮಕ್ಕಳು, ಮತ್ತು ಪ್ರಾಪಂಚಿಕ ಅವಶ್ಯಕತೆಗಳಿಗೆ ಉಪಯೋಗಿಸಿಕೊಂಡು, ತನ್ನ ದನ ಕರುಗಳನ್ನು ಕಳೆದುಕೊಳ್ಳುವ ಪ್ರಸಂಗ ಬರಬಹುದು. ಅದಕೋಸ್ಕರ ಸರಕಾರದವರು ಎಲ್ಲೆಲ್ಲಿ ಯಾರ ಹತ್ತಿರ ಬತ್ತದ ಹುಲ್ಲಿನ ಸ್ಟಾಕ್ ಇದೆಯೋ ಅಂಥವರಿಂದ ತೆಗೆದುಕೊಂಡು ಟ್ರಕ್ಕುಗಳ ಮುಖಾಂತರ, ರೈಲು ಮುಖಾಂತರ ದೊಡ್ಡ ಪ್ರಮಾಣದಲ್ಲಿ ಸಾಗಿಸಿ ಒದಗಿಸಿದರೆ ರೈತನು ತನ್ನ ಸಂಪತ್ತಾದಂಥ ದನ ಕರುಗಳನ್ನು ಉಳಿಸಿಕೊಳ್ಳಬಹುದು ಎಂದು ಒತ್ತಿ ಹೇಳಿ, ಸರಕಾರದವರು ಆ ರೀತಿ ಮಾಡಬೇಕೆಂದು ಬೇಡಿಕೊಳ್ಳುತ್ತಿದ್ದೇನೆ.

ಇವತ್ತು ಸರಕಾರದವರು ಬಾವಿಗಳನ್ನು ತೆಗೆಸುವುದಕ್ಕೆ ಎಲ್ಲಿ ನಿಸರ್ಗದ ಉಪಾಯವಿದೆಯೋ, ಅಲ್ಲಿ ತೆಗಿಸಿರಿ. ರೈತರಿಗೆ ಉದಾರ ಸಾಲ ಕೊಡಿರಿ. ಹಳೆಯ ಕೆರೆಗಳನ್ನು ರಿಪೇರಿ ಮಾಡಿಸಿರಿ. ಹೊಸ ಕೆರೆಗಳನ್ನು ತೋಡಲು ಎಲ್ಲೆಲ್ಲಿ ಸಾಧ್ಯವಿದೆಯೋ ಅಂಥಲ್ಲೆಲ್ಲಾ ಹೊಸಕೆರೆಗಳ ಕೆಲಸವನ್ನು ಪ್ರಾರಂಭ ಮಾಡಿಸಿರಿ. ಅಂಥ ಕೆರೆ ಬಾವಿಗಳನ್ನು ತೋಡಲಿಕ್ಕೆ ಸಾಧ್ಯವಿಲ್ಲದ ಒಂದು ಪರಿಸ್ಥಿತಿ ನಮ್ಮಲ್ಲಿದೆ. ಈಗ ನಮ್ಮಲ್ಲಿ ಏನು ಪರಿಸ್ಥಿತಿ ಇದೆಯೆಂದರೆ 180 ಅಡಿ ಕೆಳಕ್ಕೆ ಹೋದರೂ ನಮಗೆ ಬಾವಿಯಲ್ಲಿ ನೀರು ಸಿಗುತ್ತಾ ಇಲ್ಲ; ಕಟ್ಟಡ ತಲೆ ಮೇಲೆ ಮಗುಚಿಕೊಳ್ಳುತ್ತಿದೆ. ಕೆಲವು ಬಾವಿಗಳಲ್ಲಿ ವಿಷದ ನೀರು ಬರುತ್ತದೆ. ಎರೆ ಭೂಮಿಯಾದ್ದರಿಂದ ಕೆರೆಗಳನ್ನು ಕಟ್ಟಿದರೆ ನೀರಾವರಿಗೆ ಅನುಕೂಲವಾಗುವ ಪರಿಸ್ಥಿತಿ ಇಲ್ಲ. ಉಪ್ಪು ನೀರು ಭೂಮಿಯಾದ್ದರಿಂದ ನೀರಾವರಿ ಕೆಲಸಕ್ಕೆ ಬಾವಿ ತೋಡುವ ಪರಿಸ್ಥಿತಿಯೂ ಇಲ್ಲ. ಆದ್ದರಿಂದ ಜನಗಳ ಸ್ಥಿತಿಯನ್ನು ಅಭಿವೃದ್ಧಿಗೊಳಿಸುವುದಕ್ಕೆ, ಅನಿವಾರ್ಯವಾಗಿ, ರಸ್ತೆ ಕೆಲಸ ಪ್ರಾರಂಭಮಾಡಿ ಜನರಿಗೆ ಕೆಲಸ ಒದಗಿಸಬೇಕೆಂದು ಬೇಡಿಕೊಳ್ಳುತ್ತೇನೆ.

[MR. SPEAKER in the Chair.]

ಇನ್ನು ನಿರಂತರವಾದ ಕೆಲವು ಯೋಜನೆಗಳನ್ನು ಸರಕಾರದವರು ಯೋಚಿಸಿಕೊಳ್ಳುವುದು ಬಹಳ ಅವಶ್ಯಕ. ವಾರ್ದಾ ಯೋಚನೆಯನ್ನು ಕೈಗೊಂಡರೆ ಹಾವೇರಿ ತಾಲ್ಲೂಕಿನ ಬಹುಭಾಗ,

(ಶ್ರೀ ಎಫ್. ಎಸ್. ತಾವರೆ)

ಬ್ಯಾಡಗಿ, ಶಿಗ್ಗಾಂವ್, ಕುಂಡಗಾರ್‌ಗಳ ಕೆಲವು ಭಾಗಕ್ಕೆ ನೀರಾವರಿ ಅನುಕೂಲ ದೊರೆಯುವುದು ; ಎಂದು ತಜ್ಞರು ಪರಿಶೀಲನೆ ಮಾಡಿ ಅಭಿಪ್ರಾಯ ಕೊಟ್ಟಿದ್ದಾರೆ. ಏಕೆಂದರೆ ಹಾವೇರಿ ತಾಲ್ಲೂಕಿನಲ್ಲಿ ಎಂದು ನೋಡಿದರೂ ಪೂರ್ವದಿಂದಲೂ ಬರ, ಬರ ಎಂಬ ಚಿತ್ರದ ಕೂಗು ಕೇಳಿ ಬರುತ್ತಿದೆ. ಅದನ್ನು ನಿರಂತರವಾಗಿ ಹೋಗಲಾಡಿಸಬೇಕಾದರೆ ವರದ ಯೋಜನೆಯನ್ನು ಸರಕಾರದವರು ಕೈಗೆ ತೆಗೆದುಕೊಳ್ಳಬೇಕು. ಇದನ್ನು ತೆಗೆದುಕೊಂಡರೆ 20 30 ಸಾವಿರ ಎಕರೆ ಭೂಮಿ ನೀರಾವರಿಯಾಗುತ್ತದೆ. ಇಂಥ ಒಂದೆರಡು ಸ್ಕೀಮುಗಳನ್ನು ನಾಲ್ಕಾರು ವರ್ಷದೊಳಗೆ ಕಾರ್ಯಗತ ಮಾಡಿದರೆ ಮಾತ್ರ ಬರಗಾಲದ ದವಡೆಯಿಂದ ಆ ಜನರನ್ನು ಉಳಿಸುವುದಕ್ಕೆ ಸಾಧ್ಯವಾದೀತು.

ಹಾವೇರಿ ತಾಲ್ಲೂಕಿನೊಳಗೆ ಹಳೇ ಕಾಲದಲ್ಲಿ ಆದ ಕೆಲವು ಕೆರೆಗಳು ಹೂತು ಹೋಗಿವೆ. ಉದಾಹರಣೆಗೆ ಚಿತ್ರದ ಕೆರೆ, ಕರ್ಜಿನಳ್ಳಿ ಕೆರೆ, ಸಿದ್ದಾಪುರ ಕೆರೆ. ಒಂದೊಂದು ಕೆರೆ ಕೆಳಗೂ ಸಾವಿರ ಗಟ್ಲೆ ಎಕರೆ ಅಚ್ಚುಕಟ್ಟು ಜಮೀನುಗಳಿವೆ. ಅಷ್ಟು ದೊಡ್ಡ ಕೆರೆಗಳಿವೆ. ಇವತ್ತು ಆ ಕೆರೆಗಳಿಗೆ ಒಡ್ಡುಗಳಿಲ್ಲ ; ಎಲ್ಲಾ ಹೂತುಹೋಗಿ ಬಿಟ್ಟಿವೆ. ನೀರು ಹರಿದೂ ಹರಿದೂ ಕೆಳಗಡೆ ಜಮೀನುಗಳು ಉಪ್ಪಾಗಿ ಹೋಗಿಬಿಟ್ಟಿವೆ. ಆದರೆ ಅಲ್ಲಿಯ ರೈತರಿಂದ ನೀರಾವರಿ ಟ್ಯಾಕ್ಸನ್ನು ಮಾತ್ರ ತೆಗೆದುಕೊಳ್ಳುತ್ತಾ ಇದ್ದಾರೆ ; ಈ ವಸೂಲಿ ನಿರಂತರವಾಗಿ ಸರ್ಕಾರದಿಂದ ನಡೆದುಕೊಂಡು ಬಂದಿದೆ. ಕೆರೆಗಳಲ್ಲಿ ನೀರಿಲ್ಲ, ಒಡ್ಡಿಲ್ಲ, ಟ್ಯಾಕ್ಸ್ ಮಾತ್ರ ಜನಗಳು ಕೊಡುತ್ತಾ ಇದ್ದಾರೆ. ಅವುಗಳಿಗೆ ಸರಕಾರದವರು ಪ್ರವೀಣದಿಂದ ಯೋಜನೆ ಮಾಡಿಸಿ ದೊಡ್ಡ ದೊಡ್ಡ ಕೆರೆಗಳ ಹೂಳು ತೆಗಿಸಿ, ಒಡ್ಡುಗಳನ್ನು ಹಾಕಿ, ರಿಪೇರಿ ಮಾಡಿ ನೀರಾವರಿ ಅನುಕೂಲತೆ ಮಾಡಿಕೊಟ್ಟರೆ ಬರಗಾಲದಲ್ಲಿ ಕೆಲವು ಮಟ್ಟಿಗಾದರೂ ಜನರಿಗೆ ಪರಿಹಾರ ಒದಗಿಸಿದಂತಾಯಿತು.

ಸರಕಾರದವರು ಈ ಎಲ್ಲಾ ಮಾತುಗಳ ಕಡೆಗೂ ಲಕ್ಷವನ್ನು ಕೊಡಬೇಕು. ಇಲ್ಲಿ ಮಳೆಯಾದರೆ ಅಲ್ಲಿ ಜನರ ಸುಖವಾಯಿತೆಂದು ತಿಳಿದುಕೊಳ್ಳಬಾರದು. ಆ ಭಾಗಕ್ಕೆ ಮಾನ್ಯ ರೆವಿನ್ಯೂ ಸಚಿವರು ಹೋಗಿ, ಆ ಜನಗಳಿಗೆ ಯೋಗ್ಯವಾದಂಥ ಪರಿಹಾರವನ್ನು ಕಂಡುಹಿಡಿಯಬೇಕು. ಇವತ್ತು ನಿಜವಾಗಿ ಅನೇಕ ಬರಗಾಲ ಕಾಮಗಾರಿಗಳಿಗೆ ಹಣವಿಲ್ಲವೆಂದು ಅಲ್ಲಿಯ ಅಧಿಕಾರಿಗಳು ಕೆಲಸವನ್ನು ನಿಲ್ಲಿಸಿದ್ದಾರೆ. ಅವರು ಕೆಲಸವನ್ನು ನಿಲ್ಲಿಸಿದರೆ ರೈತರ ಹೆಂಡಿರು ಮಕ್ಕಳ ಸ್ಥಿತಿ ಏನಾಗಬೇಕು. ಮುಂದಿನ ಸುಗ್ಗಿ ಬರುವವರೆಗೆ ಅವರು ಜೀವನವನ್ನು ಸಾಗಿಸಬೇಕು. ಆದುದರಿಂದ ಪರಿಹಾರ ಕಾರ್ಯಗಳನ್ನು ಮಾನ್ಯ ಮಂತ್ರಿಗಳು ಮುಂದುವರಿಸಬೇಕೆಂದು ತಿಳಿಸಿ, ನನ್ನ ಎರಡು ಮಾತನ್ನು ಮುಗಿಸುತ್ತೇನೆ.

2-30 P.M.

ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಸ್ವಾಮಿ, ಈ ದಿವಸ ನಮ್ಮ ಮುಂದೆ ಇರುವ ಪ್ರಸ್ತಾಪದ ಬಗ್ಗೆ ಕೆಲವು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ನಮ್ಮಲ್ಲಿ ಬರಗಾಲವು 20-30 ವರ್ಷಗಳಿಗೆ ಬರುತ್ತಿತ್ತು. ಈಚೆಗೆ ಪ್ರತಿವರ್ಷ ಬರುತ್ತಿದೆ. ಈ ಬರಗಾಲ ಹೋದವರ್ಷಕ್ಕಿಂತ ಈ ವರ್ಷ, ಈ ವರ್ಷಕ್ಕಿಂತ ಮುಂಚಿನ ವರ್ಷ ವರ್ಷವರ್ಷ ಜಾಸ್ತಿಯಾಗುತ್ತಿದೆ. ಇದಕ್ಕೆ ಕಾರಣ ನನಗನ್ನಿಸುವುದು, ಹಿಂದೆ ಮಹಾರಾಜರ ಸರ್ಕಾರವಿದ್ದಾಗ, ಸಮತಾ ಭಾವನೆ ಇತ್ತು, ಆಗ ಮಳೆಯೂ ಸಹ ಕಾಲಕ್ಕೆ ಸರಿಯಾಗಿ ಬರುವ ಪದ್ಧತಿಯನ್ನು ಇಟ್ಟುಕೊಂಡಿತ್ತು. ಕಾಂಗ್ರೆಸ್ ಸರ್ಕಾರ ಬಂದಮೇಲೆ ಪಕ್ಷಪಾತ, ಸ್ವಜಾತಿ ರಕ್ಷಣೆ, ತಮ್ಮ ಪಕ್ಷದವರ ಬೆಳವಣಿಗೆಗಾಗಿ ಲಂಚ ರುಷುವತ್ತುಗಳನ್ನು ಪಡೆಯಲು ಅವಕಾಶವನ್ನು ಕಲ್ಪಿಸಿಕೊಡುವುದು, ಹೀಗೆ ಯಾವ ತತ್ವಗಳನ್ನು ಅನುಸರಿಸಿಕೊಂಡು ಹೋಗುತ್ತಿದ್ದಾರೆಯೋ ಅದೇರೀತಿ ದೇವೇಂದ್ರನೂ ಇವರ ನೀತಿಯನ್ನು ಅನುಸರಿಸುವ ಅಭ್ಯಾಸವನ್ನಿಟ್ಟುಕೊಂಡು ಒಂದೊಂದು ಊರಿನಲ್ಲಿ ಮಳೆ ಬೀಳುವುದು, ಮತ್ತೊಂದು ಊರಿನಲ್ಲಿ ಬೀಳದೆ ಇರುವ ಪರಿಸ್ಥಿತಿ ಬಂದು, ಬರಗಾಲ ಪ್ರಾಪ್ತವಾಗಿದೆ. ಇದನ್ನು ತಪ್ಪಿಸಬೇಕಾದರೆ, ಮಳೆ ಮೊದಲನಂತೆ ಬಂದು ಅಭಾವ ಪರಿಸ್ಥಿತಿ ದೇಶದಲ್ಲಿ ತಪ್ಪಬೇಕಾದರೆ, ನಮ್ಮ ಆಡಳಿತ ಪಕ್ಷದವರು ಒಳ್ಳೆಯ ಭಾವನೆ, ಒಳ್ಳೆಯ ರೀತಿನೀತಿಗಳನ್ನನುಸರಿಸಿ ಸಮತಾಭಾವನೆಯಿಂದ ಇದ್ದರೆ ಆಗ ಸಕಾಲದಲ್ಲಿ ಮಳೆ ಬರುವುದಕ್ಕೆ ಅನುಕೂಲವಾಗಬಹುದು.

ಬೆಂಗಳೂರು, ತುಮಕೂರು, ಕೋಲಾರ ಈ ಮೂರು ಜಿಲ್ಲೆಗಳೂ ಬಯಲುಸೀಮೆ. ಇಲ್ಲಿ ಸಾಮಾನ್ಯವಾಗಿ ವರ್ಷದಲ್ಲಿ 24 ಅಂಗುಲ ಮಳೆ ಬರುತ್ತದೆಂದು ಅಂದಾಜು ಮಾಡಿದ್ದಾರೆ. ಅದು ನಿಜ. ಆದರೆ ಸಕಾಲದಲ್ಲಿ ಮಳೆ ಬೀಳದೆ ನಮಗೆ ಬರಗಾಲ ಬರುತ್ತಿದೆ. 24 ಹದ ಮಳೆ ಸರಿಯಾಗಿ ಬಂದರೂ ಆ ನೀರು ಅನ್ಯಥಾ ಸಮುದ್ರಕ್ಕೆ ಹೋಗದೆ ಇರುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಿಲ್ಲ. ಈ ಮೂರು ಜಿಲ್ಲೆಗಳಲ್ಲಿ ಸುಮಾರು ಹತ್ತುಸಾವಿರ ಕೆರೆಗಳಿವೆ. ಈ ಕೆರೆಗಳನ್ನು ನಮ್ಮ

ಪೂರ್ವಿಕರು ದೇಶದ ಹಣವನ್ನು ಖರ್ಚುಮಾಡದೆ ಶ್ರೀಮಂತರೂ, ಪಾಳೆಯಗಾರರೂ ಇತರರೂ ಕಟ್ಟಿಸಿದ ಕೆರೆಗಳನ್ನು ನಮ್ಮ ಸರ್ಕಾರ ಮೂರು ಕೋಟಿ ರೂಪಾಯಿಗಳನ್ನು ಲೋಕೋಪಯೋಗಿ ಇಲಾಖೆಗೆ ಸಂಬಳದ ರೂಪದಲ್ಲಿ ಕೊಡುವಾಗ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿರುವ ಕಾಲದಲ್ಲಿ ಈ ಕೆರೆಗಳ ರಿಪೇರಿ, ತೂಬು ರಿಪೇರಿ ಮಾಡುವ ಶಕ್ತಿ ಸರ್ಕಾರಕ್ಕೆ ಇಲ್ಲವಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಒಂದುವೇಳೆ ಕೆರೆಗಳನ್ನು ರಿಪೇರಿ ಮಾಡಿಸಿದರೂ ಸಹ ತಮಗೆ ಬೇಕಾದ ಕಂಟ್ರಾಕ್ಟರಿಗೆ ಅನುಕೂಲವಾಗುವುದಕ್ಕೆ, ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಮಾಡುತ್ತಿದ್ದಾರೆ. ಸಾಮೂಹಿಕವಾಗಿ ಸರ್ವೆ ನಡೆಸಿ ಯಾವ ಯಾವ ವರ್ಷ ಯಾವ ಯಾವ ಕೆರೆಯನ್ನು ತೆಗೆದುಕೊಳ್ಳಬಹುದು, ಎಷ್ಟು ಕೆರೆ ತೆಗೆದುಕೊಳ್ಳಬಹುದು, ಯಾವ ಯಾವ ತಾಲ್ಲೂಕಿಗೆ ಆದ್ಯತೆಯನ್ನು ಕೊಡಬಹುದು ಎಂದು ಅದಕ್ಕೆ ಒಂದು ನಿಯಮವನ್ನು ಅನುಸರಿಸದೆ ತಮಗೆ ಬೇಕಾದವರಿಗೆ ಸಂಬಂಧೀಕರಿಗೆ ಕಂಟ್ರಾಕ್ಟು ಮೂಲಕ ಲಾಭ ಗಳಿಸುವುದಕ್ಕೋಸ್ಕರ ಕಾಮಗಾರಿ ನಡೆಸುವರು. ಸಾಮೂಹಿಕವಾಗಿ ಜನಸಾಮಾನ್ಯರ ಅಭಿವೃದ್ಧಿಗೆ ಮತ್ತು ಬಡಬಗ್ಗರ ಅಭಿವೃದ್ಧಿಗೆ ಕೆಲಸ ನಡೆಯಬೇಕು. ಇಂಥ ಕ್ಷಾಮನಿವಾರಣಾ ಯೋಜನೆ ಈ ಸರ್ಕಾರದಲ್ಲಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ ಸ್ವಾಮಿ. ಒಂದು ಉದಾಹರಣೆಯನ್ನು ಕೊಡಬೇಕಾದರೆ ನಮ್ಮ ತಾಲ್ಲೂಕಿನಲ್ಲಿ ಚನ್ನಸಂದ್ರದ ಬಳಿ ಒಂದು ಕೆರೆ ಕಟ್ಟಲು ಒಂದು ಲಕ್ಷ ರೂ.ಗಳಿಗೆ ಮಂಜೂರಾತಿ ಕೊಡಲು ರಾಜಕೀಯ ಒತ್ತಡದಿಂದ ಸರಕಾರ ಆತುರವಾಗಿರುತ್ತೆ. ಇಂಜನಿಯರುಗಳ ಒಪ್ಪಿಗೆ ಇಲ್ಲದಿದ್ದರೂ ಸಹ, ಐದು ಎಕರೆಯೂ ಸಾಗುವಳಿಯಾಗುವುದಿಲ್ಲ. ಇಂಥ ಕೆರೆಗೆ ಒಂದು ಲಕ್ಷ ಹತ್ತುಸಾವಿರ ರೂಪಾಯಿಗಳನ್ನು ರಾಜಕೀಯ ಪ್ರಭಾವವ ವ್ಯಕ್ತಿಗೋಸ್ಕರ ಖರ್ಚುಮಾಡಿದ್ದಾರೆ.

ಅಧ್ಯಕ್ಷರು.—ಕ್ಷಾಮನಿವಾರಣೆಗೆ ಅಗತ್ಯವಿದ್ದುದನ್ನು ಮಾತ್ರ ಹೇಳಿ.

ಶ್ರೀ ಬಿ. ಚನ್ನಭೈರೇಗೌಡ.—ಇಂಥ ಅನ್ಯಾಯಗಳನ್ನು ಮಾಡುತ್ತಿರುವುದರಿಂದ ಕ್ಷಾಮ ಬರುತ್ತಿದೆ. "ಯಥಾ ರಾಜಾ ತಥಾ ಪ್ರಜಾ" ಎನ್ನುವಂತೆ ಸರ್ಕಾರ ಹೇಗೆ ಆಡಳಿತ ನಡೆಸುತ್ತಿದೆಯೋ, ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಹಚ್ಚುವಂತೆ ಹೇಗೆ ರಾಜ್ಯಭಾರ ಕ್ರಮ ನಡೆಯುತ್ತಿದೆಯೋ, ಮಳೆಯೂ ಅದೇ ರೀತಿಯಿಂದ ಕ್ರಮವಾಗಿ ಬೀಳುತ್ತಿಲ್ಲ. ನಮ್ಮ ತಾಲ್ಲೂಕಿನ ಮೋಕನಹಳ್ಳಿಯ ಕೆರೆಗೆ 1,200 ರೂಪಾಯಿ work out ಆಗುತ್ತದೆ, 60 ಎಕರೆ ಸಾಗುವಳಿಯಾಗುತ್ತದೆ. ಇಂಥ ಕೆರೆಯ ಕೆಲಸವನ್ನು ತೆಗೆದುಕೊಳ್ಳದೆ not feasible ಎಂದು endorsement ಕೊಟ್ಟಿದ್ದಾರೆ. ಅದರ ಪಕ್ಕದಲ್ಲಿಯೇ ರಾಜಕೀಯ ಒತ್ತಾಯದಿಂದ 3,080 ರೂಪಾಯಿ work out ಆಗುವ ಕೆರೆಯ ಕೆಲಸವನ್ನು ಮಂಜೂರ್ಮಾಡಿ ಕೆಲಸ ಪ್ರಾರಂಭ ಮಾಡಿದ್ದಾರೆ. ಹೀಗೆ ರಾಜಕೀಯ ಪ್ರಭಾವಕ್ಕೋಸ್ಕರ ಕೆಲಸಗಳನ್ನು ನಡೆಸಬಾರದು.

ನಮ್ಮ ದೇಶದಲ್ಲಿ ಸಣ್ಣ ನೀರಾವರಿಗೋಸ್ಕರ ಒಂದು ಸ್ಪೆಷಲ್ ಸಬ್‌ಡಿವಿಜನ್ ಇದೆ. ಇವರು ಎಲ್ಲಿ ಕೆಲಸ ಮಾಡುತ್ತಿದ್ದಾರೆ, ಎಲ್ಲಿ ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ, ಏನೇನಾಗುತ್ತಿದೆ ಎನ್ನುವುದು ಗೊತ್ತಿಲ್ಲ. ಕೆಲವು ಮಂತ್ರಿಗಳ ತಾಲ್ಲೂಕುಗಳಲ್ಲಿ ಮಾತ್ರ ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ, ಮತ್ತು ಅಲ್ಲಿ ಸರ್ವೆಕಾರ್ಯಗಳು ನಡೆಯುತ್ತಿವೆ. ಹೀಗೆ ಮಾಡುವುದರ ಬದಲು ದೇಶದ ಎಲ್ಲಕಡೆಯೂ ಇನ್‌ವೆಸ್ಟಿಗೇಟ್ ಮಾಡಿ ಹಣ ಬಂದ ಹಾಗೆಲ್ಲ ಕೆರೆಗಳ ಕೆಲಸವನ್ನು ತೆಗೆದುಕೊಂಡು ಅವುಗಳಲ್ಲಿ ನೀರನ್ನು ನಿಲ್ಲಿಸಿ water table ಜಾಸ್ತಿಯಾದರೆ ಸಣ್ಣ ನೀರಾವರಿ ವ್ಯವಸಾಯಕ್ಕೆ ಸಹಾಯವಾಗುತ್ತದೆ ಮತ್ತು ಕ್ಷಾಮ ನಿವಾರಣೆಯಾಗುವುದಕ್ಕೆ ಅವಕಾಶವಾಗುತ್ತಿದೆ.

ಈ ಸರ್ಕಾರದವರಿಗೆ ತೀವ್ರತೆ ಇಲ್ಲ. ಕ್ಷಾಮ ನಿವಾರಣೆ ಮಾಡಬೇಕು, ಅದಕ್ಕೆ ಸಂಬಂಧಪಟ್ಟ ಒಂದು ಬಿಲ್ ತರಬೇಕು ಎಂದು ಸಾಮೂಹಿಕವಾಗಿ ದೇಶದ ಕಲ್ಯಾಣಕ್ಕೋಸ್ಕರ, ಇಡೀ ಜನತೆಯ ಯೋಗಕ್ಷೇಮಕ್ಕೋಸ್ಕರ, ಒಂದು ಸದುದ್ದೇಶದಿಂದ ತಂದಿದ್ದ ಪಕ್ಷದಲ್ಲಿ ಅದು ಶ್ಲಾಘನೀಯವಾದುದು. ಅವನ್ನು ಹೇಗೆ ಕಾರ್ಯಗತ ಮಾಡುತ್ತಾರೆಂಬುದನ್ನು ನೋಡಬೇಕು.

Contour bunding ಹೊಲಗಳಲ್ಲಿ ಹಾಕಬೇಕು ಎಂದು ಹೇಳುತ್ತಾರೆ. ಅದರ ಬದಲು ಹಳ್ಳಗಳು ಹರಿಯುವ ಕಡೆ ಹಾಕಿದರೆ water table ಹೆಚ್ಚಿ ಬಾವಿಗಳಲ್ಲಿ ಸಹ ನೀರು ಹೆಚ್ಚಾಗಿ ಬಂದು ಸಹಾಯವಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಆರುಸಾವಿರ ಎಕರೆ ಕೆಂಪುಮಣ್ಣಿನ ಭೂಮಿ ಇದೆ. ಇಲ್ಲಿ ಕಾಂಟೂರ್ ಬಂಡಿಂಗ್ ಹಾಕಿ ಅಲ್ಲಿ ಗೋಡಂಬಿ, ಹುಣಸೆ ಮುಂತಾದ ಮರಗಳನ್ನು ಬೆಳಸಿದರೆ ಆ ಮೂಲಕ ಮಳೆ ಸಕಾಲದಲ್ಲಿ ಬರುವುದಕ್ಕೆ ಅವಕಾಶವಾಗುತ್ತದೆ. ಸರ್ಕಾರ ಈ ವ್ಯವಸ್ಥೆಯನ್ನು ಮಾಡಬೇಕು.

ತಾಲ್ಲೂಕು ಬೋರ್ಡುಗಳು ಮತ್ತು N.E.S. ಇವುಗಳ ಮೂಲಕ ಸಾಲ ಕೊಡತಕ್ಕ ಪದ್ಧತಿ ಇದೆ. ಇದರಲ್ಲಿ ರೈತರಿಗೆ ಎಷ್ಟು ಕಷ್ಟವಿದೆ, ಕಿರುಕುಳವಿದೆ ಎನ್ನುವುದನ್ನು ಸ್ವಲ್ಪ ತಮ್ಮ ಗಮನಕ್ಕೆ ತರಬೇಕಾಗಿದೆ. ಸರ್ಕಾರದಿಂದ ಬರತಕ್ಕ ಎಲ್ಲ ಸಾಲಗಳನ್ನೂ, ಸೌಲಭ್ಯಗಳನ್ನೂ ರಾಜಕೀಯ ಪಕ್ಷದವರಿಗೆ ಕೆಲವರಿಗೆ, ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್ ಮತ್ತು ಅಲ್ಲಿಯ M.L.A. ಯಾರು ರಾಜ

(ಶ್ರೀ ಬಿ. ಚನ್ನಬೈರೇಗೌಡ)

ಕೀಯ ಮುಖ್ಯಸ್ಥರಿದ್ದಾರೆ ಅವರಿಗೆ ಹಂಚುತ್ತಿದ್ದಾರೆ. ಬಡವರಿಗೆ ಹಂಚಲು ಕೊಡುವ ಸಾಲ ಮತ್ತು ಇತರ ಸೌಲಭ್ಯಗಳು ಸಾಮೂಹಿಕವಾಗಿ ಬಡವರಿಗೆ, ಯಾರಿಗೆ ಅವಶ್ಯಕತೆಯಿದೆಯೋ ಅಂಥವರಿಗೆ ದೊರೆಯುತ್ತಿಲ್ಲ. ತಮ್ಮ ಪಕ್ಷವನ್ನು ಬೆಳೆಸಿಕೊಳ್ಳುವುದಕ್ಕೆ, ಮುಂದೆ ಓಟು ಗಳಿಸುವ ದೃಷ್ಟಿಯಿಂದ ಈ ಹಣವನ್ನು ಕೊಡುತ್ತಿದ್ದಾರೆ. ಸಾಮೂಹಿಕವಾಗಿ ಎಲ್ಲರಿಗೂ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಗೊಬ್ಬರದ ವಿಷಯವನ್ನು ತೆಗೆದುಕೊಂಡರೆ ಇದನ್ನು ಸೊಸೈಟಿಗಳ ಮೂಲಕ ಹಂಚುತ್ತಿದ್ದಾರೆ. ಮಾನ್ಯ ಮಂತ್ರಿಗಳೊಬ್ಬರು ಮೈಸೂರಿನಲ್ಲಿ ಹೇಳಿರುವಂತೆ ಈ ಸೊಸೈಟಿಗಳು ಸರ್ಕಾರದ ಹಣವನ್ನು ಲೂಟಿ ಹೊಡೆಯುವ ಗೂಳಿಗಳ ಗೋಮಾಳವಾಗಿದೆ. Office bearer ಯಾರು ಇರುತ್ತಾರೆಯೋ ಅವರು ಉಪಯೋಗಕ್ಕಾಗಿ ಒಂದೊಂದು ಲಾರಿಯನ್ನು ಇಟ್ಟುಕೊಂಡಿದ್ದಾರೆ. ತಮ್ಮ ಹೊಲಗಳಿಗೆ ಗೊಬ್ಬರ ಸಾಗಿಸುವುದಕ್ಕೆ, ತಮ್ಮ ಪದಾರ್ಥಗಳನ್ನು ಕಡಮೆ ದರದಲ್ಲಿ ಸಾಗಾಣಿಕೆ ಮಾಡಿಕೊಳ್ಳುವುದಕ್ಕೆ ಈ ಲಾರಿಗಳು ಉಪಯೋಗವಾಗುತ್ತಿವೆಯೇ ಹೊರತು ಸೊಸೈಟಿಗಳಿಂದ ನಿರೀಕ್ಷಿಸಿದಷ್ಟು ಫಲ ಜನಗಳಿಗೆ ದೊರೆಯುತ್ತಿಲ್ಲ.

ನಾನು ಹೇಳಿರುವ ವಿಷಯಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ದೇಶದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿದರೆ, ಕ್ಷಾಮನಿವಾರಣೆಯಾದೀತು ಇಲ್ಲದೆ ಇದ್ದರೆ ಜನತೆಗೆ ತೊಂದರೆ ತಪ್ಪಿದ್ದಲ್ಲ. ಸರ್ಕಾರ ಈ ವಿಚಾರಗಳಿಗೆ ಗಮನ ಕೊಡಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಸುಶೀಲಾಬಾಯಿ ಹಿರಾಚಂದ ಶಹಾ (ಬಾಗೇವಾಡಿ).—ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಬರಗಾಲ ಪರಿಹಾರದ ಬಗ್ಗೆ ಏನು ನಿರ್ಣಯ ತಂದಿದ್ದಾರೆಯೋ ಅದನ್ನು ಅನುಮೋದಿಸುತ್ತಾ ನಮ್ಮ ವಿಜಾಪುರದ ಜಿಲ್ಲೆಯ ಬಗ್ಗೆ ಕೆಲವು ಸೂಚನೆ ಮಾಡಲು ಬಯಸುತ್ತೇನೆ. ವಿಜಾಪುರ ಜಿಲ್ಲೆ ಬರಗಾಲ ಪ್ರಾಂತ ಎಂದು ಮುಂಬಯಿ ರಾಜ್ಯದಲ್ಲಿದ್ದಾಗಲೂ ಕೂಡ ಅನ್ನುತ್ತಿದ್ದರು. ಬರಗಾಲ ಪ್ರದೇಶದಲ್ಲಿ ಏನು ಕೆಲಸ ತೆಗೆದುಕೊಂಡಿದ್ದಾರೆಂದು ಕೇಳಿದರೆ ಹೇಳಲು ಕಷ್ಟವಾಗುತ್ತದೆ. ಆದುದರಿಂದ ಬರಗಾಲ ಪ್ರದೇಶದ ಪರಿಸ್ಥಿತಿಯ ಸಂಪೂರ್ಣ ಪರಿಶೀಲನೆ ನಡೆಸಲು ಒಂದು ಸಮಿತಿ ರಚನೆ ಮಾಡಬೇಕು. ಬರಗಾಲ ಪರಿಹಾರಕ್ಕೆ ಯಾವ ಯಾವ ಕೆಲಸ ತೆಗೆದುಕೊಳ್ಳಬೇಕು ಎನ್ನುವುದನ್ನು ಪರಿಶೀಲಿಸತಕ್ಕದ್ದು ಅಗತ್ಯ. ನಮ್ಮ ವಿಜಾಪುರ ಜಿಲ್ಲೆಯಲ್ಲಿ ಬರಗಾಲ ಪರಿಹಾರಕ್ಕೆ ಕೆರೆ ಬಾವಿ ತೆಗೆದರೆ ಕಷ್ಟ ಪರಿಹಾರವಾಗುತ್ತದೆ. ಒಟ್ಟು 17 ಕೆರೆಗಳ ಸರ್ವೆ ಮಾಡಿ ಕಳಿಸಿದ ಮೇಲೆ ಕೇವಲ ನಾಲ್ಕೈದು ಕೆರೆಗಳ ಕೆಲಸ ಇಲ್ಲಿಯವರೆಗೆ ತೆಗೆದುಕೊಂಡಿದ್ದಾರೆ. ಬಾಕಿ ಕೆರೆಗಳ ಕೆಲಸ ಹಾಗೇ ಇಟ್ಟುಬಿಟ್ಟಿದ್ದಾರೆ. ನಮ್ಮ ವಿಜಾಪುರದ ಜಿಲ್ಲೆಯಲ್ಲಿ ಹೆಚ್ಚು ಮಳೆಯಾಗುವುದಿಲ್ಲ. ಕಡಿಮೆ ಮಳೆಯಾದರೂ ಕೂಡ ಅದರಲ್ಲಿಯೇ ಬೆಳೆ ತೆಗೆಯಬೇಕಾಗುತ್ತದೆ. ಒಟ್ಟು ಸರ್ವೆ ಮಾಡಿದ 17 ಕೆರೆಗಳ ಕೆಲಸ ಏಕೆ ತೆಗೆದುಕೊಂಡಿಲ್ಲ ಎಂದು ಹೇಳುತ್ತೇನೆ. ವಿಜಾಪೂರ ತಾಲ್ಲೂಕಿನಲ್ಲಿ ಕೆರೆಯಾಗುವುದಿಲ್ಲ. ಆದುದರಿಂದ ಅಲ್ಲಿ ಬಾವಿಗಳ ಕೆಲಸ ತೆಗೆದುಕೊಳ್ಳಬೇಕು. ಹಳೇ ಮೈಸೂರು ಪ್ರದೇಶದಲ್ಲಿ ಒಂದು ಮೈಲಿಗೆ ಒಂದು ಕೆರೆ ಇದೆ ಆದರೆ ನಮ್ಮ ಕಡೆ ಹತ್ತು ಮೈಲಿ ಹೋದರೂ ಒಂದು ಕೆರೆ ಇರುವುದಿಲ್ಲ. ಇದಕ್ಕೆ ವಿಶೇಷ ಗಮನ ಕೊಟ್ಟು ಕೆರೆಗಳ ಕೆಲಸ ಜಾಗ್ರತೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ಎಕರೆ ಭೂಮಿಯಲ್ಲಿ ಒಂದು ಬಾವಿ ಇದ್ದರೆ ಹೊಲದ ಬೆಲೆ ಜಾಸ್ತಿಯಾಗುತ್ತದೆ. ಬಾವಿ ತೆಗೆಯಿಸಲು ಹಣದೈವುಳ್ಳವರಿಗೆ ಮಾತ್ರ ಸಿಕ್ಕುತ್ತದೆ. ಬಡವರಿಗೆ ಹಣ ಸಿಕ್ಕುವುದಿಲ್ಲ. ಒಂದು ಬಾವಿಗೆ 3,000 ರೂಪಾಯಿ ಕೊಡುವ ಹಾಗೆ ಪಂಪ್‌ಸೆಟ್ ಕೊಳ್ಳುವುದಕ್ಕೆ ಹಣ ಒದಗಿಸಬೇಕು. ದುಡ್ಡು ಇದ್ದವರು ಬಾವಿ ತೆಗೆಯಿಸುತ್ತಾರೆ. ಬಡವರಿಗೆ ಪಂಪ್‌ಸೆಟ್ ತೆಗೆದುಕೊಳ್ಳುವುದರಿಂದ ಹೆಚ್ಚು ಅನುಕೂಲವಾಗುತ್ತದೆ. ಆದುದರಿಂದ ಪಂಪ್‌ಸೆಟ್ಟಿಗಾಗಿ ಹಣ ಕೊಡಬೇಕೆಂದು ಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಹತ್ತು ಎಕರೆಗೆ ಒಂದು ಬಾವಿ ಇದ್ದರೆ ಚೆನ್ನಾಗಿರುತ್ತದೆ. ವಿಜಾಪೂರ ಜಿಲ್ಲೆಯಲ್ಲಿ ಮೇಲಿಂದ ಮೇಲೆ ಬರಗಾಲ ಬೀಳುತ್ತದೆ. ಬರಗಾಲ ಪರಿಹಾರ ಕೆಲಸವೆಂದು ರಸ್ತೆ ಮಾಡಿಸುತ್ತೀರಿ ಆದರೆ ರಸ್ತೆ ರಿಪೇರಿ ಮಾಡುವುದಿಲ್ಲ. ಜನರು ಕೂಡ ರಸ್ತೆ ಮೇಲೆ ಓಡಾಡುವುದಕ್ಕಾಗುವುದಿಲ್ಲ. ರೋಡ್ ಕೆಲಸದಿಂದ ಏನೂ ಉಪಯೋಗವಾಗುವುದಿಲ್ಲ. ಆದಕಾರಣ ರೋಡ್ ಕೆಲಸ ತೆಗೆದುಕೊಳ್ಳಬೇಡಿ ಎಂದು ನಾನು ಸಲಹೆ ಮಾಡುತ್ತೇನೆ. ರೋಡ್ ಕೆಲಸ ಬಿಟ್ಟು ಒಡ್ಡು ಹಾಕುವುದನ್ನು ತೆಗೆದುಕೊಳ್ಳಬೇಕು ಅಂದರೆ ಅದರಿಂದ ಭೂಮಿಗೆ ಅನುಕೂಲವಾಗುತ್ತದೆ. ಒಡ್ಡು ಹಾಕುವುದರಿಂದ ಹೊಲದಲ್ಲಿ ನೀರು ನಿಂತು ಬೆಳೆ ಜಾಸ್ತಿ ಬರುತ್ತದೆ. ಒಡ್ಡು ಹಾಕುವುದಕ್ಕೆ ಶೇಕಡ 25ರಷ್ಟು ಸಬ್‌ಸೀಡಿ ಕೊಡುವುದು ಒಳ್ಳೆಯದು. ಯಾಕೆಂದರೆ ಈ ಹಣದ ಮೇಲೆ ಬಡ್ಡಿ ಹಾಕಿದರೆ ರೈತನಿಗೆ

ತೊಂದರೆಯಾಗುತ್ತದೆ. ಎರಡು ಮೂರು ವರ್ಷ ಬರಗಾಲ ಬಂದಾಗ್ಗೆ ಹಣ ವಸೂಲ್ಮಾಡದೆ ಬಿಟ್ಟು ಅದರ ಮೇಲೆ ಬಡ್ಡಿ ಹಾಕಿದರೆ ಅಷ್ಟು ಹಣ ಭೂಮಿ ಬೆಲೆ ಕೂಡ ಆಗುವುದಿಲ್ಲ. ಒಡ್ಡಿನ ಕೆಲಸ ತೆಗೆದುಕೊಳ್ಳುವಾಗ್ಗೆ ಆ ಹಣದ ಮೇಲೆ ಬಡ್ಡಿ ತೆಗೆದುಕೊಳ್ಳಬಾರದು ಮತ್ತು ಎಸ್ಟಾಬ್ಲಿಷ್‌ಮೆಂಟ್ ಖರ್ಚು ಅವರ ಮೇಲೆ ಹಾಕಬಾರದು ಎಂದು ಹೇಳುತ್ತೇನೆ.

ತಿಕೋಟಾ-ಹೊನವಾಡದ ನಡುವೆ ವಿಜಾಪೂರ ತಾಲ್ಲೂಕಿನಲ್ಲಿ ಡೋಣಿ ನದಿ ಹರಿಯುತ್ತದೆ. ಇದರಲ್ಲಿಯ ನೀರು ಉಪ್ಪು ಆಗಿರುವುದರಿಂದ ಅಲ್ಲಿಯ ಲಕ್ಷಾವಧಿ ಎಕರೆ ಭೂಮಿ ಉಪ್ಪು ಆಗಿ ಬಹಳ ನುಕ್ಸಾನವಾಗುತ್ತಿದೆ. ಉಪ್ಪುನೀರಿನಿಂದ ಗೋಧಿ ಹತ್ತಿ ಬೆಳೆ ನಾಶವಾಗುತ್ತದೆ. ಈ ವಿಚಾರ ವನ್ನು ಮುಖ್ಯಮಂತ್ರಿಗಳು ಕಂದಾಯ ಮಂತ್ರಿಗಳು ಬಂದಾಗ್ಗೆ ಹೇಳಿದ್ದೇವೆ. ಡೋಣಿ ನದಿಯ ನೀರು ಹರಿದುಹೋಗುವ ಬಗ್ಗೆ ಬ್ರಿಡ್ಜ್ ಸ್ವಲ್ಪ ಎತ್ತರದ ಮೇಲೆ ಕಟ್ಟಬೇಕು.

ವಿಜಾಪೂರ ತಾಲ್ಲೂಕಿನಲ್ಲಿ ಕೆರೆ ಬಾವಿ ಕೆಲಸ ಮಾಡಿದರೆ ಅನುಕೂಲವಾಗುತ್ತದೆ. ಬಾಗೇವಾಡಿ ತಾಲ್ಲೂಕಿನಲ್ಲಿ ಕೆರೆಗಳ ಬಗ್ಗೆ ವಿಚಾರ ಮಾಡಬೇಕು. ಬಾಗೇವಾಡಿ ತಾಲ್ಲೂಕಿನಲ್ಲಿ ಆರ್ಯಶಂಕರ ಎಂಬ ಒಂದು ಕೆರೆ ಮಂಜೂರ್ಮಾಡಲಾಗಿದೆ. ಈ ಕೆರೆ ನೀರಿನಿಂದ ಉಪ್ಪು ಭೂಮಿ ಅಂದರೆ ಸವಳು ಭೂಮಿ ಯಾಗುತ್ತಿದೆ. ಇದರಿಂದ ಭೂಮಿ ಕೆಡುತ್ತಿದೆ. ಉತ್ತಮ ತಜ್ಞರನ್ನು ಕಳಿಸಿ ಇದರ ಬಗ್ಗೆ ಸಂಶೋ ಧನೆ ಮಾಡಿಸಬೇಕು. ಈ ಕೆರೆಯ ಸಂಶೋಧನೆ ಮಾಡಿದರೆ ನೂರಾರು ಎಕರೆ ಭೂಮಿಗೆ ಉಪ ಯೋಗವಾಗುತ್ತದೆ. ವಿಜಾಪೂರ ಬಗ್ಗೆ ವಿಶೇಷ ಲಕ್ಷ ಕೊಟ್ಟು ಶಾಶ್ವತವಾಗಿ ಬರಗಾಲ ಪರಿಹಾರ ವಾಗುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವರ್ಷ ಮಳೆಯೇ ಇಲ್ಲ. ಮುಂಗಾರಿ ಬೆಳೆ ಹೋಗಿಬಿಟ್ಟಿದೆ. ಇನ್ನು ಹದಿನೈದು ದಿನಗಳಲ್ಲಿ ಮಳೆ ಬಾರದೇ ಹೋದರೆ ಮುಂದಿನ ಬೆಳೆ ಸಹ ಹೋಗಿಬಿಡುತ್ತದೆ. ಆದುದರಿಂದ ಕರೆ ಬಾವಿಗಳ ಕೆಲಸದ ಬಗ್ಗೆ ವಿಶೇಷ ಗಮನ ಕೊಡಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಬರಗಾಲದ ಭವಣೆಗೆ ಸಿಕ್ಕು ಭಂಗ ಪಡ ತಕ್ಕಂಥ ಜನರಿಗೆ ಶಾಶ್ವತವಾದ ಪರಿಹಾರವೇನಾದರೂ ಮಾಡಬೇಕೆಂದು ಏಳು ವರ್ಷಗಳ ಕಾಲ ಒಂದೇ ಸಮನೇ ಈ ಸಭೆಯಲ್ಲಿ ಸರಕಾರಕ್ಕೆ ಹೇಳುತ್ತಲೇ ಬಂದಿದ್ದೇವೆ. ಒಂದು, ಎರಡು, ಮೂರನೇ ಪಂಚವಾರ್ಷಿಕ ಯೋಜನೆ ವಿಫಲವಾದ ಮೇಲೆ 1963ನೇ ಸಾಲಿನಲ್ಲಿ ದೇಶ ಬರಗಾಲಕ್ಕೆ ಈಡಾಗಿ ಜನರು ಅನ್ನ ನೀರು ಬಟ್ಟೆ ಇಲ್ಲದೆ ದನಗಳಿಗೆ ಮೇವು ಇಲ್ಲದೆ ಕಷ್ಟಪಡುತ್ತಿದ್ದಾರೆ. ಇದನ್ನು ಪರಿಹರಿ ಸುವುದಕ್ಕೆ ಸರಕಾರ ಸರಿಯಾದ ಕ್ರಮ ತೆಗೆದುಕೊಂಡಿಲ್ಲ. ಜನರಿಗೆ ಅನ್ನ ನೀರು ಒದಗಿಸಲು ಅಸಮರ್ಥವಾದ ಸರಕಾರ ಅಧಿಕಾರದಲ್ಲಿರಲು ಲಾಯಖ್ ಅಲ್ಲ ಎಂದು ಯಾರು 1945ರಲ್ಲಿ ಹೇಳುತ್ತಿ ದ್ದರೋ ಅವರೇ ಇಂದು ಅಧಿಕಾರ ಸ್ಥಾನದಲ್ಲಿ ಇದ್ದಾರೆ. ಯಾರು ಕೂಗಾಟ ಮಾಡಿದ್ದರೋ ಅವರೇ ಇಂದು ಅಧಿಕಾರದಲ್ಲಿರುವುದರಿಂದ ಇದಕ್ಕೆ ಏನು ಹೇಳುತ್ತಾರೆ ? ನೀವು ಏನು ಮಾಡಿದ್ದೀರಿ ಹೇಳು ತ್ತೀರಾ ? ಜವಾಬ್ದಾರೀ ಸರಕಾರ ರಾಜೀನಾಮೆ ಕೊಡಬೇಕೆಂದು ನೀವೇ ಹೇಳುತ್ತೀರಲ್ಲವೇ ? ನೀವು ಅಧಿಕಾರಕ್ಕೆ ಬಂದಮೇಲೆ ಏನುಮಾಡಿದ್ದೀರಿ ಯೋಚನೆ ಮಾಡಬೇಕು. ಚಿತ್ರದುರ್ಗ, ಕೋಲಾರ ಮುಂತಾದ ಕೆಲವು ತಾಲ್ಲೂಕುಗಳಲ್ಲಿ ಜನರು ಸೊಪ್ಪು ತಿಂದು ಜೀವನ ಮಾಡುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ತ್ಯಾಗ ಮಾಡಿದವರು ಇದೇ ಜನ. ದೇಶಕ್ಕೆ ಸ್ವಾತಂತ್ರ್ಯ ಬಂದರೂ ಕೂಡ ಅದರ ಫಲ ಅವರೆಗೆ ದೊರೆತಿದೆಯೇ ? ಯಾವ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡಬೇಕಾ ಗಿತ್ತೋ ಅದನ್ನು ಇಂದು ನೀವು ಮರೆತುಬಿಟ್ಟಿದ್ದೀರಿ ಎಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಮೂರು ಯೋಜನೆಗಳು ವಿಫಲವಾಗಿದೆ. ಈಗ ನಾವು ಬರಗಾಲದ ಅಂಚಿನಲ್ಲಿದ್ದೇವೆ. ನಮ್ಮ ಜಿಲ್ಲೆ ಯಲ್ಲಿ ಮಳೆಯಾಗಿಲ್ಲ. ಒಂದೆರಡು ತಾಲ್ಲೂಕಿನಲ್ಲಿ ಸ್ವಲ್ಪ ಮಳೆಯಾಗಿರಬಹುದು. ನನ್ನ ತಾಲ್ಲೂಕಿ ನಲ್ಲಿ ಕುಡಿಯಲು ನೀರು ಇಲ್ಲ. ಜನ ಕೆಲಸಕ್ಕಾಗಿ ಹೊರಗಡೆ ಹೋಗುತ್ತಿದ್ದಾರೆ.

ಇದನ್ನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಸೂತ್ರ ಕಾರ್ಯಕ್ರಮ ಕೈಕೊಳ್ಳ ಬೇಕೆಂದು ಅವರನ್ನು ಕೇಳಿದ್ದೇನೆ. ಈ ದಿಕ್ಕಿನಲ್ಲಿ ಏನು ಮಾಡುತ್ತಾರೋ ಕಾದು ನೋಡೋಣ. ಈಗ ಪ್ರತಿ ಸಾರಿಯೂ ಬರತಕ್ಕ ಮತ್ತು ಆಗಾಗ್ಗೆ ಜನತೆಯನ್ನು ಹೆದರಿಸತಕ್ಕ ಬರಗಾಲವನ್ನು ತಡೆ ಗಟ್ಟುವುದಕ್ಕೆ ಶಾಶ್ವತವಾದ ಪರಿಹಾರ ಕ್ರಮವನ್ನು ಕೈಕೊಳ್ಳಬೇಕಾದರೆ ಸರ್ಕಾರದವರು ಹಾಕಿರ ತಕ್ಕ ಪ್ರತಿಯೊಂದು ಯೋಜನೆಯೂ ಅದು ಎಷ್ಟು ಮಟ್ಟಿಗೆ ಫಲಕಾರಿಯಾಗಿದೆ ಎಂಬುದನ್ನು ಸ್ವಲ್ಪ ತುಲನೆ ಮಾಡಿ ನೋಡಿದರೆ ಎಲ್ಲವೂ ವಿಫಲವಾಗಿದೆ, ಆದಕ್ಕೆ ಸರ್ಕಾರ ಈ ಸಂದರ್ಭವನ್ನು ಉಪ ಯೋಗಿಸಿಕೊಂಡು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಸೇರಿ ಎಲ್ಲಿ ಕ್ಷಾಮ ಬರು ತ್ತದೆ, ಎಲ್ಲಿ ಜನ ಕಷ್ಟಕ್ಕೆ ಈಡಾಗಿದ್ದಾರೆ, ಹುಲ್ಲು ಸಿಕ್ಕವುದಿಲ್ಲ, ಎಲ್ಲಿ ಜನತೆಗೆ ಏನೂ ಕೆಲಸಕಾರ್ಯ ಗಳು ಸಿಕ್ಕುವುದಿಲ್ಲ ಜೀವನ ಮಾಡುವುದಕ್ಕೆ ಅದನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಕೇಳುತ್ತಾ ಇದ್ದೇನೆ. ಇವತ್ತು ಬಂದಿರತಕ್ಕ ಬರಗಾಲಕ್ಕೂ ಹಿಂದೆ ಹತ್ತಾರು ಅಥವಾ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

50 ವರ್ಷಗಳ ಹಿಂದೆ ಬರುತ್ತಾ ಇದ್ದ ಬರಗಾಲಕ್ಕೂ ವ್ಯತ್ಯಾಸವಿದೆ. ಇವತ್ತಿನ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದಕ್ಕೆ ರೈಲು, ಮೋಟಾರು, ಲಾರಿ ಸೌಕರ್ಯಗಳು ಇವೆ, ಹಿಂದೆ ಈ ಸೌಕರ್ಯ ಇರಲಿಲ್ಲ. ಇವತ್ತಿನ ದಿವಸ ಹಿಂದೂಸ್ತಾನದಲ್ಲಿ ಬರಗಾಲ ಬಂದರೆ ಅಮೇರಿಕಾದಿಂದ, ಇಂಗ್ಲೆಂಡಿನಿಂದ. ಆಸ್ಟ್ರೇಲಿಯಾದಿಂದ ಸಹಾಯ ಪಡೆಯಬಹುದು ಆದರೆ ಬರಗಾಲ ಬಂದಾಗಲೆಲ್ಲಾ ಈ ರೀತಿ ಪರದೇಶಗಳಿಗೆ ಕೈ ಒಡ್ಡಿದರೆ ಅಥವಾ ಬಿಕ್ಷೆಬೇಡಿ ಅನ್ನ ಹಾಕುತ್ತೇವೆ ಎನ್ನುವುದು ಸರಿಯಲ್ಲ. ಅದಕ್ಕೋಸ್ಕರವೇ ಇವತ್ತಿನ ದಿವಸ ನಮ್ಮಲ್ಲಿರತಕ್ಕ ಎಲ್ಲಾ ಅನುಕೂಲಗಳನ್ನೂ ಉಪಯೋಗಿಸಿಕೊಂಡು ಬರಗಾಲ ಬರದ ರೀತಿಯಲ್ಲಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಹಿಂದೆ ಬಂದಂಥಾ ಬರಗಾಲಕ್ಕೂ ಈಗಿನ ಬರಗಾಲಕ್ಕೂ ಬಹಳ ವ್ಯತ್ಯಾಸ ಇದೆ. ಇವತ್ತು ಜನರನ್ನು ಸಾಯುವುದಕ್ಕೆ ಬಿಡದೇ ಇರಬಹುದು. ಅಭಾವ ಪರಿಸ್ಥಿತಿ ಇದೆ ಎಂಬ ಕೂಗನ್ನು ನಿಲ್ಲಿಸಬಹುದು. ಆದರೆ ಅದು ಶಾಶ್ವತವಾದ ಪರಿಹಾರ ಕಾರ್ಯವಾಗುವುದಿಲ್ಲ ಅಥವಾ ಪರಿಹಾರ ಕಂಡುಹಿಡಿಯುತಕ್ಕ ಮಾರ್ಗವಲ್ಲ, ಶಾಶ್ವತವಾದ ಮತ್ತು ಭದ್ರವಾದ ಬುನಾದಿಯ ಮೇಲೆ ಬರಗಾಲವನ್ನು ತಡೆಗಟ್ಟಲು ಪ್ರಯತ್ನ ಮಾಡಬೇಕೆಂದು ಸರ್ಕಾರದವರು ಬರಗಾಲವನ್ನು ತಡೆಗಟ್ಟಬೇಕಾದರೆ ಮೊದಲು ಮಾಡಬೇಕಾದ ಕೆಲಸವೆಂದರೆ ಮೊದಲು ಯಾವುದು ತಕ್ಷಣ ಪ್ರತಿಫಲವನ್ನು ಕೊಡುತ್ತದೆ, ಅತಿ ಶೀಘ್ರವಾಗಿ ಫಲ ಕೊಡುತ್ತದೆ ಅಂತಹ ಸಣ್ಣ ನೀರಾವರೀ ಕೆಲಸಗಳಿಗೆ ಗಮನ ಕೊಡಬೇಕು. ಇವತ್ತು ಸರ್ಕಾರ ತೆಗೆದುಕೊಂಡಿರತಕ್ಕ ಮುನ್ನೆಚ್ಚರಿಕೆ ಕ್ರಮ ಸಾಲದು ಎಂದು ಹೇಳುತ್ತಾ ಇದ್ದೇನೆ. ತಾಲ್ಲೂಕು ಬೋರ್ಡುಗಳಿಗೆ ಹಣ ಹಂಚಿ ಬಾವಿಗಳನ್ನು ತೆಗೆಸುತ್ತೇವೆ ಎಂದು ಹೇಳುತ್ತೀರಿ ಅದು ಸಾಲದು. ಕಾಂಟೂರ್ ಬಂಡಿಂಗ್ ಕಾರ್ಯಕ್ರಮ ಸರಿಯಾಗಿಲ್ಲ 40 ಸಾವಿರ ರೂಪಾಯಿ ಅಲ್ಲ 10 ಲಕ್ಷ ರೂಪಾಯಿ ಕೊಟ್ಟರೂ ಕೂಡ ಯಾವ ತಾಲ್ಲೂಕಿನಲ್ಲಿ ಎಷ್ಟು ಸಾವಿರ ಎಕರೆ ಕಾಂಟೂರ್ ಬಂಡಿಂಗ್ ಮಾಡಿದ್ದೀರಿ ಎಂದು ಪ್ರಶ್ನೆ ಮಾಡುತಾ ಇದ್ದೇನೆ. ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್, ಮೈನರ್ ಇರಿಗೇಷನ್, ಮತ್ತು ಕಾಂಟೂರ್ ಬಂಡಿಂಗ್, ಇಂಪ್ರೂವ್ಡ್ ಸೀಡ್ಸ್, ಸಾಯಿಲ್ ಟೆಸ್ಟಿಂಗ್, ಫರ್ಟಿಲೈಸರ್ಸ್ ಈ ರೀತಿ ಏನೇನು ಹೇಳುತ್ತೀರಿ ಅಥನ್ನೆಲ್ಲಾ ಮಾಡಬೇಕೆಂದು ಇನ್‌ಸೆಂಟೀವ್, ಬೆಳೆದಂತಹ ಆಹಾರ ಪದಾರ್ಥಕ್ಕೆ ಸರಿಯಾದ ಬೆಲೆ ನಿಗದಿ ಮಾಡಿ ಕೊಟ್ಟಿಲ್ಲ, ಇರತಕ್ಕ ಭೂಮಿಯನ್ನು ಬಗರ್ ಹುಕುಂನಲ್ಲಿ ಎಷ್ಟೋ ಕಡೆ ವ್ಯವಸಾಯ ಮಾಡುತ್ತಾ ಇದ್ದಾರೆ. ಅವರಿಗೆ ಸರಿಯಾಗಿ ಜಮೀನು ಹಂಚಿಕೆ ಮಾಡಿಲ್ಲ. ಎಲ್ಲಿ ಸರಿಯಾಗಿ ಬೆಳೆ ಬೆಳೆಯುತ್ತಾ ಇದ್ದಾರೆ. ಅವನಿಗೆ ಯಾವ ರೀತಿಯಲ್ಲೂ ಪ್ರೋತ್ಸಾಹವಿಲ್ಲ ಎಂಬುದು ಸ್ಪಷ್ಟವಾಗಿದೆ. ಎಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಶೀಘ್ರವಾಗಿ ಕೊಟ್ಟು ಸಹಾಯ ಮಾಡಿದ್ದೀರಿ ? ಯಾರು ಇವತ್ತಿನ ದಿವಸ ಬರಗಾಲದ ರೊಚ್ಚಿಗೆ ಸಿಕ್ಕಿಕೊಂಡಿದ್ದಾರೆ ಅವರಿಗೆ ಸಹಾಯ ಮಾಡದೇ ಹೀಗೆ ಭಾಷಣ, ಭೂಷಣ ಮಾಡುವುದರಿಂದ ಏನೇನೂ ಪ್ರಯೋಜನವಾಗವುದಿಲ್ಲ ಎಂದು ಹೇಳುತ್ತೇನೆ. ನನ್ನ ತಾಲ್ಲೂಕಿಗೆ 170 ಪಂಪು ನೆಟ್ಟುಗಳು ಬಂದಿವೆ, 250 ಸೆಟ್ಟುಗಳು ತಯಾರಾಗಿವೆ. ಆ 170 ಸೆಟ್ಟುಗಳಿಗೆ ತಮ್ಮಲ್ಲಿ ಪವರ್ ಕೊಡುವುದಕ್ಕೆ ವೈರ್ ಇಲ್ಲ ಕಂಟ್ರಾಕ್ಟರ್ಸ್ ಇಲ್ಲ, ಟ್ರಾನ್ಸ್‌ಫಾರ್ಮರ್ಸ್ ಇಲ್ಲ, ಪೋಲ್ಸ್ ಇಲ್ಲ, ಒಂದು ವಾರದಿಂದ ಒಂದೇ ಸಮನೆ ಹೇಳುತ್ತಾ ಇದ್ದೇನೆ ಒಂದು ಸಾವಿರ ಎಕರೆ ರಾಗಿ ಮತ್ತು ಬತ್ತ ಅಲ್ಲಿ ಒಣಗಿ ಹೋಗುತ್ತಾ ಇದೆ ಒಂದು ಕಾಳೂ ಸಿಕ್ಕುವುದಿಲ್ಲ. ಒಂದು ಸಾವಿರ ಎಕರೆ ಎಂದರೆ 6,000 ಪಲ್ಲ ದವಸ ಇವತ್ತಿನ ದಿವಸ ನಮ್ಮ ಕಣ್ಣೆದುರಿಗೆ ಹಾಳಾಗುತ್ತಾ ಇದೆ. ಅದಕ್ಕೆ ಗಮನ ಕೊಡದಿದ್ದರೆ ಯಾವ ಒಂದು ಬರಗಾಲ ನೀವು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೀರಿ ಎಂದು ನಾನು ತಮ್ಮನ್ನು ಕೇಳಬೇಕಾಗುತ್ತದೆ. ಏಕೆ ಹೇಳುತ್ತೇನೆ ಎಂದರೆ ನಾವು ಇವತ್ತು ಮೂರು ಮೈಲಿಯಿಂದ ಕುಡಿಯುವುದಕ್ಕೆ ನೀರು ತರುತ್ತಾ ಇದ್ದೇವೆ ಸಿರಾ ಟೌನ್‌ನಲ್ಲಿ 6,000 ಜನಸಂಖ್ಯೆ ಇದೆ ಕುಡಿಯುವುದಕ್ಕೆ ನೀರಿಲ್ಲ, 4–5 ಗ್ರಾಮಗಳನ್ನು ಬಿಟ್ಟರೆ ಬಾಕಿ ಯಾವ ಗ್ರಾಮಗಳಲ್ಲೂ ಕೂಡ ಮಳೆಯಾಗಿಲ್ಲ. 1,500 ಪಲ್ಲಾ ಶೇಂಗಾ ಬೀಜ ಭೂಮಿಯಲ್ಲಿ ಹಾಕಿದ್ದರು ಅದು ಭೂಮಿಯಲ್ಲಿದೆಯೋ ಹೊರತು ಮೇಲಕ್ಕೆ ಬಂದಿಲ್ಲ ಎರಡು ಹೋಬಳಿಯಲ್ಲಿ ಮುಕ್ಕಾಲು ಭಾಗ ಗೊಬ್ಬರದ ಗುಂಡಿ ಕಿತ್ತಿಲ್ಲ ಎಂದ ಮೇಲೆ ತಾವು ಯೋಚನೆ ಮಾಡಬೇಕು ಇವತ್ತಿನ ದಿವಸ 1945ನೇ ಇಸವಿಗಿಂತಲೂ ಭೀಕರವಾದ ಪರಿಸ್ಥಿತಿಯನ್ನು 1963ರಲ್ಲಿ ನಾವು ಎದುರಿಸ ಬೇಕಾಗಿದೆ. 1945 ರಲ್ಲಿ ಕಾಂಗ್ರೆಸ್ ಸಂಸ್ಥೆ ಸರ್ವಸ್ವವನ್ನೂ ದಾನವಾಗಿ ಕೊಟ್ಟು, ಕೆಲಸ ಮಾಡಿ ಊರು ಊರುಗಳಿಗೆ ಹೋಗಿ ಗ್ರೂಯಲ್ ಸೆಂಟರ್ಸನ್ನು ತೆಗೆದು ಜನತೆಗೆ ಆಹಾರವನ್ನು ಒದಗಿಸಲು ಪ್ರಯತ್ನ ಮಾಡಿತು. ಇವತ್ತು ಜನತಾ ಸರ್ಕಾರ ಇದೆ, ಜನರಿಗಾಗಿ ಈ ಸರ್ಕಾರ ಆ ದಿಕ್ಕಿನಲ್ಲಿ ಸರಿಯಾದ ಕಾರ್ಯಕ್ರಮ ಕೈಕೊಂಡಿಲ್ಲ ಎಂದರೆ ನಿಜವಾಗಿಯೂ ಇದ ನಾಚಿಕೆಗೇಡಿನ ವಿಷಯ, ಆದ್ದರಿಂದ ಈ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ಹೇಳುತ್ತಾ ಇದ್ದೇನೆ. ಇವತ್ತಿನದಿವಸ ನೀವು ಭೂಮಿಯಲ್ಲಿ ಬಿದ್ದ ನೀರನ್ನು ಉಪಯೋಗಿಸುವುದಕ್ಕೆ, ದೊಡ್ಡ ದೊಡ್ಡ ನದಿಗಳ

ನೀರನ್ನು ಉಪಯೋಗಿಸುವುದಕ್ಕೆ ಯಾವ ಯಾವ ಕಾರ್ಯಕ್ರಮಗಳನ್ನು ಕೈಕೊಂಡಿದ್ದೀರಿ ಎಂಬುದನ್ನು ಹೇಳಬಲ್ಲಿರಾ? ಕೆರೆ ಏರಿ ಕಟ್ಟುವುದಕ್ಕೆ ಸಾಧ್ಯವಾಗಿಲ್ಲ. ಬಾವಿಗಳನ್ನು ತೆಗೆಯುವುದಕ್ಕೆ ಸಾಧ್ಯವಾಗಿಲ್ಲ, ನದಿ ನೀರಿನಿಂದ ಸಾವಿರಾರು ಎಕರೆ, ಲಕ್ಷಾಂತರ ಎಕರೆ ಭೂಮಿಯನ್ನು ಸಾಗುಮಾಡುವುದಕ್ಕೆ ಬೇಕಾದ ಅನುಕೂಲಗಳನ್ನು ಮಾಡಿಕೊಟ್ಟಿಲ್ಲ. ಇವತ್ತಿನ ದಿವಸ ಮೈಸೂರು ಸಂಸ್ಥಾನದಲ್ಲಿ ಯಾವ ಜಿಲ್ಲೆಯಲ್ಲಿ ಕ್ಷಾಮ ಪದೇ ಪದೇ ಬರುತ್ತಾ ಇದೆ ಅಲ್ಲಿ ಅದನ್ನು ನಿವಾರಣೆ ಮಾಡುವುದಕ್ಕೆ ಯಾವ ಪ್ರಯತ್ನ ನಡೆದಿದೆ ಎಂದು ಕೇಳುತ್ತೇನೆ. ಒಂದು ಉದಾಹರಣೆ ಹೇಳುವುದಾದರೆ ಗೋರೂರು ಅಣೆಕಟ್ಟಿನಿಂದ ನೀರು ತರುವುದಾದರೆ ತುರುವೇಕೆರೆ, ಕುಣಿಗಲ್ ಮಾರ್ಗವಾಗಿ 5 ಪ್ರದೇಶಗಳಿಗೆ ನೀರನ್ನು ಉಣಿಸುವುದಕ್ಕೆ ಸಾಧ್ಯವಿದೆ. ಶ್ರೀಮಾನ್ ಕೆ. ಹನುಮಂತಯ್ಯನವರು, ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳಾದ ಪಂಡಿತ ಜವಹರಲಾಲ್ ನೆಹರು ಅವರು ಆ ಪ್ರದೇಶದಲ್ಲ ಸಂಚಾರ ಮಾಡಿದಾಗ ಈ ವಿಚಾರವನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಬೇಕಾದ ಅಗತ್ಯವಿದೆ, ಇದು ಬಹಳ ಮುಖ್ಯವಾದ ವಿಷಯ ಎಂದು ಹೇಳಿ ಒಪ್ಪಿಕೊಂಡಿದ್ದಾರೆ. ಇವತ್ತಿನ ದಿವಸ ಆ ದಿಕ್ಕಿನಲ್ಲಿ ಯಾವ ಕಾರ್ಯ ಕ್ರಮವನ್ನೂ ತಗೆದುಕೊಂಡಿಲ್ಲ. ಗೊರೂರು ಅಣೆಕಟ್ಟು ಕಟ್ಟುವುದಕ್ಕೆ ತೊಂಚವಂಚ ಮಾಡುತ್ತಾ ಇದ್ದೀರಿ. ಸಿರಾ, ಪಾವುಗಡ, ಕುಣಿಗಲ್ ಈ ಪ್ರದೇಶಗಳಿಗೆಲ್ಲಾ ಅಲ್ಲಿಂದ ನೀರು ಬರುವುದಕ್ಕೆ ಅವಕಾಶವಿದೆ. ಸಣ್ಣ ಸಣ್ಣ ನಿರಾವರೀ ಯೋಜನೆಗಳು ಯಾವುವು ಇವೆ ಅವನ್ನು ಸರ್ವೇ ಮಾಡಿ 4 ಅಥವಾ 5 ವರ್ಷದ ಒಂದು ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು ಅವನ್ನು ಪೂರೈಸಿದ್ದರೆ ಬಹಳ ಕಷ್ಟವಾಗುತ್ತದೆ, ಅದಕ್ಕಾಗಿ ಸುಮಾರು 60 ಲಕ್ಷ ರೂಪಾಯಿ ಖರ್ಚಾಗಬಹುದು, ಅಲ್ಲಿ ತರೀ ಜಮೀನು 15 ಸಾವಿರ ಎಕರೆ ಭೂಮಿ ಇದೆ. ತುಮಕೂರು ಜಿಲ್ಲೆಯಲ್ಲಿ ಒಂದೂವರೆ ಕೋಟಿ ರೂಪಾಯಿ ಹಣ ಖರ್ಚು ಮಾಡುವುದರಿಂದ 35 ಸಾವಿರದಿಂದ 44 ಸಾವಿರ ಎಕರೆ ಭೂಮಿ ಅಚ್ಚುಕಟ್ಟಿಗೆ ಬರುತ್ತದೆ. ಬರಗಾಲ ತುಮಕೂರಿಗಾಗಲೀ, ಸಿರಾಕ್ಕಾಗಲೀ, ಪಾವುಗಡಕ್ಕಾಗಲೀ, ಮಧುಗಿರಿಗಾಗಲೀ ಬರುವುದೇ ಇಲ್ಲ ಎಂದು ನಾನು ಈ ದಿವಸ ತಮ್ಮಲ್ಲಿ ನಿವೇದನೆ ಮಾಡುತ್ತೇನೆ. ನಮ್ಮಲ್ಲಿ ಹರಿಯತಕ್ಕ ನೀರು ಇವತ್ತು ಸಮುದ್ರಕ್ಕೆ ಹೋಗಿ ಸೇರುತ್ತಾ ಇದೆ. ತಿರುಕನ ಪಾಳ್ಯದ ಹತ್ತಿರ ಕೆರೆ ಕಟ್ಟುವುದಾದರೆ 16 ಲಕ್ಷ ರೂಪಾಯಿ ಖರ್ಚಾಗುತ್ತದೆ ಅದರಿಂದ ಕೊನೇ ಪಕ್ಷ 5 ಸಾವಿರ ಎಕರೆ ಭೂಮಿ ಸಾಗಿಗೆ ಸಿಕ್ಕಬಹುದು.

[MR. DEPUTY SPEAKER in the Chair.]

ಹೀಗೆ ಆ 2,500 ಯೂನಿಟ್ ನೀರು ನಮ್ಮ ತುಮಕೂರು ಜಿಲ್ಲೆಯಲ್ಲಿ ಬಿದ್ದರೂ ಅದೆಲ್ಲವೂ ಹರಿದು ಆಂಧ್ರಕ್ಕೆ ಹೋಗುತ್ತಿದೆ. ಈ ನೀರನ್ನು ತಡೆಯಲು ಆ ತಿರುಗಟ್ಟಿ ಹತ್ತಿರ ಒಂದು ಅಣೆಕಟ್ಟನ್ನು ಹಾಕಬೇಕೆಂದರೆ ಆಂಧ್ರದವರಿಗೂ ನಮಗೂ ಆಗಿರತಕ್ಕ ಅಗ್ರೀಮೆಂಟಿಗೆ ಇದರಿಂದ ಲೋಪ ಬರುತ್ತದೆ ಎಂತ ಹೇಳುತ್ತಿದ್ದಾರೆ. ಸರ್ಕಾರದವರು ಇದನ್ನು ದಯವಿಟ್ಟು ವಿಚಾರ ಮಾಡಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಬೀಳತಕ್ಕ ನೀರನ್ನು ನಾವು-ಉಪಯೋಗಿಸಬಾರದು, ನಮ್ಮ ರಾಜ್ಯದ ಕಲ್ಯಾಣವನ್ನು ನಾವು ಕಟ್ಟಕೂಡದು, ನಮ್ಮ ರಾಜ್ಯದ ಪಾಡೇನಾದರೂ ಆಗಲಿ ಬೇರೆ ರಾಜ್ಯದವರು ಮಾತ್ರ ಸುಖವಾಗಿರಬೇಕೆಂದು ಹೇಳತಕ್ಕ ನೀತಿ ಅದು ಯಾವುದು ಎಂದು ಕೇಳುತ್ತೇನೆ? ಈ ವಿಚಾರದ ಕಡೆಗೆ ಸರ್ಕಾರದವರು ಕೂಡಲೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

3-00 P.M.

ಇನ್ನು ಕೇವಲ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಕಾಮಗಟ್ಟಿ ಹತ್ತಿರ ಒಂದು ಅಣೆಕಟ್ಟನ್ನು ಕಟ್ಟಲು ಅವಕಾಶವಿದೆ. ಅಲ್ಲಿ ಸೆಮಿ ಡ್ರೈಕ್ರಾಪ್‌ಗಳನ್ನು ಬೆಳೆಯಲು ಅಲ್ಲಿ 2,000-2,500 ಎಕರೆ ಜಮೀನು ದೊರೆಯುತ್ತೆ. ಆದರೆ ಈ ದಿವಸ ನಮ್ಮ ತುಮಕೂರು ಜಿಲ್ಲೆಯಲ್ಲಿ ಕಟ್ಟಿರತಕ್ಕ ಗಾಯತ್ರಿ ಪ್ರಾಜೆಕ್ಟಿನಿಂದ ನಮ್ಮ ಜಿಲ್ಲೆಗೆ ನಾಲ್ಕಾಣೆ ಪ್ರಯೋಜನ ಕೂಡ ಆಗುತ್ತಿಲ್ಲ. ಈಗಲೂ ಚೀಫ್ ಇಂಜಿನಿಯರ್ ಅವರೂ ಮತ್ತು ಸರ್ಕಾರ ಈ ವಿಚಾರದಲ್ಲಿ ಮತ್ತೊಮ್ಮೆ ಪರಿಶೀಲನೆ ಮಾಡಿದ್ದಾದರೆ ಅಲ್ಲಿ ಇನ್ನೂ 1,500 ಎಕರೆಗೆ ನೀರನ್ನು ಕೊಡಲು ಸಾಧ್ಯವಿದೆ. ಈಗ ಆ ಪ್ರಾಜೆಕ್ಟಿನಲ್ಲಿ 19 ಅಡಿ ನೀರು ಡೆಡ್‌ಲೆವಲ್‌ನಲ್ಲಿ ನಿಂತಿರುತ್ತದೆ. ಆ ನೀರಿಗೆ ಪಂಪ್ ಹಾಕಿಸಿ ಕೊಟ್ಟರೆ ನಮಗೆ ಅಲ್ಲಿ 800 ಎಕರೆ ಸಾಗುವಳಿ ಮಾಡಲು ಅವಕಾಶವಾಗುತ್ತದೆ. ಇದಕ್ಕೆ ಸರ್ಕಾರದವರು ಸ್ವಲ್ಪ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಆ ಗಾಮನಗುಡ್ಡದ ಹತ್ತಿರ ಸರ್ವೆ ಮಾಡಿಸಿ ಅಲ್ಲಿ ಅನೇಕ ಕಾಂಗಾರಿಗಳನ್ನು ಕೈಗೊಳ್ಳುವುದಕ್ಕೆ ಅವಕಾಶವಿದ್ದಾಗ್ಯೂ ನಮ್ಮ ಸರ್ಕಾರ ಒಂದನ್ನೂ ಸಹ ಇಲ್ಲಿಯವರೆಗೆ ಕೈಗೊಂಡಿಲ್ಲ. ಈ ಕೆಲಸಗಳನ್ನು ಸರ್ಕಾರದವರು ಕೈಗೊಳ್ಳದೆ ಹೋದರೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಆ ಆಂಧ್ರಕ್ಕೆ ಸುತ್ತಲೂ ಇರುವಂಥಾ ಕೋಲಾರ-ಚಿತ್ರದುರ್ಗ-ಬಳ್ಳಾರಿ-ತುಮಕೂರು ಹೀಗೆ ಚಂದ್ರಾಕಾರವಾಗಿರತಕ್ಕ ಈ ಜಿಲ್ಲೆಗಳಲ್ಲಿ 4 ಅಣೆ-6 ಅಣೆ ಬೆಳೆ ತೆಗೆದುಕೊಳ್ಳುವುದಕ್ಕೂ ಕೂಡ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಆ ಪ್ರಾಂತ್ಯದ ಜನರು ವರ್ಷ ವರ್ಷ ಅನೇಕ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಕೇವಲ ದೊಡ್ಡ ದೊಡ್ಡ ಪ್ರಾಜೆಕ್ಟುಗಳ ಕಡೆಗೇ ಸರ್ಕಾರ ಗಮನ ಕೊಟ್ಟರೆ ಸಾಲದು ಎಂದು ಹೇಳಬೇಕಾಗಿದೆ. ಆ ಆಸಕ್ತಿಯನ್ನು ಈ ಮಾಡಿಯಂ ಕೆರೆಗಳ ಕಡೆಗೂ ಬಳಿಸಬೇಕೆಂದು ಹೇಳುತ್ತೇನೆ. ಕೇವಲ ಒಂದು ಕಡೆಗೆ ಅನುಕೂಲ ಮಾಡಿ ಇನ್ನೊಂದು ಭಾಗವನ್ನು ಕೈಬಿಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಸರ್ಕಾರದವರು ಯಾವ ಕೆಲಸವನ್ನೇ ಕೈಗೊಳ್ಳಲಿ—ಯಾವ ಭಾಗದಲ್ಲಿ ಹೆಚ್ಚಿಗೆ ನೀರಿನ ಆಶ್ರಯವಿದೆ—ಯಾವ ಭಾಗದಲ್ಲಿ ನೀರಿನ ಆಶ್ರಯವಿಲ್ಲ—ಜನರಿಗೆ ಹೆಚ್ಚಿನ ತೊಂದರೆ ಇದೆ ಎಂಬುದನ್ನೆಲ್ಲಾ ಪರಿಶೀಲನೆ ಮಾಡಿ ಕೆಲಸಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಈ ದಿವಸ ಇಷ್ಟಕ್ಕೆಲ್ಲ ಮುಖ್ಯ ಕಾರಣ ಸರ್ಕಾರದವರು ಈ ವಿಚಾರದಲ್ಲಿ ಅನುಸರಿಸುತ್ತಿರುವ ಅವರ ನೀತಿಯೇ ಕಾರಣವೆಂದು ಹೇಳದೆ ವಿಧಿಯಿಲ್ಲ. ಈ ದಿವಸ ರಾಜ್ಯದಲ್ಲಿದ್ದ ಕಾಡೆಲ್ಲ ಹಾಳಾಗಿ ಹೋಗಿದೆ. ನೂರಕ್ಕೆ 5 ರಷ್ಟೂ ಸಹ ಕಾಡಿರುವುದಿಲ್ಲ. ಸರ್ಕಾರದವರು ಈ ಕಾಡನ್ನು ಅಭಿವೃದ್ಧಿಪಡಿಸುವುದಕ್ಕೆ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ? ದೇಶದಲ್ಲಿ ಚೆನ್ನಾಗಿ ಮಳೆ ಬಂದರೆ ರೋಗಾದಿಗಳಿರುವುದಿಲ್ಲ; ಬೆಳೆ ಚೆನ್ನಾಗಿ ಆಗುತ್ತದೆ. ಅನೇಕ ವಿಷಜಂತುಗಳು ಈ ಮಳೆಯಿಂದ ನಾಶವಾಗುತ್ತವೆ. ಇಂಥ ಮಳೆಯನ್ನು ಪಡೆದು ಸುರಿಸುವಂಥಾ ಕಾಡನ್ನು ಸರ್ಕಾರದವರು ಹಾಳುಮಾಡಿ ಮೈಸೂರು ರಾಜ್ಯದ ಜನತೆಯನ್ನು ಈ ಕಷ್ಟಗಳಿಗೀಡುಮಾಡಿದ್ದಾರೆ. ಕಾಡಿನಲ್ಲಿ ಕೇವಲ 3-4 ವರ್ಷದ ಗಿಡಗಳನ್ನು ಕತ್ತರಿಸುತ್ತಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಈ ದಿವಸ ಒಂದು ಸರಿಯಾದ ಒಂದು ಕಾನೂನಿಲ್ಲ. ಬಗರ್ ಹುಕುಂನಿಂದ ಅನೇಕರು ಕಾಡನ್ನು ಹಾಳುಮಾಡುತ್ತಿದ್ದಾರೆ. ಇದಕ್ಕೆಲ್ಲ ಸರಕಾರದವರು ಅವಕಾಶ ಕೊಡುತ್ತಿರುವುದು ಸರಿಯಲ್ಲ ಎಂದು ನಾನು ಅನೇಕ ಸಂದರ್ಭಗಳಲ್ಲಿ ತಿಳಿಸಿದ್ದೇನೆ—ಹೀಗೆಲ್ಲ ಬಗರ್ ಹುಕ್ಕುಂನಿಂದ ಅನ್ಯಾಯಗಳು ನಡೆಯುತ್ತಿರುವಾಗ ಇಷ್ಟು ಜನ ಮಂತ್ರಿಗಳೇಕಿರಬೇಕು? ಈ ಸರ್ಕಾರವಾದರೂ ಏಕಿರಬೇಕು ಎಂದು ಕೇಳುತ್ತೇನೆ. ಎಲ್ಲಿ ಗಿಡಗಳು ಬೆಳೆಯುವುದಕ್ಕೆ ಅವಕಾಶವಿರುವುದಿಲ್ಲವೋ ಅಂಥಾ ಕಡೆ ಭೂಮಿಯನ್ನು ವ್ಯವಸಾಯಕ್ಕೆ ಬಿಟ್ಟು ಕೊಡಬೇಕೆಂದು ನಾನು ಹೇಳಿದ್ದೇನೆ. ಆದರೆ ನಮ್ಮ ಜಿಲ್ಲೆಯಲ್ಲೇ ಒಬ್ಬ ಮಂತ್ರಿಗಳು ಒಂದು ಕಡೆ ಕಾಡಿನಲ್ಲಿ ಜಮೀನನ್ನು ಮಂಜೂರು ಮಾಡಿದರೆ—ಅದನ್ನು ಇನ್ನೊಬ್ಬ ಮಂತ್ರಿಗಳು ಕ್ಯಾನ್ಸಲ್ ಮಾಡುತ್ತಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಸಭೆಯ ಮುಂದೆ ಒಂದು ರಿಲೀಫ್ ಮೆಜರ್ಸುಗಳ ಬಗ್ಗೆ ಒಂದು ಬಿಲ್ಲನ್ನಿಟ್ಟಿದ್ದಾರೆ—ಅದರಲ್ಲಿ—ಸ್ವಾಮಿ ಇಷ್ಟೆಲ್ಲಾ ಆಯಿತಲ್ಲ. ನಮ್ಮ ಕಂದಾಯ ಸಚಿವರು ಒಂದು ಮಾತನ್ನು ಹೇಳಿದ್ದಾರೆ. ಆದರೆ ಅವರು ಎಷ್ಟು ದಪ್ಪನಾಗಿದ್ದಾರೋ ಅವರ ಹೃದಯವೂ ಅಷ್ಟೇ ದಪ್ಪನಾಗಿದೆ. ಅವರ ಕೈ ಅಷ್ಟು ಉದ್ದ ಆದರೆ ಅವರ ಕೈಲಿ ಏನಿದೆ? ಅವರು ಕರ್ಣನಂತೆ ಉದಾರಿಗಳಾಗಿದ್ದರೂ ಕೈಲಿ ಹಣವಿಲ್ಲ ಈ ಫ್ಯಾಮಿನ್ ರಿಲೀಫ್‌ಗಾಗಿ ಒಂದು ಫಂಡನ್ನು ಮಾಡಲು ಅದಕ್ಕಾಗಿ 60 ಲಕ್ಷ ರೂಪಾಯಿಗಳನ್ನಿಡುತ್ತೇವೆಂದು ಇದರಲ್ಲಿ ಹೇಳಿದ್ದಾರೆ. ಆದರೆ ಇದು ಏತಕ್ಕೂ ಸಾಲದು, ಇದನ್ನು ಕನಿಷ್ಟಪಕ್ಷ ಆರು ಕೋಟಿಗಳಿಗಾದರೂ ಹೆಚ್ಚಿಸಬೇಕೆಂದು ಹೇಳುತ್ತೇನೆ. ಈ ಫಂಡನ್ನು ಯಾವ ಕಾರ್ಯಕ್ಕಾದರೂ ರೊಟೇಟ್ ಮಾಡಬಹುದು ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರೇ ಒಂದು ತಿದ್ದುಪಡಿಯನ್ನು ತಂದು ಈ ಆರು ಲಕ್ಷವನ್ನು ಕಿತ್ತುಹಾಕಿ ಇದನ್ನು ಆರು ಕೋಟಿಗೆ ಬದಲಾಯಿಸಬೇಕೆಂದು ನಾನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಪದೇ ಪದೇ ಬರಗಾಲಕ್ಕೀಡಾಗುವಂಥಾ ಭಾಗಗಳು ಅನೇಕವಿವೆ. ಆ ಪ್ರದೇಶಗಳನ್ನೆಲ್ಲಾ ನೋಡಿಕೊಂಡು ಈ ಒಂದು ಫಂಡನ್ನು ನಾವು ಇಡಬೇಕಾಗಿದೆ. ಇದಕ್ಕಾಗಿ ಒಂದು ಫ್ಯಾಮಿನ್ ರಿಲೀಫ್ ಬೋರ್ಡ್‌ನ್ನು ನೇಮಕ ಮಾಡಿ ಅವರೇನು ಈ ವಿಚಾರದಲ್ಲಿ ಸಲಹೆಗಳನ್ನು ಕೊಡುತ್ತಾರೋ ಅವುಗಳಿಗನುಸಾರವಾಗಿ ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಇನ್ನಾದರೂ ತಾವು ಈ ಬರಗಾಲ ದೇಶದಲ್ಲಿ ತಲೆಹಾಕದಂತೆ ಒಂದು ಶಾಶ್ವತವಾದ ವ್ಯವಸ್ಥೆಯನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಹಿಂದೆ ಹೇಗೆ ಒಂದು ಭೂದಾನ ಯಜ್ಞದ ಬಿಲ್ಲನ್ನು ತರಲಾಗಿತ್ತೋ ಅದೇ ಮಾದರಿ ಒಂದು ಬಿಲ್ಲನ್ನು ತಂದು ಆ ಮಂಡಲಿಗೆ ಯಾರು ರೆವಿನ್ಯೂ ಮಂತ್ರಿಗಳಾಗಿರುತ್ತಾರೋ ಅವರೇ ಅಧ್ಯಕ್ಷರಾಗಿರಬೇಕು—ಅವರ ನೇತೃತ್ವದಲ್ಲೇ ಈ ಕೆಲಸಕಾರ್ಯಗಳೆಲ್ಲ ನಡೆಯಬೇಕೆಂದು ಅದರಲ್ಲಿ ತಿಳಿಸಿ—ಈ ಕಷ್ಟಕಾರ್ಪಣ್ಯಗಳನ್ನು ಇನ್ನಾದರೂ ಶಾಶ್ವತವಾಗಿ ತಡೆಗಟ್ಟಲು ಪ್ರಯತ್ನಗಳನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ—ಆದರೆ ಈಗಾಗಲೇ ನನ್ನ ಅನೇಕ ಸ್ನೇಹಿತರು ಹೇಳಿರುವಂತೆ ಈ ವಿಚಾರದಲ್ಲಿ ಒಂದು ಮಾಸ್ಟರ್ ಪ್ಲಾನನ್ನು ತಯಾರಿಸಿ 10-15 ವರ್ಷಗಳ ಅವಧಿಯಲ್ಲಿ ಇದನ್ನೆಲ್ಲಾ ಮುಗಿಸುವಂತೆ ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು

ಹೇಳುತ್ತೇನೆ. ದೇಶದಲ್ಲಿ ನೀರಾವರಿ ಕಾಂಗಾರಿಗಳು ಹೆಚ್ಚಿಗೆ ಆಗಬೇಕಾಗಿದ್ದರೆ ಅಧಿಕಾರಿಗಳಲ್ಲಿರ ತಕ್ಕ ಲಾಲಸೆ ದೂರವಾಗಬೇಕು, ಇನ್ನು 10 ವರ್ಷಗಳ ಅವಧಿಯಲ್ಲಿ ರಾಜ್ಯದ ಯಾವ ಜಿಲ್ಲೆಯಲ್ಲೂ ಈ ಕ್ಷಾಮ ಡಾಮರುಗಳ ಹಾವಳಿ ಇಲ್ಲದಂತೆ ಅನುಕೂಲ ಮಾಡಬೇಕು. ದೇಶದಲ್ಲಿರ ತಕ್ಕ ಜನರಿಗೆ ಸುಖಸಂತೋಷಗಳುಂಟಾಗುವಂತೆ ಮಾಡಲು ಸರಕಾರದ ಶ್ರದ್ಧೆಯಿಟ್ಟು ಕೆಲಸ ಮಾಡಲು ಶ್ರಮಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇದಕ್ಕೋಸ್ಕರ ನಾನು ಸರಕಾರವನ್ನು ಕೇಳುವುದು. ಇದಕ್ಕಾಗಿ ಕೊಟ್ಟ ಹಣ ದುರುಪಯೋಗ ವಾಗದಂತೆ ನೋಡಿಕೊಳ್ಳಲು ಸರಕಾರ ಯೋಚನೆ ಮಾಡುತ್ತಾರೆ ಎಂದು ಹೇಳಿ ನಾನು ನನ್ನ ಮಾತನ್ನು ಇಲ್ಲಿಗೆ ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜ ನಗರ).—ಮಾನ್ಯ ಸಭಾಧ್ಯಕ್ಷರೇ, ಈ ನಿರ್ಣಯ ಹೊಸದೇನಲ್ಲ. ವರ್ಷೇ ವರ್ಷೇ ಇಂತಹ ನಿರ್ಣಯಗಳನ್ನು ತಂದು ದೇಶದ ಅಭಾವ ಪರಿಸ್ಥಿತಿ ಯನ್ನು ಕುರಿತು ಈ ಸಭೆಯಲ್ಲಿ ಚರ್ಚೆ ಮಾಡುತ್ತಾ ಅನೇಕ ಸಲಹೆಗಳನ್ನು ಸರಕಾರಕ್ಕೆ ಕೊಡುತ್ತಲೇ ಬಂದಿದ್ದಾರೆ. ಇದು ಹೊಸದೇನಲ್ಲ. ನಮ್ಮ ಆಯವ್ಯಯದ ಬಡ್ಜೆಟ್ಟು ಅಧಿವೇಶದಲ್ಲಿ ಆಯವ್ಯಯ ಪಟ್ಟಿಯನ್ನು ಕುರಿತು ಹೇಗೆ ಚರ್ಚೆ ಮಾಡುತ್ತೇವೋ ಹಾಗೆ ಪ್ರತಿ ಸಾರಿಯೂ ದೇಶದ ಅಭಾವ ಪರಿಸ್ಥಿತಿ ಕುರಿತು ಚರ್ಚೆ ಮಾಡತಕ್ಕದ್ದು ಒಂದು ನಿಯಮವಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಅಭಾವದ ಪರಿಸ್ಥಿತಿ ಕಳೆದ ಸಾಲಿನಲ್ಲಿ ಬಂದಾಗ ಸರಕಾರದವರು ತೀವ್ರವಾಗಿ ಆಲೋಚನೆ ಮಾಡಲು ದೇಶದ ಎಲ್ಲಾ ಅಧಿಕಾರಿಗಳನ್ನು ಸೇರಿಸಿ ಒಂದು ಕಾನ್‌ಫರೆನ್ಸ್ ಕರೆ ದಿದ್ದರು. ಅದರಲ್ಲಿ ದೇಶದಲ್ಲಿರುವ ಅಭಾವ ಪರಿಸ್ಥಿತಿಯನ್ನು ಸಂಪೂರ್ಣವಾಗಿ ನಿವಾರಿಸಬೇಕಾದರೆ ಏನೇನು ಕಾರ್ಯ ಕ್ರಮಗಳನ್ನು ಹಾಕಬೇಕು ಮತ್ತು ಅದಕ್ಕಾಗಿ ಏನು ಏರ್ಪಾಡು ಮಾಡಬೇಕು ಎನ್ನುವುದನ್ನೆಲ್ಲಾ ಆಲೋಚನೆ ಮಾಡಿ ಸುಮಾರು 42 ಕೋಟಿ ರೂಪಾಯಿಗಳಷ್ಟು ವೆಚ್ಚದಲ್ಲಿ ಒಂದು ಯೋಜನೆಯನ್ನು ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸಬೇಕೆಂದು ಹೇಳಿ ಕಳುಹಿಸಿದಂತೆ ನಮ್ಮ ರೆವಿನ್ಯೂ ಮಂತ್ರಿಗಳು ಕೂಡ ಇದನ್ನು ಕಳುಹಿಸಿ ಕೇಂದ್ರ ಸರಕಾರದ ಗಮನವನ್ನು ಈ ಕಡೆಗೆ ಸೆಳೆಯಬೇಕೆಂದು ನಾನು ಇಲ್ಲಿ ಹೇಳಬಯಸುತ್ತೇನೆ. ಆದರೆ ಇವೊತ್ತಿನ ಪರಿಸ್ಥಿತಿಯಲ್ಲಿ ಈ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುವುದರಲ್ಲಿ ಏನಾಗುತ್ತಿದೆ ಎನ್ನುವುದನ್ನು ಯೋಚನೆ ಮಾಡಿದರೆ ಮಳೆ ಎರಡು ತಿಂಗಳು, ಮೂರು ತಿಂಗಳು ನಾಲ್ಕು ತಿಂಗಳವರೆಗೆ ಹೋದಾಗ ದೇಶದಲ್ಲಿ ಅಲ್ಲೋಲ ಕಲ್ಲೋಲವಾಗಿದೆ ಎಂದು ಜನರು ಆಯಾ ಕ್ಷೇತ್ರದ ಪ್ರತಿನಿಧಿಗಳಿಗೆ ಮತ್ತು ಅಲ್ಲಿರುವ ಅಧಿಕಾರಿಗಳಿಗೆ ತಿಳಿಸುತ್ತಾರೆ. ಪ್ರತಿನಿಧಿಗಳಾದ ನಾವೂ ಕೂಡ ಸರಕಾರದ ಗಮನಕ್ಕೆ ತರುತ್ತಿದ್ದೇವೆ. ನಿನ್ನೆಯಿಂದ ಸಂಸ್ಥಾನದ ಕೆಲವು ಭಾಗದಲ್ಲಿ ಮಳೆ ಆಗುತ್ತಿದೆ ಮತ್ತು ಇನ್ನೂ ಕೆಲವು ಭಾಗಗಳಲ್ಲಿ ಮಳೆಯಿಲ್ಲ. ಬಹುಶಃ ಇನ್ನು ಕೆಲವು ದಿನಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ ಮಳೆ ಬೀಳಬಹುದು, ಅದರಿಂದಾಗಿ ಸ್ವಾಭಾವಿಕವಾಗಿ ಅಭಾವವನ್ನು ನಾವೆಲ್ಲರೂ ಮರೆಯಬಹುದು ಮತ್ತು ಸರಕಾರ ಕೂಡ ಪೂರ್ತಿಯಾಗಿ ಮರೆಯಬಹುದೇನೋ ಎಂದು ನನಗನಿಸುತ್ತಿದೆ. ಬಹುಶಃ ನಾವು ಈ ಒಂದು ಅಭಾವ ಪರಿಸ್ಥಿತಿಯನ್ನು ಸಂಪೂರ್ಣವಾಗಿ ತೊಡೆದು ಹಾಕಲು ಮೊದಲು ಅಭಾವ ಪರಿಸ್ಥಿತಿಯ ಭಾಗಗಳಲ್ಲಿ ಪ್ರಾಜೆಕ್ಟುಗಳನ್ನು ಕೈಗೊಳ್ಳಬೇಕು. ಇದಕ್ಕೆ ತಕ್ಕಂತಹ ಯೋಜನೆ ಗಳನ್ನು ಹಾಕಿಕೊಂಡಿದ್ದರೂ ಅದನ್ನು ಸಂಪೂರ್ಣವಾಗಿ ಕಾರ್ಯಗತ ಮಾಡದೆ ಇರುವುದರಿಂದ ಇಂತಹ ಪರಿಸ್ಥಿತಿಗಳು ಮೇಲಿಂದಮೇಲೆ ಬರುತ್ತಿರುತ್ತದೆ ಎಂದು ನನಗನಿಸುತ್ತಿದೆ. ಅಭಾವ ಪರಿಸ್ಥಿತಿಯನ್ನು ನಿವಾರಿಸಲು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದರೆ, ಸಾಯಿಲ್ ಕನ್‌ಸರ್‌ವೇಷನ್ನು, ಅಫೋರ್‌ಸ್ಟೇಷನ್ನು, ಹಾರ್ಟಿಕಲ್ಚರಲ್ ಡಿಪಾರ್ಟುಮೆಂಟುಗಳ ಮೂಲಕ ಎಲ್ಲೆಲ್ಲಿ ವೃಕ್ಷಗಳು ಇಲ್ಲವೋ ಅಲ್ಲೆಲ್ಲಾ ವೃಕ್ಷಗಳನ್ನು ಬೆಳೆಸಬೇಕು ಮತ್ತು 'ಮೋಡ್ ಅಫ್ ಫುಡ್' ಎಂದರೆ ಆಹಾರವನ್ನು ಸೇವಿಸುವುದರಲ್ಲಿಯೂ ಬದಲಾವಣೆ ಇರಬೇಕು. ಇವನ್ನೆಲ್ಲಾ ಮಾಡಲು ಸಣ್ಣ ನೀರಾವರಿ ಯೋಜನೆಗಳ ಕಡೆಗೆ ಆದಷ್ಟೂ ಹೆಚ್ಚಿನ ಗಮನ ಕೊಡಬೇಕು. ಇವೊತ್ತಿನ ದಿನ ಸಣ್ಣ ನೀರಾವರಿ ಯೋಜನೆಗಳಿಗಾಗಿ ಕೆರೆಗಳ ದುರಸ್ತಿ ಮಾಡುವುದು, ಹಾಗೂ ಅನೇಕ ಕಡೆಗಳಲ್ಲಿ ಬಾವಿಗಳನ್ನು ತೆಗೆಸುವುದು ಇತ್ಯಾದಿಗಳನ್ನು ಈಗಾಗಲೇ ಅನೇಕರು ಸರಕಾರಕ್ಕೆ ಮನವಿ ಮಾಡಿ ಕೊಂಡಿದ್ದಾರೆ. ಮೈಸೂರು ರಾಜ್ಯದಲ್ಲಿರುವ ಕೆರೆಗಳ ಸ್ಥಿತಿಗತಿಗಳು ಸರಿಯಾಗಿಲ್ಲ. ಅದರಿಂದ ಈಗಿರುವಂತೆ ಪಿ. ಡಬ್ಲ್ಯೂ. ಡಿ. ಇಲಾಖೆ ತೆಗೆದುಕೊಂಡು ಅದನ್ನು ಸರಿಯಾಗಿ ಮೇಂಟೇನು ಮಾಡು ವುದಕ್ಕೆ ಆಗುವುದಿಲ್ಲ ಎಂದು ಇದನ್ನು ಸರಕಾರವೇ ನೇರವಾಗಿ ವಹಿಸಿಕೊಂಡು ತಕ್ಕ ಕ್ರಮ ತೆಗೆದು ಕೊಂಡರೆ ಇರತಕ್ಕ ಫಸಲನ್ನೂ ತರಿ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಇದಕ್ಕಾಗಿ ರೈತರ ಮೇಲೆ ಯಾವುದಾದರೂ ಸೆಸ್ಸುಗಳನ್ನು ಹಾಕಿದರೂ ರೈತರು ಕೊಡಲು ಸಿದ್ಧರಾಗಿದ್ದಾರೆ ಎಂದು ಸರಕಾರಕ್ಕೆ ಹೇಳಿದಾಗ ಅವರು ಅದಕ್ಕೆ ಉತ್ತರವಾಗಿ ಇರಿಗೇಷನ್ನು ಬಿಲ್ಲು ಬರುತ್ತದೆ ಮತ್ತು ಇದಕ್ಕೆ ತಕ್ಕಂತಹ ಮಾಸ್ಟರ್ ಪ್ಲಾನು ಮಾಡುವುದಕ್ಕಾಗಿ ಒಂದು ಕಮಿಟಿ ಮಾಡಿದ್ದೇವೆ ಅವರು

(ಶ್ರೀ ಎಂ. ಸಿ. ಬಸಪ್ಪ)

ಇವನ್ನೆಲ್ಲಾ ಪರಿಶೀಲನೆ ಮಾಡಿ ಕೊಡುವುದರಲ್ಲಿ ಬಹುಶಃ ನಿಧಾನವಾಗಿದೆ ಎಂದು ನನಗನಿಸುತ್ತಿದೆ. ಈಗಿರುವ ಸ್ಥಿತಿಯಂತೆ ಇನ್ನೂ ಹತ್ತು ವರ್ಷಗಳ ಕಾಲ ಕೆರೆಗಳ ಸ್ಥಿತಿ ಮುಂದುವರಿಯುವುದಾದರೆ ಈಗಿರುವ ತರಿ ಫಸಲಿನಲ್ಲಿ ಶೇಕಡಾ 50 ರಷ್ಟು ಕಡಿಮೆ ಯಾಗುತ್ತದೆ ಎಂದು ಹೇಳಬಹುದು. ಇನ್ನು ಕೆರೆಗಳಲ್ಲಿ ಹೂಳು ತಗೆಸಬೇಕಾದರೆ ಒಂದು ಎಕರೆಗೆ ಸುಮಾರು ನಾಲ್ಕು ಸಾವಿರದಷ್ಟು ಖರ್ಚಾಗುತ್ತದೆ ಎಂದು ಹೇಳುತ್ತಾರೆ. ಇಷ್ಟು ಹಣವನ್ನು ಸರಕಾರ ಎಲ್ಲಿಂದ ಕೊಡವುದಕ್ಕಾಗುತ್ತದೆ ಎಂದು ದೊಡ್ಡದಾಗಿ ಹೇಳುತ್ತಾರೆ. ಅಲ್ಲದೆ ಇಲಾಖೆಯವರು ಕೆರೆಗಳನ್ನು ಸರಿಯಾದ ಸ್ಥಿತಿಯಲ್ಲಿಡಲು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೇ ಇರುವುದರಿಂದ ಬರಬರುತ್ತಕ್ಕ ತರಿ ಫಸಲೂ ಕೂಡ ಕಡಿಮೆಯಾಗುತ್ತಹೋಗಬಹುದು. ಇದರ ವ್ಯವಸ್ಥೆಯನ್ನು ಸರಕಾರ ಆದಷ್ಟು ಬೇಗ ಇದಕ್ಕಾಗಿ ಮಾಡಬೇಕೆಂದಿರುವ ಇರಿಗೇಷನ್ ಬಿಲ್ ತಂದ ಇಂತಹ ಕೆಲಸಗಳನ್ನು ತೆಗೆದುಕೊಂಡು ಜನಗಳಿಗೆ ಅನುಕೂಲ ಮಾಡುವುದಕ್ಕೂ ಅವಕಾಶವಾಗುತ್ತದೆ. ಸರಕಾರದವರು ಇದನ್ನು ಪರಿಶೀಲನೆ ಮಾಡಿ ಇರಿಗೇಷನ್ ಬಿಲ್ಲ್ ಈ ಸಭೆಯ ಮುಂದೆ ತಂದು ಅದು ಕಾನೂನಾಗುವುದರ ಕಡೆಗೆ ತೀವ್ರ ಗಮನಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನು ತೆಗೆದುಕೊಳ್ಳುವ ಪಕ್ಷದಲ್ಲಿ ಹಾಲಿ ಇಲ್ಲಿರುವ ಸುವರ್ಣಾವತಿ ನದಿಯ ಪ್ರಾಜೆಕ್ಟನ್ನು ಮಾಡಲು ಸುಮಾರು 8 ಲಕ್ಷದಷ್ಟು ಖರ್ಚಾಗಬಹುದು ಎಂದು ಹಿಂದೆ ಹೇಳಿದ್ದರು ಮತ್ತು ಇದರಿಂದ 16,000 ಎಕರೆಯಷ್ಟು ಭೂಮಿಗೆ ನೀರಾವರಿ ಸೌಕರ್ಯ ಸಿಗುತ್ತದೆ ಎಂದಿತ್ತು. ಈಗ ಈ ಯೋಜನೆಗಾಗಿ ಸುಮಾರು 1. 13 ಲಕ್ಷ ರೂಪಾಯಿಗಳಷ್ಟು ಎಂದು ಅಂದಾಜು ಇದ್ದರೂ ಮುಂದೆ ಅದು ಸುಮಾರು 1. 50 ಲಕ್ಷದವರೆಗೂ ಬಂದೇ ಬರುತ್ತದೆ. ಬಹುಶಃ ಈ ಕೆಲಸ ಮುಗಿಯುವ ವೇಳೆಗೆ ಸುಮಾರು ಒಂದೂವರೆ ಕೋಟಿ ಯಷ್ಟಾಗಬಹುದು. ಈಗ ಇರುವ ತರಿ ಅಚ್ಚುಕಟ್ಟಿಗಿಂತ ಸುಮಾರು 16,000 ಎಕರೆಯಷ್ಟು ಜಾಸ್ತಿಯಾಗಬಹುದು ಎಂದು ಇಲ್ಲಿನ ಇಲಾಖೆಯವರು ಅಭಿಪ್ರಾಯಪಡುತ್ತಿದ್ದಾರೆ. ಎಂದರೆ ನಮ್ಮ ತಾಲ್ಲೂಕಿನಲ್ಲಿ ಶೇಕಡಾ ಮೂರು, ನಾಲ್ಕರಷ್ಟು ತರಿ ಪ್ರದೇಶ ಜಾಸ್ತಿಯಾಗುತ್ತದೆ. ಈ ಸುವರ್ಣಾವತಿ ಯೋಜನೆ ಮೂರನೆಯ ಯೋಜನೆಯಲ್ಲಿ ಸೇರಿಲ್ಲ. ಇದು ಸೇರಿಲ್ಲವಿದ್ದರೂ ಈಗತಾನೇ ಮಾನ್ಯ ಸದಸ್ಯರಾದ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ಇದು ತುರ್ತಾಗಿ ಆಗಬೇಕಾದ ಯೋಜನೆ ಎಂದು ಕೇಂದ್ರ ಸರಕಾರಕ್ಕೆ ತಿಳಿಸಿ ಆದಷ್ಟು ಬೇಗ ಇದಕ್ಕೆ ಆಗಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಂಡು ಮೂರನೇ ಯೋಜನೆಯಲ್ಲಿ ಸೇರಿಲ್ಲದಿದ್ದರೂ ಇದು ಮುಖ್ಯವಾದ ಕೆಲಸ ಎಂದು ಸರಕಾರ ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಾನು ಸರಕಾರವನ್ನು ಕೇಳುತ್ತೇನೆ. ಇದನ್ನು ಕೇಂದ್ರ ಸರಕಾರಕ್ಕೆ ಕೂಡಲೇ ಕಳುಹಿಸಿ ಕೊಟ್ಟು ಇದಕ್ಕೆ ಕ್ಲಿಯರೆನ್ಸನ್ನು ಮತ್ತು ಇದಕ್ಕೆ ಬೇಕಾದ ಸಹಾಯಗಳನ್ನೂ ಪಡೆದು ಇದನ್ನು ಆದಷ್ಟು ಬೇಗ ಕಾರ್ಯಗತ ಮಾಡುವುದಕ್ಕೆ ತಾವು ಪ್ರಯತ್ನಮಾಡಬೇಕೆಂದು ನಾನು ಸರಕಾರದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಉಳಿದ ಕೆಲವಾರು ಪ್ರದೇಶದಲ್ಲಿ ಸುಮಾರು 33 ಮೇಜರು ಕೆರೆಗಳು ಇವೆ ಮತ್ತು 19 ಮೈನರು ಕೆರೆಗಳು ಇವೆ. ಇವುಗಳ ಮೂಲಕ ವ್ಯವಸಾಯ ಮಾಡಲು ಅನುಕೂಲವಾಗುವಂತೆ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಂಡ ಪಕ್ಷದಲ್ಲಿ ಸುಮಾರು 9000 ಎಕರೆಗಳಷ್ಟು ಭೂಮಿಯನ್ನು ತರಿ ಮಾಡಬಹುದು. ಇಂತಹ ಕೆರೆಗಳ ರೆಸ್ಟೋರೇಷನ್ನು ಕೆಲಸಗಳನ್ನು ಸರಕಾರ ಬೇಗನೆ ತೆಗೆದುಕೊಂಡರೆ ಈಗಿರುವ ಬೆಳೆಯ ಹತ್ತರಷ್ಟು ಬೆಳೆಯನ್ನು ಬೆಳೆ ಮಾಡಬಹುದು ಮತ್ತು ತರಿ ಭೂಮಿಯನ್ನು ಜಾಸ್ತಿ ಮಾಡುವುದಕ್ಕೂ ಒಂದು ಅವಕಾಶ ಸಿಕ್ಕುತ್ತದೆ. ಈಗಿರುವ 19 ಸಣ್ಣ ಕೆರೆಗಳೂ ಕೂಡ ಸರಿಯಾದ ಸ್ಥಿತಿಯಲ್ಲಿಲ್ಲ. ಇದನ್ನು ದುರಸ್ತು ಮಾಡಿದರೆ ಸುಮಾರು ಸಾವಿರಾರು ಎಕರೆಗಳಷ್ಟು ಭೂಮಿಯನ್ನು ತರಿ ಮಾಡಲು ಅವಕಾಶವಾಗುತ್ತದೆ. ಈ ವ್ಯವಸ್ಥೆಯನ್ನು ಆದಷ್ಟು ಬೇಗ ಮಾಡಬೇಕೆಂದು ನಾನು ಸರಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಇನ್ನು ಪಿಕ್‌ಅಪ್‌ಗಳನ್ನು ಹಾಕುವಾಗ ಇಲಾಖೆಯವರು ಕೆಲಸ ನಿಧಾನವಾಗುತ್ತ ಇರುವುದಕ್ಕೆ ನಾನಾ ಕಾರಣಗಳನ್ನು ಕೊಡುತ್ತಿದ್ದಾರೆ. ಒಂದು ಕಾರಣವನ್ನು ನಾನು ಸರಕಾರದ ಗಮನಕ್ಕೆ ತರಬೇಕಾಗಿದೆ. ಈ ವಿಷಯದಲ್ಲಿ ಇಲಾಖೆಯವರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಇಂತಹ ಕೆಲಸವನ್ನು ಮಾಡಬಹುದು, ಇದಕ್ಕಾಗಿ ಗ್ರಾಂಟು ಬಂದಿದೆ ಎಂದು ಒಂದು ಆರ್ಡರನ್ನು ಕಳುಹಿಸಿ ಕೊಡುತ್ತಾರೆ. ಇದಾದಮೇಲೆ ಉಪಮಂತ್ರಿಗಳು ಒಂದು ಆರ್ಡರು ಕಳುಹಿಸಿದ್ದಾರೆ ಎಂದು ಚೀಫ್ ಇಂಜನೀಯರವರು ಒಂದು ಆರ್ಡರನ್ನು ಕಳುಹಿಸಿ ಯಾವ ಕೆಲಸವನ್ನು ಮಾಡಬೇಕಾದರೂ ಸಪ್ಟೆಂಬರು ತಿಂಗಳಿಗೆ ಮುಂಚೆ ತೆಗೆದುಕೊಳ್ಳಬೇಡಿ ಮತ್ತು ಇದಕ್ಕಾಗಿ ಹೆಚ್ಚಿನ ದುಡ್ಡು ಕೊಡುವುದಕ್ಕಾಗುವುದಿಲ್ಲ ಎಂದು ಇನ್ನೊಂದು ಆರ್ಡರು ಅದರ ಜೊತೆಯಲ್ಲಿಯೇ ಹೋಗುತ್ತದೆ.

ಅದನ್ನು ಸರಕಾರದವರ ಗಮನಕ್ಕೆ ತಂದಾಗ, ಅವರು ಅದನ್ನು ವಿತ್‌ಡ್ರಾ ಮಾಡಿತ್ತೇವೆಂದು ಹೇಳಿದರು. ಅದರೂ ಆ ಆಫಿಸರುಗಳು ಬಹುಶಃ ಅಭ್ಯಾಸ ಬಲದಿಂದಲೋ ಏನೋ ಸೆಪ್ಟೆಂಬರ್ ತನಕ ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದರು. ಮಧ್ಯೆ ಮಧ್ಯೆ ಈ ರೀತಿ ಸರ್‌ಕ್ಯುಲರ್‌ಗಳು ಹೋಗುತ್ತಾ ಇದ್ದರೆ, ಇಲಾಖೆಯವರು ಕೆಲಸವನ್ನು ಯಾವ ಸ್ಟೇಜಿನಲ್ಲಿರುತ್ತದೆಯೋ ಅದೇ ಸ್ಟೇಜಿನಲ್ಲಿ ನಿಲ್ಲಿಸಿ ಬಿಡುತ್ತಾರೆ. ಸೂಪರ್‌ವೈಜರು ಸರ್ವೆ ಮಾಡುತ್ತಾ ಇರುವ ಕೆಲಸಗಳನ್ನು ಮಾಡದೆ ಸರ್ವೆ ನಿಲ್ಲಿಸುತ್ತಾರೆ, ಎಸ್ಟಿಮೇಟು ತಯಾರು ಮಾಡುತ್ತಿರುವವರು, ಎಸ್ಟಿಮೇಟ್ ಮಾಡುವುದನ್ನು ನಿಲ್ಲಿಸುತ್ತಾರೆ. ಸ್ಯಾಂಕ್ಷನ್ ಕೊಡಬೇಕಾದ ಎಕ್ಸಿಕ್ಯೂಟೀವ್ ಇಂಜನಿಯರು ಸ್ಯಾಂಕ್ಷನ್ ಕೊಡುವುದನ್ನು ನಿಲ್ಲಿಸುತ್ತಾರೆ. ಪ್ರಾರಂಭ ಮಾಡಬೇಕಾದ ಹಂತದಿಂದ ಹಿಡಿದು, ಸರ್ವೆ ಹಿಡಿದು, ಸ್ಯಾಂಕ್ಷನ್ ಮಾಡುವುದು ಎಲ್ಲಾ ಕೆಲಸಗಳನ್ನೂ ನಿಲ್ಲಿಸಿ ಬಿಡುತ್ತಾರೆ ಈ ಒಂದು ಮೈನರ್ ಇರ್ರಿಗೇಷನ್ ಕೆಲಸ ಹಿಂದೆ ಹಿಂದೆ ಹೋಗಲು ಅವಕಾಶ ಕೊಡಬೇಡಿ. ಈ ಮೈನರ್ ಇರ್ರಿಗೇಶನ್ನಿಗೆ ಯಾವ ಒಂದು ನಿರ್ಬಂಧವನ್ನೂ ಹಾಕಬೇಡಿ. ಒಂದು ಸಾವಿರ ರೂಪಾಯಿ ಖರ್ಚಿಗೆ ರಿಟರ್ನ್ 3½ ಪರ್ಸೆಂಟ್ ಬರಬೇಕು ಅಂತ ಹೇಳಿ ಏನು ಒಂದು ನಿಯಮವನ್ನು ಹಾಕಿಕೊಂಡಿದ್ದೀರೋ, ಅದನ್ನು ರಿಲಾಕ್ಸ್ ಮಾಡಿ, ಡಿಸ್ಟ್ರೆಸ್ ಕೆಲಸಗಳಲ್ಲಿ ಒಂದು ಪರ್ಸೆಂಟ್ ಬಂದರೂ ಕೂಡ, ಮಾಡಲು ಅವಕಾಶವನ್ನು ಕೊಡಬೇಕು. ಒಂದು ಪ್ರತಿಫಲದ ಉದ್ದೇಶವನ್ನಿಟ್ಟುಕೊಂಡು, ಮೈನರ್ ಇರ್ರಿಗೇಶನ್ ವಿಚಾರದಲ್ಲಿ ಈ ರೀತಿ ಸರ್‌ಕ್ಯುಲರನ್ನು ಯಾವಾಗಲೂ ಕೂಡ ಕೆಳಮಟ್ಟದಲ್ಲಿರುವ ಅಧಿಕಾರಿಗಳಿಗೆ ಕಳುಹಿಸಬೇಡಿ. ಈ ರೀತಿಯ ಸರ್‌ಕ್ಯುಲರ್ ಆಫೀಸಿನಿಂದ ಆಫೀಸಿಗೆ ಹೋಗಕೂಡದು ಎಂದು ಒಂದು ಕಾನೂನನ್ನೇ, ನಿಯಮವನ್ನೇ ಮಾಡಬೇಕು.

ನಮ್ಮ ತಾಲ್ಲೂಕಿನಲ್ಲಿ ವಿಶೇಷವಾಗಿ ಬಾವಿ ನೀರನ್ನು ಉಪಯೋಗಿಸಿ ವ್ಯವಸಾಯ ಮಾಡತಕ್ಕಂಥ ಪದ್ಧತಿ ಇದೆ. ಆದರೆ ನಮ್ಮಲ್ಲಿ ಬಾವಿಗಳಲ್ಲಿ 30 ಅಡಿ ಆಳ ಹೋಗಿದ್ದರೂ ಸಾಕಾದಷ್ಟು ನೀರು ಬರುವುದಿಲ್ಲ. ಆದ ರಿಂದ ನಮಗೆ ಬೋರ್‌ವೆಲ್‌ಗಳ ಅವಕಾಶವನ್ನು ಕೊಡಿ ಎಂದು ವ್ಯವಸಾಯ ಮಂತ್ರಿಗಳನ್ನು ಕೇಳಿದೆವು. ಅವರು ಕೊಡುತ್ತೇವೆಂದು ಹೇಳಿದರು ಅನೇಕ ಬಾವಿಗಳನ್ನು ನಮ್ಮ ಕಡೆ ಅವರು ನೋಡಿದರು. ನಮ್ಮ ಬಾವಿಗಳಲ್ಲಿ ಬೋರ್‌ವೆಲ್ ಮೆಶೀನುಗಳಿಂದ ಬಹಳ ನೀರು ಬಂದು 10–15 ಎಕರೆ ಫಸಲು ಮಾಡಿದ್ದಾರೆ. ಅದನ್ನು ತಾಲ್ಲೂಕಿನಲ್ಲಿರುವ ಅವರ ಆಫೀಸರುಗಳೆ ಹೇಳಿದರು. ಆದರೆ ಕೇಸಿಂಗ್ ಪೈಪಿಲ್ಲ, ಕೊಡುವುದಕ್ಕಾಗುವುದಿಲ್ಲವೆಂದ ಅವರು ಹೇಳುತ್ತಾರೆ. ಈ ಸಂದರ್ಭದಲ್ಲಿ ಅದಕ್ಕೆ ಇವತ್ತೂ ಒಂದು ರೆಪ್ರೆಸೆಂಟೇಷನ್ ಕೊಟ್ಟಿದ್ದೇನೆ. ಕೇಸಿಂಗ್ ಪೈಪು ಅನಾವಶ್ಯಕವೆಂದು ಅವರ ಗಮನಕ್ಕೆ ತಂದಿದ್ದೇವೆ. ಎಷ್ಟೋ ಮಂದಿ ಪ್ರೈವೇಟಾಗಿ ಇಟ್ಟುಕೊಂಡಿರ ತಕ್ಕಂಥವರು, ಅಂಥ ಬೋರ್‌ವೆಲ್ ಮೆಷೀನುಗಳನ್ನು ತರಿಸಿ ಬಾವಿಗಳಿಗೆ ಹಾಕಿದ್ದಾರೆ. ಅವರು ತಮ್ಮ ಅಧಿಕಾರಿಗಳಿಗೆ ಹೋಗಿ ಅವನ್ನು ನೋಡಿಕೊಂಡು ಬನ್ನಿ ಎಂದು ಹೇಳಲಿ. ಯಾವುಯಾವುದೇ ಕೆಲಸಕ್ಕೆಲ್ಲಾ ಹೋಗುತ್ತಿರುತ್ತಾರೆ; ಈ ಒಂದು ಉಪಯುಕ್ತವಾದ ಕೆಲಸವನ್ನು ಹೋಗಿ ನೋಡಲಿ. ಹತ್ತು ಬಾವಿಗಳನ್ನು ನೋಡಲಿ. ಕೇಸಿಂಗ್ ಪೈಪಿಲ್ಲದೆ ಎಲ್ಲೆಲ್ಲಿ ನೀರು ಬಂದಿಲ್ಲ ಅನ್ನುವುದನ್ನು ನೋಡಲಿ. ನೂರಕ್ಕೆ ಹತ್ತು ಬಾವಿಗಳಲ್ಲಿ ಬಂದಿರಬಹುದು ಸಾಮಾನ್ಯವಾಗಿ 50–60 ಅಡಿ ಹೋದರೆ ಬಾವಿಯಲ್ಲಿ ನೀರು ಚೆನ್ನಾಗಿ ಬಂದಿದೆ. 10 15 ಎಕರೆ ಮಾಡುತ್ತಾ ಇದ್ದಾರೆ. ಇಂಥ ಯೋಜನೆ ಮಾಡುವ ಅವಕಾಶವಿರುವಾಗ ಸಾಧ್ಯವಾದಷ್ಟು ಮಟ್ಟಿಗೆ ಬೋರ್‌ವೆಲ್ ಮೆಶೀನುಗಳನ್ನು ಕಳುಹಿಸಿ. ಈಗ ನಮ್ಮ ತಾಲ್ಲೂಕಿನಲ್ಲಿರತಕ್ಕಂಥ ಬಾವಿಗಳಲ್ಲಿ ಸಾಕಾದಷ್ಟು ನೀರು ಬರುತ್ತಾ ಇಲ್ಲ. ಆದ ರಿಂದ ಹೆಚ್ಚಾಗಿ ವ್ಯವಸಾಯ ಮಾಡುವುದಕ್ಕೆ ಆಗುವುದಿಲ್ಲ. ಒಂದು ಬಾವಿಯಲ್ಲಿ ಎಲ್ಲಿಯೂ 5 ಎಕರೆ ಮಾಡದೆ ಇದ್ದರೆ, ಬೋರ್‌ವೆಲ್‌ಗಳನ್ನು ಹಾಕಿ ನೀರನ್ನು ತೆಗೆದುಕೊಳ್ಳುವುದಾದರೆ, ಒಂದು ಬಾವಿಯಿಂದ 10–15 ಎಕರೆ ನೀರಾವರಿ ಮಾಡಲು ಅನುಕೂಲವಾಗುತ್ತದೆ. ಆದಷ್ಟು ಬೇಗ ಅದನ್ನು ಕಳುಹಿಸಬೇಕು.

ಈ ಯೋಜನೆಯಲ್ಲಿ ಕೆರೆಗೆ ಅಥವಾ ನಾಲೆಗೆ ಹೊಸದಾಗಿ ಪಿಕಪ್ಪುಗಳನ್ನು ಹಾಕುವ ಸಂದರ್ಭದಲ್ಲಿ ಸರ್ಕಾರದವರು ಒಂದು ನಿಯಮವನ್ನು ಇಟ್ಟುಕೊಂಡಿದ್ದಾರೆ. ಒಂದು ಕೆರೆಗೆ ಒಂದು ಸಾವಿರ ರೂಪಾಯಿವರೆಗೆ ಖರ್ಚು ಮಾಡಬಹುದು ಮತ್ತು ಪಿಕಪ್ಪಿಗೆ ತರಿ ಫಸಲಿದ್ದರೆ ಕಂಟ್ರಿಬ್ಯೂಷನ್ 500 ರೂಪಾಯಿವರೆಗೆ ಕೊಡಬಹುದು ಎಂದು. ನಾಲ್ಕು ಸಾವಿರ ರೂಪಾಯಿವರೆಗೆ ಖರ್ಚು ಮಾಡಿದರೆ, 4–5 ಎಕರೆ ಫಸಲು ಮಾಡತಕ್ಕಂಥ ಅನೇಕ ಬಾವಿಗಳನ್ನು ನಿರ್ಮಾಣ ಮಾಡಬಹುದ ಅಂತ ಹೇಳಿ ಅನುಭವ ಬಂದಿದೆ. ಇಂತಹುದರಲ್ಲಿ ತಾವು ಕಂಟ್ರಿಬ್ಯೂಶನ್ ಕೊಡುವುದು ಬೇಡ. ಸಾಲವನ್ನು ಕೊಡುತ್ತೇವೆಂದು ಕಳೆದ ಸಲ ಹೇಳಿದರೂ ಅದು ಆಗಿಲ್ಲ. ಡಿವಿಜನಲ್ ಕಮಿಶನರು ಟೂರ್ ಮಾಡಿದರು. ಒಂದೊಂದು ತಾಲ್ಲೂಕಿಗೆ 300 ಬಾವಿಗಳನ್ನು ಮಾಡಬೇಕೆಂದು ಕೇಳಿದ್ದರು. ಆದರೆ ಇವತ್ತು ಹಣ ಕೊಟ್ಟಿರುವುದು ಎಷ್ಟು? 1,17,000 ರೂಪಾಯಿ ಕೊಟ್ಟಿದ್ದಾರೆ. ಅದರಲ್ಲಿ ಸರ್‌ಕ್ಯುಲರ್ ಕೊಟ್ಟಿದ್ದಕ್ಕೆ ಒಬ್ಬೊಬ್ಬ ಆಫೀಸರು ಒಂದೊಂದು ತರಹ ಅರ್ಥ ಹೇಳುತ್ತಿದ್ದಾರೆ. ಒಬ್ಬರು 17 ಸಾವಿರ ರೂಪಾಯಿ ಹಳೆ ಬಾವಿಗಳಿಗೆ, ಒಂದು ಲಕ್ಷ ರೂಪಾಯಿ ಹೊಸ ಬಾವಿಗಳಿಗೆ ಎಂದು

(ಶ್ರೀ ಎಂ. ಸಿ. ಬಸಪ್ಪ)

ಹೇಳುತ್ತಿದ್ದಾರೆ. ಇನ್ನೊಬ್ಬರು ಹೊಸ ಬಾವಿಗಳನ್ನೇ ತೆಗೆದುಕೊಳ್ಳಕೂಡದು, 1.17 ಲಕ್ಷ ರೂಪಾಯಿಯನ್ನು ಇನ್‌ಕಂಪ್ಲೀಟ್ ವೆಲ್ಲನ್ನು ಕಂಪ್ಲೀಟ ಮಾಡಲು ಉಪಯೋಗಿಸಬೇಕೆಂದು ಇಂಟರ್‌ಪ್ರಿಟ್ ಮಾಡಿದ್ದಾರೆ. ಮತ್ತೆ ಕೆಲವರು ಶೇಕಡ 40ರಷ್ಟನ್ನು ಹೊಸ ಬಾವಿಗೆ, 60 ರಷ್ಟನ್ನು ಹಳೇ ಬಾವಿ ಕಂಪ್ಲೀಟ್ ಮಾಡುವುದಕ್ಕೆ ಉಪಯೋಗಿಸಬೇಕೆಂದು ಹೇಳುತ್ತಿದ್ದಾರೆ. ಪ್ರತಿ ವರ್ಷ ಈ ಕಾನೂನುಗಳ ಬದಲಾವಣೆಯಾದರೆ, ಒಂದು ಆಫೀಸಿನಿಂದ ಈ ಅರ್ಜಿಗಳು ಪ್ರಾರಂಭವಾಗಿ ಹೋಗುವ ಹೊತ್ತಿಗೆ ಅದು ಬೇರೆ ಬೇರೆ ತರಹ ಇಂಟರ್‌ಪ್ರಿಟಾಗಿ ಕೊನೆಗೆ ನಮ್ಮ ಅಂತ್ಯ ಆಫೀಸಿನ ಅಧಿಕಾರಿಗಳು ರೈತನಿಗೆ ಏನು ಪರಿಹಾರ ಕೊಡಬೇಕು ಎಂದು ಅಭಿಪ್ರಾಯ. ಕೊಡುವ ಹೊತ್ತಿಗೆ, ಅದು ಸರಿಯಾದ ವೇಳೆಯಲ್ಲಿ ಸಾಕಾದಷ್ಟು ಪ್ರಮಾಣದಲ್ಲಿ ಅವನಿಗೆ ಸೇರದೆ, ಈ ಡೆವಲಪ್‌ಮೆಂಟ್ ಆಕ್ಟಿವಿಟಿಗಳು ಕುಂಠಿತವಾಗುವುದಕ್ಕೆ ಅವಕಾಶವಿದೆ. ಆದ್ದರಿಂದ ಇಂತಹುದರಲ್ಲಿ ಸರಕಾರ ಕ್ರಿಸ್ಟಲ್ ಕ್ಲಿಯರ್ ರೂಲುಗಳನ್ನು ಮಾಡಬೇಕು, ಅವುಗಳನ್ನು ಆದಷ್ಟು ಕ್ಲಿಯರಾಗಿ ಇಡಬೇಕು. ಎಲ್ಲೆಲ್ಲಿ ನೀರಾವರಿ ಬಾವಿಗಳನ್ನು ತೆಗೆದುಕೊಳ್ಳಬೇಕು. ಎಲ್ಲೆಲ್ಲಿ ಅನುಕೂಲತೆ ಇದೆ ನೋಡಿ, ಅಂಥ ಕಡೆ ಹೆಚ್ಚು ಮೊತ್ತದ ಗ್ರಾಂಟುಗಳನ್ನು ಕೊಡುವುದು ಬಹಳ ಅವಶ್ಯಕ. ಗೌರ್ನಮೆಂಟ್ 55 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರೂ, ಈ ಒಂದು ಪ್ರಾವಿಜನ್ ಕ್ಲಿಯರ್ ಆಗಿ ಇಲ್ಲದಿರುವುದರಿಂದ ಹೆಚ್ಚಿಗೆ ನೀರಾವರಿ ಬಾವಿಗಳನ್ನು ತೆಗೆದುಕೊಳ್ಳುವುದಕ್ಕೆ ಅನಾನುಕೂಲವಾಗಿದೆ. ಈ ಒಂದು ಪರಿಸ್ಥಿತಿಯಲ್ಲಿ ಇದ್ದೇವೆ.

ಈ ವರ್ಷ ಅಭಾವ ಪರಿಸ್ಥಿತಿ ಬಂದಮೇಲೆ ನಾವು ರೆವಿನ್ಯೂ ಅಧಿಕಾರಿಗಳಿಗೆ ಮತ್ತು ಎಲ್ಲರಿಗೂ ತಿಳಿಸಿದೆವು. ಅಭಾವ ಪರಿಸ್ಥಿತಿ ಇದೆ, ನಮ್ಮ ತಾಲ್ಲೂಕಿನಲ್ಲಿ ಏನಾದರೂ ಕಾಂಗಾರಿಗಳನ್ನು ತೆಗೆದುಕೊಳ್ಳಿ ಎಂದು. ಇದು ಬಹಳ ಅವಶ್ಯಕ ಎಂದು ಕೇಳಿದ ಮೇಲೆ ಡಿವಿಜನಲ್ ಕಮಿಶನರು ನಮ್ಮ ತಾಲ್ಲೂಕಿನಲ್ಲಿ ಡೆಪ್ಯುಟಿ ಕಮಿಶನರು, ಹಾಗೂ ತಾಲ್ಲೂಕು ಬೋರ್ಡು ಅಧ್ಯಕ್ಷರು ಮತ್ತು ಇತರ ಅಧಿಕಾರಿಗಳ ಜೊತೆಯಲ್ಲಿ ತಾಲ್ಲೂಕಿನಲ್ಲಿ ಪ್ರವಾಸಮಾಡಿ ಆದಷ್ಟು ಬೇಗ ಕೆಲಸಗಳನ್ನು ಪ್ರಾರಂಭ ಮಾಡಿಸುತ್ತೇವೆಂದು ಭರವಸೆ ಕೊಟ್ಟು ಬಂದರು. ಆದರೆ ಅದರಲ್ಲಿ ಒಂದು ಮುಖ್ಯವಾದ ಅಂಶವನ್ನು ಹೇಳಬೇಕು; ಅದು ಹಣದ ಅಭಾವವಿರಬೇಕು. ಅವರು ಹೊರಟು ಹೋದಮೇಲೆ ಗೋಕಟ್ಟೆಗಳನ್ನು ಮಾತ್ರ ತೆಗೆದುಕೊಳ್ಳಿ, ರಸ್ತೆಗಳ ಕಾಂಗಾರಿ ತೆಗೆದುಕೊಳ್ಳುವುದು ಬೇಡ ಎಂದು ಇನ್‌ಸ್ಟ್ರಕ್ಷನ್ ಬಂದಿತು. ಇದಕ್ಕೆ ಕಾರಣ, ರಸ್ತೆ ಕಾಂಗಾರಿಗಳನ್ನು ಮಾಡಲು ಮೇಲ್ವಿಚಾರಣೆ ಮಾಡತಕ್ಕಂಥ ಒಂದು ಇಲಾಖೆಯವರು ಅಲ್ಲಿ ಸರಿಯಾಗಿ ಇಲ್ಲದೇನೆ ತೆಗೆದುಕೊಂಡರೆ ರಸ್ತೆಗೆ ಸುಮ್ಮನೆ ಮಣ್ಣೆರಚಿರುತ್ತಾರೆ, ಅದು ಕೊಚ್ಚಿ ಹೋಗುತ್ತದೆ, ಎಂದು ಇರಬಹುದು. ಗೋಕಟ್ಟೆಗಳು ಮತ್ತು ಕಪಿಲೆ ಬಾವಿಗಳನ್ನು ಹೆಚ್ಚಿಗೆ ಕೊಡುವುದಕ್ಕೆ ಅವಕಾಶಮಾಡಿ ಕೊಡುತ್ತೇವೆಂದು ಹೇಳಿ ಬಂದರು, ಒಂದು ಆರ್ಡರನ್ನು ಕಳುಹಿಸಿದರು. 15 ಸಹಸ್ರ ರೂಪಾಯಿಗಳಲ್ಲಿ ಗೋಕಟ್ಟೆಗಳನ್ನು ಮಾಡಬೇಕೆಂದು ಅರ್ಜಿ ಕಳುಹಿಸಿದರು, ಮತ್ತು ಆ ಕಟ್ಟೆ ಕೆಲಸಗಳು ಪ್ರಾರಂಭವಾಗಿವೆ. ಆದರೆ ಎಷ್ಟು ಕೆಲಸಗಳನ್ನು ಪ್ರಾರಂಭ ಮಾಡಬಹುದು ಅಂತ ಹೇಳಿ ಆಲೋಚನೆಮಾಡಿ ಅಂಕಿ ಅಂಶ ಪಡೆದುಕೊಂಡರೆ ? ಎರಡು ಲಕ್ಷ ಪ್ರಜೆಗಳಿರತಕ್ಕಂಥ ಒಂದು ತಾಲ್ಲೂಕಿನಲ್ಲಿ ಬರೀ ವ್ಯವಸಾಯ ಅಥವ ವ್ಯವಸಾಯದ ಕೂಲಿಯನ್ನೇ ನಂಬಿರತಕ್ಕಂಥ ಜನ 20 ಪರ್ಸೆಂಟು ಪಾಪ್ಯುಲೇಶನ್ ಇದೆ ಅಂತ ಹೇಳಿ ಆಲೋಚನೆ ಮಾಡುವುದು ತಪ್ಪಲ್ಲ. ಹೆಚ್ಚು ಕಡಿಮೆ ಈ ವ್ಯವಸಾಯದ ಕೂಲಿಯನ್ನೇ ನಂಬಿ ಕೊಂಡಿರುವವರು ಇವತ್ತು ಒಂದು ತಾಲ್ಲೂಕಿನಲ್ಲಿ ಸಹಸ್ರಾರು ಜನ ಸಿಗುತ್ತಾರೆ. ಅಂಥ ಒಂದು ತಾಲ್ಲೂಕಿಗೆ 15,000 ರೂಪಾಯಿ ಕೊಟ್ಟಿದ್ದಾರೆ. 30 ಸಾವಿರ ರೂಪಾಯಿಗಳನ್ನು ರಿಲೀಫಿಗೆ ಕೊಟ್ಟಿದ್ದಾರೆಂದು ಯೋಚನೆ ಮಾಡಿದರೂ ಪರ್ ಹೆಡ್ ಒಬ್ಬನಿಗೆ 75 ನಯೆಪೈಸೆ ಕೊಟ್ಟ ಹಾಗಾಗುತ್ತದೆ. ಈ ಒಂದು ರಿಲೀಫು ಈಗಿನ ಪರಿಸ್ಥಿತಿಗೆ ಹೊಂದಿಕೊಂಡಿಲ್ಲ. ಈ ಕೆರೆ, ಗೋಕಟ್ಟೆಗಳ ಕೆಲಸಗಳನ್ನು ತೆಗೆದು ಕೊಳ್ಳುವಾಗ, ಆ ಏರಿಯಾದ ಆಗ್ರಿಕಲ್ಚರಲ್ ಲೇಬರ್ ಪಾಪ್ಯುಲೇಶನ್ ಏನಿದೆ ಅದರ ಮೇಲೆ ರಿಲೈ ಮಾಡುವುದಾದರೆ, ಇವತ್ತಿನ ದಿವಸ ತಮ್ಮ ರಿಲೀಫ್ ಯೋಜನೆಯಿಂದ ಜೀವನ ನಡೆಸುವುದಕ್ಕೆ ಕಷ್ಟವಾಗುತ್ತದೆ. ಅಂದಮೇಲೆ ಜನಸಂಖ್ಯೆ ಏನಿದೆ ಅದಕ್ಕೆ ಅನುಗುಣವಾಗಿ ಪರಿಹಾರ ಕ್ರಮಗಳನ್ನು ಆಲೋಚನೆ ಮಾಡತಕ್ಕಂಥದು ಸೂಕ್ತವಾಗಿದೆ. ಅದನ್ನು ಪರ್ಯಾಲೋಚನೆ ಮಾಡಬೇಕೆಂದು ಸರಕಾರದ ಗಮನವನ್ನು ಸೆಳೆಯುತ್ತೇನೆ.

ತಕಾವಿ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನುಗಳನ್ನು ಹೆಚ್ಚಾಗಿ ಕೊಡಿಸಬೇಕು ಅಂತ ಹೇಳಿ ಅನೇಕ ವೇಳೆ ಕೇಳಿದರೂ ಕೂಡ, ಬಹುಶಃ ಹಣದ ಅಭಾವದಿಂದ ಕಡಿಮೆ ಮಾಡಿರಬಹುದು. ಈಗ ಕೊಡುತ್ತಿರತಕ್ಕಂಥ ರಿಲೀಫು ಏನೇನೂ ಸಾಲದು. ಅದು ರೈತನೊಬ್ಬನಿಗೇ ಕೊಡುವುದಕ್ಕೆ ಇಲ್ಲ. ಅವನು ತನ್ನ ಜಾನುವಾರುಗಳನ್ನು ಸಾಕುವುದಕ್ಕೆ ಕೂಡ ಅನುಕೂಲವಾಗುವ ರೀತಿಯಲ್ಲಿ, ಹುಲ್ಲು ಮತ್ತಿತರ ತನಗೆ ಬೇಕಾದ ಸಾಮಾನುಗಳನ್ನು ಕೊಳ್ಳತಕ್ಕ ಪರಿಸ್ಥಿತಿಗೆ ಅನುಗುಣವಾದ ರೀತಿಯಲ್ಲಿ,

ತಕಾವಿ ಮತ್ತು ಲ್ಯಾಂಡ್ ಇಂಪ್ರೂವ್ಮೆಂಟು ಲೋನುಗಳನ್ನಾಗಲೀ, ಸಹಾಯ ಧನವನ್ನಾಗಲೀ, ಅತನಿಗೆ ಕೊಡತಕ್ಕಾಂಥಾದ್ದು ಬಹಳ ಮುಖ್ಯವಾಗಿದೆ. ಇದನ್ನು ಕೊಟ್ಟು ಅಭಾವ ಪರಿಸ್ಥಿತಿ ಏನಿದೆ ಅದನ್ನು ಎದುರುಗೊಂಡು ಇನ್ನು ಸ್ವಲ್ಪ ದಿವಸದಲ್ಲಿಯೇ ದೇಶದಲ್ಲಿ ಅಭಾವ ಪರಿಸ್ಥಿತಿ ತಲೆದೋರ ದಿರುವ ರೀತಿ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಸರಕಾರದವರು ಕೈಗೊಳ್ಳಬೇಕೆಂದು ಅಪೇಕ್ಷೆ ಪಟ್ಟು ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

3-30 P.M.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ಅಭಾವ ಪರಿಸ್ಥಿತಿ ಎನ್ನ ತಕ್ಕದ್ದು ಮೈಸೂರು ಸಂಸ್ಥಾನಕ್ಕೆ ಪ್ರತಿನಿತ್ಯವಿರತಕ್ಕ ರೋಗವೆಂದರೆ ತಪ್ಪಾಗಲಾರದು. ರೋಗ ನಿವಾರಣೆ ಮಾಡುವುದಕ್ಕೋಸ್ಕರ ಸರ್ಕಾರ ಯಾವ ವಿಧವಾದ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ ವೆಂದು ಹೇಳಬಯಸುತ್ತೇನೆ. ನಮ್ಮಲ್ಲಿ ತುಮಕೂರು ಜಿಲ್ಲೆ, ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗ, ಬಳ್ಳಾರಿ, ಹೀಗೆ ಸಾಮಾನ್ಯವಾಗಿ ಅಭಾವ ಪರಿಸ್ಥಿತಿಗೆ ಒಳಗಾಗತಕ್ಕ belt ಎಂದು ಹೇಳುತ್ತೇನೆ. ಈ ಕೆಲವು ಜಿಲ್ಲೆಗಳಲ್ಲಿ ಪ್ರತಿವರ್ಷವೂ ಮಳೆ ಕಡಿಮೆ ಬೀಳುತ್ತದೆ. ಅಂಕಿ ಅಂಶಗಳನ್ನು ನಾವು ತೆಗೆದು ನೋಡುವುದಾದರೆ, ಅದರ ಪರಿಹಾರವಾಗಿ ಅಲ್ಲಿ ಇಲ್ಲಿ ಕೆಲವು ಕೆರೆ, ಕಟ್ಟೆ, ಬಾವಿ ತೆಗೆಸುವು ದಕ್ಕೆ ಹಣವನ್ನೊದಗಿಸುವುದು. ಕಾಮಗಾರಿಗಳನ್ನೂ ಮಾಡಿಸುವುದು ಇವುಗಳಿಂದ ಅಭಾವ ಪರಿಸ್ಥಿತಿ ನಿವಾರಣೆಯಾಗಲಾರದೆಂದು ನನ್ನ ಅಭಿಪ್ರಾಯ. ಅಭಾವ ಪರಿಸ್ಥಿತಿ ನಿವಾರಣೆಯಾಗಬೇಕಾದರೆ ಅದಕ್ಕೆ ಸಾರ್ವತ್ರಿಕವಾದ, ವ್ಯವಸ್ಥಿತವಾದ ಒಂದು ಯೋಜನೆಯನ್ನೂ ಮಾಡತಕ್ಕದ್ದು ಸರ್ಕಾರದ ಕರ್ತವ್ಯ. ಪ್ರತಿವರ್ಷ ಮಳೆಬಾರದೆ ಇರತಕ್ಕದ್ದು, ಮಳೆ ಬಂದಿಲ್ಲವೆಂದು ನಾವು ಅಸೆಂಬ್ಲಿಯಲ್ಲಿ ಮತ್ತು ಹೊರಗೆ ಕೂಗನ್ನೆಬ್ಬಿಸುವುದು ಇದ್ದೇ ಇದೆ. ಕೆಲವರು ಬಾವಿಗಳನ್ನು ತೆಗೆಸಲು ಪ್ರಯತ್ನ ಮಾಡತಕ್ಕದ್ದು, ಕೆಲವರು ಗೋಕಟ್ಟೆಗಳು ಮತ್ತು ಕೆರೆಗಳನ್ನು ಕಟ್ಟುವುದು ಇವುಗಳಿಂದ ಅಭಾವ ಪರಿಸ್ಥಿತಿ ಪರಿಹಾರವಾಗಲಕ್ಕೆ ಸಾಧ್ಯವಿಲ್ಲ.

ಚಿತ್ರದುರ್ಗ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಯುಗಚಿ ನದಿಯನ್ನು ವಾರೀ ಕಣಿವೆಗೆ ಸೇರಿಸಿ ಅದರಿಂದ ರಾಣಿ ಕೆರೆಗೆ ಸೇರಿಸುವ ವ್ಯವಸ್ಥೆ ಮಾಡಬೇಕೆಂದು ನಾವು ಕೇಳುತ್ತಿದ್ದೇವೆ. ಇದನ್ನು ಮಾಡುವುದರಿಂದ ಹಿರಿಯೂರು ತಾಲ್ಲೂಕಿನಲ್ಲಿ ಅಭಾವಕ್ಕೆ ಒಳಗಾಗತಕ್ಕ ಪ್ರದೇಶ, ಚಳ್ಳಕೆರೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ನೀರಾವರಿಯಾಗಿ ಅಭಾವ ಪರಿಸ್ಥಿತಿ ತಪ್ಪುತ್ತದೆಂದು ನಾವು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಸರ್ಕಾರ ಆ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಿಲ್ಲ. ಸರ್ಕಾರದವರು ಕೆಲವು ಸಲ ಇದರ ಬಗ್ಗೆ ಯೋಚನೆ ಮಾಡುತ್ತೇವೆಂದು ಹೇಳುತ್ತಾರೆ. ಕೆಲವು ಸಲ ಸಲ ಸಾಧ್ಯವಾಗುವುದಿಲ್ಲವೆಂದು ಹೇಳುತ್ತಾರೆ. ಇದನ್ನೂ ಸರ್ವೆ ಮಾಡಿ ಈ ಯೋಜನೆ ಆಗುತ್ತವೆಯೋ ಇಲ್ಲವೇ ಎಂದು ನೇರವಾಗಿ ಹೇಳಬೇಕು. ಈ ಪ್ರಕಾರ ಹೇಳತಕ್ಕದ್ದು ಇವತ್ತಿನ ದಿವಸ ಅಗತ್ಯ.

ಸರ್ಕಾರದವರು ಪಂಪ್ ಸೆಟ್ಟುಗಳನ್ನೂ ಕೊಡುವುದರಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುವುದರಲ್ಲಿ ವ್ಯವಸ್ಥಿತವಾದ ಕ್ರಮವಿಲ್ಲವೆಂದು ನನ್ನ ಭಾವನೆ. ಏಕೆಂದರೆ ಯಾವ ಭಾಗಕ್ಕೆ ಪ್ರಿಯಾರಿಟಿ ಕೊಡ ಬೇಕೆಂಬುದಕ್ಕೆ ಅಂಕಿ ಅಂಶಗಳು ಸರ್ಕಾರದ ಮುಂದೆ ಇಲ್ಲ. ಹಿರಿಯೂರು ತಾಲ್ಲೂಕಿನಲ್ಲಿ ಯಾವ ತ್ತಿಗೂ ಮಳೆ ಬರುವುದಿಲ್ಲ. ಈ ತಾಲ್ಲೂಕಿನಲ್ಲಿ ವಾಣಿವಿಲಾಸ ಕೆರೆಯ ಅಚ್ಚುಕಟ್ಟು ಭಾಗಗಳನ್ನು ಬಿಟ್ಟು ಉಳಿದ ಮೂರು ಹೋಬಳಿಗಳು ಯಾವಾಗಲೂ ಅಭಾವಕ್ಕೆ ಒಳಗಾಗುತ್ತವೆ. ಇಲ್ಲಿ ಯಾವ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು? ಇಲ್ಲಿಂದ 100 ಅರ್ಜಿಗಳು ಬಂದರೆ ಎರಡೋ ಮೂರೋ ಬಾವಿಗಳಿಗೆ ಹಣ ಕೊಡುತ್ತಾರೆ. ಇದರಿಂದ ಅಭಾವ ಪರಿಸ್ಥಿತಿ ನಿವಾರಣೆಯಾಗುತ್ತ ದೆಂದು ಭಾವಿಸಿದರೆ ಅದು ತಪ್ಪು ಎಂದು ನನ್ನ ಅಭಿಪ್ರಾಯ.

ಚಳ್ಳಕೆರೆ, ಇಡೀ ತಾಲ್ಲೂಕು, ಮೊಳಕಾಲ್ಮೂರು, ಚಿತ್ರದುರ್ಗದ ಬಹುಭಾಗ ಪ್ರತಿವರ್ಷ ಮಳೆ ಸರಿಯಾಗಿ ಬಾರದೆ ಅಭಾವಕ್ಕೆ ಒಳಗಾಗಿರುವ ಪ್ರದೇಶಗಳು. ಇವಕ್ಕೆ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವಾಗ ಅಂಕಿಅಂಶಗಳ ಅಭಾವ ಸರ್ಕಾರಕ್ಕೆ ಇದೆ. ಈ ತರಹ ಪರಿಸ್ಥಿತಿಯಲ್ಲಿ haphazard method ನಲ್ಲಿ ಕೆಲಸ ಮಾಡುವುದಾದರೆ ಸರಿಯಾದ, ವ್ಯವಸ್ಥಿತವಾದ ರೀತಿಯಲ್ಲಿ ಮಾಡಲಿಕ್ಕೆ ಸಾಧ್ಯವಿಲ್ಲ.

ಚಿತ್ರದುರ್ಗದಿಂದ ಹಿಡಿದು ರಾಯದುರ್ಗಕ್ಕೆ ಒಂದು ರೈಲ್ವೆ ಮಾರ್ಗವನ್ನು ಹಾಕಬೇಕು. ಇದರ ಬಗ್ಗೆ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ತಿಳಿಸಿ ಅದನ್ನು ಮಾಡುವುದರಿಂದ ಅಭಾವ ಸ್ಥಿತಿ ಸ್ವಲ್ಪ ಸುಧಾರಿಸುತ್ತದೆಂದು ಅಭಿಪ್ರಾಯವಿದೆ. ಆದನ್ನು ಮಾಡಬೇಕೆಂದು ನಮ್ಮ ಜಿಲ್ಲೆಯಲ್ಲಿ

(ಶ್ರೀ ಕೆ. ಎಚ್. ರಂಗನಾಥ್)

ಎಲ್ಲರೂ ಪಕ್ಷಗಳ ಭೇದವಿಲ್ಲದೆ ಒತ್ತಾಯವನ್ನು ಎಲ್ಲ ಕಾಲದಿಂದಲೂ ಮಾಡುತ್ತ ಬಂದಿದ್ದೇವೆ. ಅದರ ಬಗ್ಗೆ ಸರ್ಕಾರ ಯೋಚನೆ ಮಾಡಿಲ್ಲ. ಅದನ್ನು ವಿಚಾರ ಮಾಡಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ಪಂಪ್ ಸೆಟ್ಟುಗಳ ವಿಚಾರ ಹೇಳುವುದಾದರೆ ವಿದ್ಯುಚ್ಛಕ್ತಿಯ ಅಭಾವದಿಂದ ರೈತರಿಗೆ ಪಂಪ್ ಸೆಟ್ಟುಗಳನ್ನು ಕೊಟ್ಟರೂ ಅದನ್ನು ನಡೆಸಲು ವಿದ್ಯುಚ್ಛಕ್ತಿ ಇಲ್ಲ.

ಧರ್ಮಾಪುರದ ಕೆರೆಯ ನೀರು alkaline ಆಗಿರುವುದರಿಂದ ಆ ಕೆರೆಯ ಅಚ್ಚುಕಟ್ಟಿನಲ್ಲಿ ಬೆಳೆಯಾಗುವುದಿಲ್ಲ. ಇದನ್ನು ಯಾವತ್ತಿಗೂ ಹೇಳುತ್ತ ಬಂದಿದ್ದೇವೆ. ಆ ನೀರನ್ನು ಪರೀಕ್ಷೆ ಮಾಡಿದ್ದಾರೆ ಪರೀಕ್ಷೆ ಮಾಡಿಸಿದಮೇಲೆ ಅದಕ್ಕೆ ಏನು ವ್ಯವಸ್ಥೆಯಾಗಬೇಕು ಎನ್ನುವುದನ್ನು ಐದಾರು ವರ್ಷವಾದರೂ ಸರ್ಕಾರ ಯೋಚನೆ ಮಾಡಿಲ್ಲ. ಈ ಬಗ್ಗೆ ತೀವ್ರ ಯೋಚನೆ ಮಾಡಬೇಕು. ಹಿರಿಯೂರು ತಾಲ್ಲೂಕಿನ ದರ್ಮಪುರ ಹೋಬಳಿ ಬಹಳ ಅಭಾವಕ್ಕೆ ಒಳಗಾಗಿರತಕ್ಕ ಪ್ರದೇಶ. ಅಲ್ಲಿ ಕೆರೆಯಿದ್ದರೂ ಅದನ್ನು ಉಪಯೋಗಿಸುವ ಪರಿಸ್ಥಿತಿ ಇಲ್ಲ. ಹಾಗೆಯೇ ಚಳ್ಳಕೆರೆ ಪರಶುರಾಮಪುರ ಹೋಬಳಿ ಯಾವತ್ತಿಗೂ ಅಭಾವಕ್ಕೆ ಒಳಗಾಗಿದೆ. ನಾನು ಸರ್ಕಾರಕ್ಕೆ ಹೇಳುವುದಿಷ್ಟು, ಅಂಕಿ ಅಂಶಗಳ ಶೇಖರಣೆ ಮಾಡಿ ಯಾವುದಕ್ಕೆ ಆದ್ಯತೆಯನ್ನು ಕೊಡಬೇಕು, ಎಷ್ಟು ಉತ್ಪಾದನೆಯಾಗುತ್ತದೆ, ಎಷ್ಟು ಉತ್ಪತ್ತಿ ಬರಬಹುದು ಎಂದು ವಿಚಾರ ಮಾಡಿ ಕೊಡಬೇಕೇ ವಿನಾ ನಾವು ಹೇಗೂ ಒಂದು ಕೋಟಿ ರೂಪಾಯಿಗಳನ್ನು ಮೈನರ್ ಇರಿಗೇಷನ್ನಿಗೆ ಕೊಟ್ಟಿದ್ದೇವೆ. ಅದನ್ನು ಹಂಚಿ ಎಂದು ಬೇಕಾದ ಕಡೆಗೂ ಬೇಡವಾದ ಕಡೆಗೂ ಒಂದೇ ಕ್ರಮವನ್ನು ಹಾಕಿಕೊಳ್ಳುವುದರಿಂದ ಉಪಯೋಗವಾಗುವುದಿಲ್ಲ. ನಾವ ಯಾವ ಜಿಲ್ಲೆ ಯಾವ ಯಾವ ತಾಲ್ಲೂಕಿನಲ್ಲಿ ಅದ್ಯತೆ ಕೊಡಬೇಕು ಎಂದು ವಿಚಾರ ಮಾಡಿ ಕೊಡಬೇಕು. ಬೇರೆ ಕಡೆ ಕೊಡದೇ ಇದ್ದರೂ ಪರವಾ ಇಲ್ಲ.

ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಾಗ ಶಾಶ್ವತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೇ ವಿನಾ ಈ ವರ್ಷ ಬರಗಾಲ ಬಂದಿದೆ, ಈ ವರ್ಷದ ಮಟ್ಟಿಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಯೋಚನೆ ಮಾಡುವುದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ ಮತ್ತು ದಿನೇ ದಿನೇ ಉಲ್ಬಣವಾಗುತ್ತಿರುವ ಆಹಾರ ಸಮಸ್ಯೆಯನ್ನು ನೀಗುವುದಕ್ಕೂ ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ.

ಸಣ್ಣ ನೀರಾವರಿ ಕಾರ್ಯವನ್ನು ಪ್ರಚಾರದಲ್ಲಿ ಹೆಚ್ಚಾಗಿ ಮಾಡುತ್ತಿದ್ದಾರೆಯೇ ವಿನಾ ಕಾರ್ಯಗತವಾಗುವುದರಲ್ಲಿ ಬಹಳ ನಿಧಾನವಾಗುತ್ತಿದೆ. ಅಭಾವಕ್ಕೆ ಒಳಗಾಗಿರುವ ಪ್ರದೇಶದಲ್ಲಿ ಮುಂಗಾರು ಫಸಲಿಲ್ಲ. ಹಿಂಗಾರು ಫಸಲು ಆಗಬೇಕಾಗಿದೆ. ಇನ್ನು ಮೇಲೆ ಬಿತ್ತನೆಯಾಗಬೇಕು ಅದೂ ಮಳೆ ಬಂದರೆ, ಇಲ್ಲದೆ ಹೋದರೆ ಇಲ್ಲ. ಹೀಗಿರುವಾಗ ಸರ್ಕಾರ ಯೋಚನೆ ಮಾಡಬೇಕು.

ಈ ಸಭೆಯ ಎಲ್ಲ ಸದಸ್ಯರ ಅಭಿಪ್ರಾಯ ಸಬ್ಸಿಡಿ ಕೊಡುವುದು, ಬಾವಿಗೆ ಗ್ರ್ಯಾಂಟ್ ಕೊಡುವುದು ಪಂಪ್ ಸೆಟ್ ಕೊಡುವುದು, ಇದರಲ್ಲಿ ಎಷ್ಟು ನಿಧಾನವಾದರೆ ರೈತನಿಗೆ ಅಷ್ಟು ತೊಂದರೆಯಾಗುತ್ತದೆ. ಅವನು ಕಷ್ಟಕ್ಕೆ ಸಿಕ್ಕುತ್ತಾನೆ. ಆದುದರಿಂದ ಆದಷ್ಟು ಜಾಗ್ರತೆ ಅವರ ಅರ್ಜಿಯನ್ನು ವಿಲೇವಾರಿ ಮಾಡುವುದರಿಂದ ಮಾತ್ರ ರೈತನಿಗೆ ಸಕಾಲದಲ್ಲಿ ಸಹಾಯ ಒದಗೀತು. ಪ್ರತಿ ವರ್ಷವೂ ರೈತನಾದವನು ಕಷ್ಟಪಟ್ಟು ವ್ಯವಸಾಯ ಮಾಡಿದರೂ ಅವನು ಏನು ಸಹಾಯವನ್ನು ನಿರೀಕ್ಷಣೆ ಮಾಡುತ್ತಾನೆಯೋ ಆ ಸಹಾಯ ಸಿಕ್ಕುವುದಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ನನ್ನ ಅಭಿಪ್ರಾಯವೇನೆಂದರೆ, ನಾವು ಪ್ರತಿವರ್ಷವೂ ಈ ಬಗ್ಗೆ ವಿಚಾರ ಮಾಡುವುದರ ಬದಲು ಶಾಶ್ವತವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಸರ್ಕಾರ ವಿಚಾರ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಅನ್ನಪೂರ್ಣಾಬಾಯಿ ರಾಗಟೆ (ಕಲ್ಯಾಣಿ).— ಮಾನ್ಯ ಸಭಾಪತಿಗಳೇ, ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಈ ಮಾನ್ಯ ಸಭೆಯ ಮುಂದೆ ನಮ್ಮ ರಾಜ್ಯದಲ್ಲಿ ಅಭಾವ ಪರಿಸ್ಥಿತಿಗೊಳಗಾಗಿರುವ ಪ್ರದೇಶದ ಬಗ್ಗೆ ಏನು ಒಂದು ನಿರ್ಣಯವನ್ನು ಚರ್ಚೆಗೆ ತಂದಿದ್ದಾರೆಯೋ ಅದು ಬಹಳ ಒಳ್ಳೆಯದು, ಉಪಯುಕ್ತವಾದುದು ಆಗಿರುವುದರಿಂದ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನಮ್ಮ ಬೀದರ್ ಜಿಲ್ಲೆಯ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಹೋದ ತಿಂಗಳಿನಲ್ಲಿ ನಮ್ಮ ಬೀದರ ಜಿಲ್ಲೆಯಲ್ಲಿ ವಿಪರೀತ ಮಳೆಯಾಗಿ ಮುಂಗಾರಿ ಬೆಳೆಯೆಲ್ಲಾ ಪೂರ್ತಿ ಹಾಳಾಗಿ ಹೋಗಿ ಬಿಟ್ಟಿದೆ. ಮುಂಗಾರಿ ಬೆಳೆ ಬರತಕ್ಕದ್ದು ಉದ್ದು, ಹೆಸರು, ಎಳ್ಳು ಸೇಂಗಾ ಈ ಬೆಳೆಗಳು ಪೂರ್ತಿ ಹೋಗಿಬಿಟ್ಟಿರುವುದರಿಂದ ರೈತರು ಬಹಳ ತೊಂದರೆಗೆ ಈಡಾಗಿದ್ದಾರೆ. ಆದುದರಿಂದ ಯಾವ ರೀತಿಯಿಂದಲಾದರೂ ರೈತನ ಕಷ್ಟ ದೂರ ಮಾಡಿ, ಅವನ ಕಷ್ಟ ನಿವಾರಣೆ ಮಾಡಲು ಸಹಾಯ ಒದಗಿಸಿಕೊಡಬೇಕೆಂದು ಸರಕಾರಕ್ಕೆ ಅರಿಕೆ ಮಾಡಿಕೊಳ್ಳುತ್ತೇನೆ.

ಕೆರೆಗಳ ಜೀರ್ಣೋದ್ಧಾರ ಮಾಡಬೇಕಾದುದು ಅಗತ್ಯವಾಗಿದೆ. ಹುಮ್ನಾಬಾದ ತಾಲ್ಲೂಕಿನಲ್ಲಿ 14 ಸಣ್ಣ ಪುಟ್ಟ ಕೆರೆಗಳು ಇವೆ. ಈ ಕೆರೆಗಳ ದುರಸ್ತಿ ಮಾಡುವ ಬಗ್ಗೆ ಎಷ್ಟೋ ವರ್ಷಗಳಿಂದ ಹೇಳಿ ಹೇಳಿ ಸಾಕಾಯಿತು. ಪ್ರತಿವರ್ಷ ಬಂದು ಸರ್ವೆ ಮಾಡಿಕೊಂಡು ಹೋಗುತ್ತಾರೆ. ಕೆಲಸವಾಗುವುದು ಮಾತ್ರ ಏನೂ ಆಗಿಲ್ಲ ಎಂದು ಹೇಳಬಹುದು. ಕೆಲಸವಾಗದಿರುವುದಕ್ಕೆ ಕಾರಣವೇನು ? ಈ ಕೆರೆಗಳ ದುರಸ್ತಿ ಕೆಲಸ ತೆಗೆದುಕೊಳ್ಳುವ ಬಗ್ಗೆ ಸರಕಾರ ತೀವ್ರ ನಿರ್ಣಯ ತೆಗೆದುಕೊಳ್ಳಬೇಕು. ದೊಡ್ಡ ಕೆರೆಗಳು ನಮ್ಮಲ್ಲಿಲ್ಲ. ಇರುವ ಕೆರೆಗಳನ್ನು ದುರಸ್ತಿ ಮಾಡಿಸಬೇಕಾಗಿದೆ. ಅದಲ್ಲದೆಯೂ ಇವು ಸಣ್ಣ ಪುಟ್ಟ ಕೆರೆಗಳಾಗಿವೆ. ಈ ಕೆರೆಗಳಿಂದ ರೈತರಿಗೆ ಬಹಳ ಉಪಯೋಗವಿದೆ. ಈ ಕೆರೆಗಳ ಹೆಸರು ಹೇಳುತ್ತೇನೆ ಲಿಂಗದಹಳ್ಳಿ, ಹೊನ್ನಹಳ್ಳಿ, ಉಮಾಪೂರ ಹಳ್ಳಿ, ಲಾಹೇಶ್ವರ, ಹಿರನ್ನಾಗಾಂವ ಇವು ಮುಖ್ಯವಾಗಿವೆ. ಒಂದೊಂದು ಕೆರೆಯಿಂದ ಐದಾರು ನೂರು ಎಕರೆ ಭೂಮಿ ನೀರಾವರಿಯಾಗುತ್ತದೆ. ಎಲ್ಲಿ ಕುಡಿಯುವ ನೀರಿನ ತೊಂದರೆ ಇದೆಯೋ ಅಂಥದಲ್ಲಿ ಬೋರ್‌ವೆಲ್ ಹಾಕಿ ತೊಂದರೆ ದೂರ ಮಾಡಬೇಕು. ಈ ಬೋರ್‌ವೆಲ್ ವಿಚಾರವಾಗಿ ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗ್ಗೆ ತಾಲ್ಲೂಕ ಬೋರ್ಡಿನವರು ಹೇಳಿದ್ದಾರೆ. ಆದರೆ ಈ ಕೆಲಸ ಇನ್ನೂ ವರೆಗೆ ಕಾರ್ಯರೂಪದಲ್ಲಿ ಬಂದಿಲ್ಲ. ಅಲ್ಲಿಯ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ನಮ್ಮ ಭಾಗದಲ್ಲಿ ಆದಾಯ ಬರತಕ್ಕಂಥ ಮುಖ್ಯಬೆಳೆ ಅಂದರೆ ಹತ್ತಿ. ಆದರೆ ನಾಲ್ಕೈದು ವರ್ಷಗಳಿಂದ ಹತ್ತಿಯ ಬೆಳೆ ಬಂದಿಲ್ಲ. ಹತ್ತಿಯ ಬೆಳೆ ಯಾವ ಕಾರಣದ ದೆಸೆಯಿಂದ ಬಂದಿಲ್ಲವೆಂಬುದನ್ನು ಕಂಡು ಹಿಡಿಯಲು ಒಂದು ಸಂಶೋಧನಾ ಕೇಂದ್ರ ನಮ್ಮ ಜಿಲ್ಲೆಯಲ್ಲಿ ಸ್ಥಾಪನೆಮಾಡಬೇಕು. ಸಂಶೋಧನೆ ನಡೆಸಲು ತಜ್ಞ ಅಧಿಗಾರಿಗಳ ನೇಮಕ ಮಾಡುವುದು ಅಗತ್ಯವಾಗಿದೆ. ಹತ್ತಿಯ ಬೆಳೆ ಬರುವ ಹಾಗೆ ಮಾಡಿ ಆ ಬಡರೈತರಿಗೆ ಅನುಕೂಲ ಮಾಡಿ ಕೊಡಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ನಮ್ಮ ಬೀದರ್ ಜಿಲ್ಲೆ ಬಹಳ ಹಿಂದುಳಿದ ಭಾಗ ಎಂಬುದು ಸರಕಾರಕ್ಕೆ ಗೊತ್ತಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ತಾವರೆಯವರು ಒಂದು ಮಾತು ಹೇಳಿದರು. ಹಳೇ ಮೈಸೂರಿನ ಜನ ಬಹಳ ಬುದ್ಧಿವಂತರು. ಕೆರೆ ಕಟ್ಟೆ ಮಾಡಿಕೊಂಡು ಕೆಲಸ ಕಾರ್ಯಗಳನ್ನು ಮಾಡಿಕೊಂಡಿದ್ದಾರೆ. ಹೇಗೆ ಮುಂದುವರಿದಿದ್ದಾರೆ ಎಂಬುದನ್ನು ವರ್ಣನೆ ಮಾಡಿದರು. ಅದನ್ನು ನಾನು ಪುನಃ ಹೇಳಬೇಕಾಗಿಲ್ಲ ಬುದ್ಧಿವಂತರಾದ ತಾವು ಬಹಳ ಮುಂದುವರಿದಿದ್ದೀರಿ. ಆದರೆ ತಾವು ಸ್ವಲ್ಪ ಸಮಾಧಾನದಿಂದ ನಮ್ಮ ಹಿಂದುಳಿದ ಭಾಗದ ಕಡೆಗೆ ಅದಷ್ಟು ದೊಡ್ಡ ಮನಸ್ಸುಮಾಡಿ ಜಾಗ್ರತೆ ಸುಧಾರಣೆ ಮಾಡುವುದಕ್ಕೆ ಹೆಚ್ಚು ಹಣ ಒದಗಿಸಿಕೊಟ್ಟು ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ, ಆಹಾರ ಉತ್ಪಾದನೆ ಇವುಗಳ ಕಡೆಗೆ ಹೆಚ್ಚು ಲಕ್ಷ ಕೊಟ್ಟು, ಹೆಚ್ಚು ಹಣ ಒದಗಿಸಿ ಅನುಕೂಲ ಮಾಡಿಕೊಡಬೇಕೆಂದು ಎಲ್ಲರ ಪರವಾಗಿ ನಾನು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಇನು ನಮ್ಮ ಜಿಲ್ಲೆಯಲ್ಲಿ ಯಾವ ನೀರಾವರಿ ಯೋಜನೆ ಇಲ್ಲ. ಇರುವ ಸಣ್ಣ ಸಣ್ಣ ನೀರಾವರಿ ಕೆಲಸ ಕಾರ್ಯಗಳೂ ಸಹ ಬಹಳ ನಿಧಾನವಾಗುತ್ತಿವೆ. ವರ್ಷೇ ವರ್ಷೇ ನಾವು ಹೇಳುತ್ತಲೇ ಇದ್ದೇವೆ, ಕೆಲಸ ಕಾರ್ಯಗಳು ಏನೂ ಆಗಿಲ್ಲ. ಇದಕ್ಕೆ ಕಾರಣವೇನು ಎಂಬುದನ್ನು ಪರಿಶೀಲಿಸಬೇಕು. ಹೆಚ್ಚಿನ ಪ್ರಮಾಣದಲ್ಲಿ ಆಹಾರ ಉತ್ಪಾದನೆಯ ವಿಷಯದಲ್ಲಿ ನಮ್ಮ ಬೀದರ್ ಜಿಲ್ಲೆ ಯಾವ ರೀತಿಯಿಂದಲೂ ಮುಂದುವರಿದಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಆದುದರಿಂದ ಅಲ್ಲಿ ಒಂದು ಸಂಶೋಧನಾ ಕೇಂದ್ರ ಸ್ಥಾಪನೆ ಮಾಡಿ ಹೆಚ್ಚು ಆಹಾರ ಧಾನ್ಯ ಬೆಳೆಯುವಂತೆ ಸಲಹೆ ಸಹಾಯ ಒದಗಿಸಬೇಕು. ಇದಕ್ಕೆ ಹೆಚ್ಚು ಹಣ ಒದಗಿಸಿಕೊಟ್ಟು ಬಡ ರೈತರ ಕಷ್ಟ ದೂರ ಮಾಡಬೇಕೆಂದು ತಮ್ಮಲ್ಲಿ ಬಹಳ ವಿನಯದಿಂದ ಕೇಳಿ ಕೊಳ್ಳುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನಾನು ನನ್ನಮಾತನ್ನು ಮುಗಿಸುತ್ತೇನೆ.

† ಕೆ. ಎಸ್. ಗೌಡಯ್ಯ (ಕೃಷ್ಣರಾಜ ನಗರ).—ಮಾನ್ಯ ಅಧ್ಯಕ್ಷರೇ, ಈಗ ಕ್ಷಾಮ ಪರಿಹಾರ ವಿಷಯದ ನಿರ್ಣಯದ ಬಗ್ಗೆ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ, ತಮಗೆ ಮೊದಲು ವಂದಿಸುತ್ತೇನೆ. ಮತ್ತು ಈ ವಿಷಯದ ಬಗ್ಗೆ ಮಾತನಾಡಲು ಇಚ್ಛಿಸುತ್ತೇನೆ.

ನಮ್ಮ ಇಂಡಿಯಾ ದೇಶದಲ್ಲಿ ವ್ಯವಸಾಯ ಎಂಬುದು ಒಂದು ಜೂಜು ಆಗಿದೆ ಎಂದು ಒಬ್ಬರು ಹೇಳಿದ್ದಾರೆ. ವ್ಯವಸಾಯವನ್ನೇ ನಂಬಿಕೊಂಡಿರತಕ್ಕಂಥ ನಮ್ಮ ಜನರಿಗೆ ಜೀವನ ಒಂದು ಜೂಜು ಆಗಿ ಪರಿಣಮಿಸಿದೆ. ಇದಕ್ಕೆ ಕಾರಣವೇನೆಂದರೆ ಮಳೆ ಕಾಲ ಕಾಲಕ್ಕೆ ಬೀಳದೆ ಇರುವುದು. ಪ್ರಕೃತಿ ನಿಯಂತ್ರಣ ಮಾನವನ ಮೇಲೆ ಏನು ಇದೆಯೋ ಅದನ್ನು ತನ್ನ ಹತೋಟಿಗೆ ತೆಗೆದುಕೊಳ್ಳಲು ಗೊತ್ತಿಲ್ಲ. ಇದಕ್ಕೆ ನಮ್ಮ ಹಿರಿಯರು ಅನೇಕ ಸಲಹೆಗಳನ್ನು ಇಟ್ಟಿದ್ದಾರೆ. ಮಳೆ ಬರುವುದಕ್ಕೆ ಅನೇಕ ದೇವರ ಪೂಜಾ ಪರ್ಜನ್ಯ ಜಪ ಮಾಡಬೇಕೆಂದು ಹಿರಿಯರು ಹೇಳಿದ್ದಾರೆ. ಮಳೆ ಬಾರದೇ ಇರುವಾಗ್ಗೆ ಪೂಜಾ ಜಪ ಮಾಡುವುದರಿಂದ ಮೇಲೆ ಮೋಡ ಬಂದು ಒಂದೇ ಸಮನೆ ಮಳೆ ಬೀಳುವುದೆಂದು ಕೇಳಿದ್ದೇವೆ. ಅದು ದೇವರ ವಿಷಯವಾಯಿತು. ಈಗ ವಿಜ್ಞಾನ ವಿಷಯ ಬಹಳ ಮುಂದುವರಿದಿದೆ. ಕೆಲವು ವರ್ಷಗಳ ಹಿಂದೆ ನಾನು ಕೇಳಿದ್ದೇನೆ. ಕೆಲವುಕಡೆ ಕೃತಕ ಮಳೆ ಸುರಿಸಿ ನೀರಿನ

(ಶ್ರೀ ಕೆ. ಎಸ್. ಗೌಡಯ್ಯ)

ಅಭಾವ ದೂರ ಮಾಡಲಾಗಿದೆ ಎಂದು. ಕೆಲವು ಕಡೆ ಇದು ನಡೆಯಿತು. ಆದರೆ ಇತ್ತೀಚೆಗೆ ಅದರ ಹೇಳ ಹೆಸರಿಲ್ಲದಂತಾಗಿದೆ. ಈ ವಿಜ್ಞಾನ ಪ್ರಯೋಗಕ್ಕೆ ಸಹಾಯಮಾಡಿ ಸಂಶೋಧನೆ ಮಾಡಲು ಏಕೆ ಹಣ ಖರ್ಚು ಮಾಡಬಾರದು ಎಂದು ಕೇಳುತ್ತೇನೆ. ಮಳೆ ಕಾಲ ಕಾಲಕೆ ಬರುವ ಹಾಗೆ ನಿಯಂತ್ರಣವಿಟ್ಟು ನಮ್ಮ ಹತೋಟಿಗೆ ನಾವು ಕಾಲಕ್ಕೆ ತೆಗೆದುಕೊಳ್ಳುತ್ತಾರೆಯೋ ಗೊತ್ತಿಲ್ಲ. ಮುಂದಿನ ಪೀಳಿಗೆಗೆ ಬರಲಿ ಎಂದು ಆಶಿಸುತ್ತೇನೆ.

ನಮ್ಮ ದೇಶದಲ್ಲಿ ಮಳೆ ಎಷ್ಟು ಬೀಳುತ್ತದೆ ಎಂಬುದನ್ನು ಅಳತೆ ಮಾಡತಕ್ಕಂಥ ವಿಧಾನ ಏನು ಇದೆಯೋ ಅದು ಒಬೀರಾಯನ ಕಾಲದ್ದು ಇದೆ. ಮಳೆ ಬೀಳುವುದು ಅಳೆಯುವುದನ್ನು ಅಲ್ಲ ಇಲ್ಲ ಇಟ್ಟಿದ್ದಾರೆ. ಅದರ ರೀಡಿಂಗ್ಸ್ ತೆಗೆದುಕೊಳ್ಳುವವರು ಯಾರು ಎಂದರೆ ಒಬ್ಬ ಪೋಲೀಸ್ ಕಾನ್ ಸ್ಟೇಬಲ್ ನೇಮಿಸಿರುತ್ತಾರೆ. ಅವರು ಸರಿಯಾಗಿ ನೋಡುತ್ತಾರೋ ಇಲ್ಲವೋ ಗೊತ್ತಿಲ್ಲ. ರಿಕಾರ್ಡ್ ಬಂದ ಮೇಲೆ ಎಷ್ಟೋ ಸಾರಿ ತಪ್ಪು ರಿಕಾರ್ಡ್ ಆದುದನ್ನು ನೋಡಿದ್ದೇವೆ. ರಿಕಾರ್ಡ್ ಆದಷ್ಟು ಮಳೆಯಾಗಿರುವುದಿಲ್ಲ. ಆದ್ದರಿಂದ ಸರಿಯಾಗಿ ಲೆಕ್ಕ ಸಿಕ್ಕುವುದಿಲ್ಲ. ಇಂಥ ಪರಿಸ್ಥಿತಿ ಇಂದು ಇದೆ. ಇದನ್ನು ಸುವ್ಯವಸ್ಥಿತಗೊಳಿಸಿ ಎಷ್ಟು ಮಳೆ ಬೀಳುತ್ತದೆ ಎಂಬುದಕ್ಕೆ ಸರಿಯಾಗಿ ತನಿಖೆ ನಡೆಸಬೇಕು. ಅಂಥ ಒಂದು ವ್ಯವಸ್ಥೆ ಮಾಡಬೇಕೆಂದು ಸರಕಾರಕ್ಕೆ ಸಲಹೆ ನೀಡುತ್ತೇನೆ. ನಮ್ಮ ಕೃಷ್ಣರಾಜನಗರ ತಾಲ್ಲೂಕಿನಲ್ಲಿ 1,63,000 ಎಕರೆ ಜಮೀನು ಇದೆ. ಇದರಲ್ಲಿ ನೀರಾವರಿ ಪ್ರದೇಶ 35,000 ಎಕರೆ ಮಾತ್ರ ಇದೆ. ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಕೃಷ್ಣರಾಜ ಸಾಗರ ಇದೆ, ಅಲ್ಲಿ ನೀರಾವರಿ ಭೂಮಿ ಬಹಳ ಹೆಚ್ಚಾಗಿದೆ, ಅಭಾವವಿಲ್ಲ ಎಂದು ಬಹಳ ಜನ ತಿಳಿದುಕೊಂಡಿದ್ದಾರೆ. ಆದರೆ ಅದು ಸರಿಯಲ್ಲ ಎಂದು ನಾನು ಹೇಳುತ್ತೇನೆ. 20 ಅಂಗುಲ ಅದಕ್ಕೂ ಕಡಿಮೆ ಮಳೆ ಬರತಕ್ಕಂಥ ಎಷ್ಟೋ ಪ್ರದೇಶ ನಮ್ಮ ತಾಲ್ಲೂಕಿನಲ್ಲಿದೆ. ಕೆಲವು ಕಡೆ ಮಳೆ ಬಾರದೆ ಕುಡಿಯುವ ನೀರಿನ ತೊಂದರೆ ಇದೆ. ಕಳೆದ ಎರಡು ಮೂರು ದಿವಸಗಳಲ್ಲಿ ಮಳೆಯಾಗಿರಬಹುದು. ಆದರೆ ಖುಷ್ಕಿ ಬೆಳೆಗೆ ಬಹಳ ನಷ್ಟ ಉಂಟಾಗಿದೆ. ಹತ್ತು ಸಾವಿರ ಎಕರೆ ಭೂಮಿಯಲ್ಲಿ ವಾಸ ಮಾಡತಕ್ಕಂಥ ಜನರಿಗೆ ಆಹಾರ ತೊಂದರೆಯಾಗಿದೆ, ದನಗಳಿಗೆ ಹಾಕುವುದಕ್ಕೆ ಮೇವು ಇಲ್ಲದಿದ್ದರಿಂದ ಮೇವಿನ ತೊಂದರೆಯಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಕಾವೇರಿ ಮಾತೆಯು ನಮ್ಮ ತಾಲ್ಲೂಕಿನ ಮಧ್ಯ ಭಾಗದಲ್ಲಿಯೇ ಹರಿದು ಹೋಗುತ್ತಿದ್ದಾಳೆ. ಆದರೂ ಕೂಡ ನೀರಾವರಿ ಪ್ರದೇಶ ನಮ್ಮ ತಾಲ್ಲೂಕಿನಲ್ಲಿ ಬಹಳ ಕಡಿಮೆ ಇದೆ. ಕೆಲವು ದೃಷ್ಟಿಯಿಂದ ನಮ್ಮ ತಾಲ್ಲೂಕು ಬಹಳ ಹಿಂದುಳಿದದ್ದಾಗಿದೆ.

ಕೆಲವು ವರ್ಷಗಳ ಹಿಂದೆ ಕಾವೇರಿ ಮತ್ತು ಅದರ ಉಪನದಿಗಳಿಗೆ ಸಂಬಂಧಪಟ್ಟ ಹಾಗೆ ಕೆಲವು ಮಧ್ಯಮ ವರ್ಗದ ಜಲಾಶಯಗಳನ್ನು ನಿರ್ಮಾಣ ಮಾಡಲಿಕ್ಕೆ ಕೆಲವು ಯೋಜನೆಗಳನ್ನು ಹಾಕಿದ್ದರು ಅವು ನಮ್ಮ ದುರಾದೃಷ್ಟದಿಂದ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಅವು ಪುನರ್ವಿಮರ್ಶೆಯಲ್ಲಿವೆ ಎಂದು ಹೇಳಿದರು. ಆ ಪುನರ್ವಿಮರ್ಶನಾ ಕಾರ್ಯದಲ್ಲಿ ಈ ಯೋಜನೆಗಳು ಯಾವ ಘಟ್ಟದಲ್ಲಿವೆ ಎನ್ನುವುದು ಗೊತ್ತಾಗಿಲ್ಲ. ನಮ್ಮ ಕಡೆಯ ರೈತರು ಎಂತಹ ಜನ ಎಂದರೆ ಇನ್ನೂ ಕೂಡ ಗದ್ದೆಗಳಲ್ಲಿ ಪಾತಿಗಳನ್ನು ಮಾಡಿಕೊಂಡು ಬಿತ್ತನೆ ಮಾಡುವುದಕ್ಕೆ ಸದಾ ಸಿದ್ಧರಾಗಿರುತ್ತಾರೆ. ಉತ್ತರ ಕರ್ಣಾಟಕದಲ್ಲಿ ಹೊಲದ ಪಕ್ಕದಲ್ಲಿ ಚಾನಲ್ ಇದ್ದರೂ ಕೂಡ ಅದನ್ನು ಜನ ಉಪಯೋಗಿಸುತ್ತಿಲ್ಲ ಎಂದು ಆ ಕಡೆಯಿಂದ ಬಂದವರು ಹೇಳುತ್ತಾರೆ ಸರ್ಕಾರದವರು ಕೂಡ ಆ ರೀತಿ ಆಗಾಗ್ಗೆ ಹೇಳುತ್ತಾ ಇದ್ದಾರೆ. ಆದರೆ ನಮ್ಮ ಕಡೆ ಹಾಗಲ್ಲ ಜನ ಕಾದು ಕುಳಿತಿರುತ್ತಾರೆ ಕಾಲುವೆಯಲ್ಲಿ ನೀರು ಬರುತ್ತದೆ ಎಂದು ಆದ್ದರಿಂದ ಮಧ್ಯಮವರ್ಗದ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದರೆ ಅದರಿಂದ ಪ್ರತಿಫಲ ಬೇಗ ದೊರೆಯುತ್ತದೆ. ಕ್ಷಾಮ ನಿವಾರಣೆಗೆ ಬಹಳ ಅನುಕೂಲವಾಗುತ್ತದೆ ಎಂದು ಸರ್ಕಾರದವರಿಗೆ ಸಲಹೆ ಮಾಡುತ್ತೇನೆ.

ಕಂಬದ ಕಡ ಮತ್ತು ಹಾರಂಗಿ ಯೋಜನೆಗಳನ್ನು ಬೇಗ ಕೈಕೊಳ್ಳಲು ವಿಶದವಾದ ಅಂದಾಜು ನಕ್ಷೆ ಮತ್ತು ಎಷ್ಟು ಖರ್ಚಾಗುತ್ತದೆ ಎಂಬುದನ್ನು ತಯಾರುಮಾಡಿ ಕೇಂದ್ರ ಸರ್ಕಾರದವರ ಒಪ್ಪಿಗೆಗೆ ಮತ್ತು ಅವರಿಂದ ಅದಕ್ಕೆ ಬೇಕಾದ ಹಣ ಪಡೆಯುವುದಕ್ಕೆ ಪ್ರಯತ್ನ ಮಾಡಿ ಆ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಸಣ್ಣ ನೀರಾವರೀ ಯೋಜನೆಗಳನ್ನು ನಮ್ಮ ತಾಲ್ಲೂಕಿನಲ್ಲಿ ಪ್ರಾರಂಭ ಮಾಡುವುದಕ್ಕೆ ಒಂದು ತೊಡಕು ಇದೆ ಸ್ವಾಮಿ, ಅದೇನೆಂದರೆ ಇಂತಿಂತಹ ಕಡೆಗಳಲ್ಲಿ ಹಾರಂಗಿ, ಕಂಬದ ಕಡದಿಂದ ಕಾಲುವೆ ಬರುತ್ತದೆ ಎಂಬ ಭಾವನೆಯಿಂದ ಅಲ್ಲಿ ಕೆರೆ ಏಕೆ ಕಟ್ಟಬೇಕೆಂಬ ಭಾವನೆ ಇದೆ. ಅದು ಅನಾವಶ್ಯಕ ಏಕೆ ದುಡ್ಡು ಖರ್ಚುಮಾಡಬೇಕೆಂಬ ಭಾವನೆಯಿಂದ ಮಧ್ಯಮ ದರ್ಜೆಯ ಯೋಜನೆಯೂ ಇಲ್ಲದೇ ಸಣ್ಣ ನೀರಾವರೀ ಯೋಜನೆಯೂ ಇಲ್ಲವೆ ಜನ ಕಷ್ಟಪಡುತ್ತಾ ಇದ್ದಾರೆ. ಆದ್ದರಿಂದ ಯಾವ ಯಾವ

ಕಡೆ ಮಧ್ಯಮ ದರ್ಜೆಯ ಯೋಜನೆಗಳನ್ನು ತೆಗೆದುಕೊಂಡರೆ ಎಲ್ಲೆಲ್ಲಿ ನಾಲೆಗಳು ಹೋಗುತ್ತವೆ ಎಂಬ ಗುರುತು ಹಾಕಿಬಿಟ್ಟರೆ ರೈತರಿಗೆ ಆ ಜಲಾಶಯದಿಂದ ಎಲ್ಲಿ ನೀರು ಬರುತ್ತದೆಯೋ ಆ ಜಾಗ ಬಿಟ್ಟು ಬೇರೆ ಜಾಗದಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ಈ ದಿಶೆಯಲ್ಲಿ ಸರ್ಕಾರದವರು ಯೋಚನೆ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಅವಲರೆಡ್ಡಿ (ಶಿಡ್ಲಘಟ್ಟ).—ಮಾನ್ಯ ಅಧ್ಯಕ್ಷರೇ ನಮ್ಮ ಮಿತ್ರರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಮಂಡಿಸಿರತಕ್ಕ ಈ ನಿರ್ಣಯವನ್ನು ಅನುಮೋದಿಸುತ್ತಾ ನಾನು ಹಲವಾರು ಸಲಹೆಗಳನ್ನು ಸರ್ಕಾರದ ಮುಂದೆ ಇಡಬೇಕೆಂದು ಅಪೇಕ್ಷಪಡುತ್ತೇನೆ. ಕ್ಷಾಮದ ವಿಚಾರವಾಗಿ ಮಾತನಾಡುವಾಗ ನಮ್ಮ ಮೈಸೂರು ಸಂಸ್ಥಾನವನ್ನು ಮೂರು ಭಾಗವಾಗಿ ವಿಂಗಡಿಸಿ ಸರ್ಕಾರದವರು ಯೋಜನೆಗಳನ್ನು ಮಾಡಬೇಕೆಂದು ನನ್ನ ಅಭಿಪ್ರಾಯವಾಗಿದೆ. ಸ್ವಾಮಿ, ಈ ಸಂಸ್ಥಾನದಲ್ಲಿ ಮಲೆನಾಡು ಎಂದು ಹೇಳಿ ಹಲವು ಜಿಲ್ಲೆಗಳು ಇವೆ. ಅಲ್ಲಿ ಸವೇ ಸಾಧಾರಣವಾಗಿ ವಿಪರೀತ ಮಳೆಯಾಗತಕ್ಕ ಸ್ವಭಾವ ಅದು ಪ್ರಕೃತಿಯ ಒಂದು ನಿಯಮ. ಎರಡನೆಯ ಸೀಮೆ ಎಂದರೆ 30 ರಿಂದ 50 ಅಂಗುಲದವರೆಗೂ ಖಾಯಂ ಆಗಿ ಮಳೆಯಿಂದ ಕೂಡಿ ತಕ್ಕ ಪ್ರದೇಶ ಅಂಥ 10 ಜಿಲ್ಲೆಗಳನ್ನು ಬಿಟ್ಟರೆ ಉಳಿದ 9 ಜಿಲ್ಲೆಗಳು ಕೋಲಾರದಿಂದ ಹಿಡಿದು ಬಿಜಾಪುರದ ತನಕ ಮಳೆಯೇ ಆಗದೇ ಇರತಕ್ಕ ಜಿಲ್ಲೆಗಳು ಇವೆ. ಅವು ಕ್ಷಾಮದ ಪರಂಪರೆಯಿಂದ ಕೂಡಿರತಕ್ಕ ಜಿಲ್ಲೆಗಳಾಗಿವೆ. ನಾನು ಕೋಲಾರ ಜಿಲ್ಲೆಯಿಂದ ಬಂದಿರತಕ್ಕವನು ಕೋಲಾರ ಜಿಲ್ಲೆಗೆ ಕ್ಷಾಮ ಹೊಸದೇನೂ ಅಲ್ಲ ನಮಗೆ ಪ್ರತಿ ವರ್ಷವೂ ಕ್ಷಾಮವೇ. ಇದುವರೆಗೂ 7 ವರ್ಷದ ಪಹಣಿ ಲೆಕ್ಕ ತೆಗೆದುಕೊಂಡರೆ ಅಲ್ಲಿ 3 ಆಣೆ 4 ಆಣೆ ಬೆಳೆಯನ್ನು ಖಾಯಂ ಆಗಿ ಬೆಳೆಯುತ್ತಾ ಇದ್ದೇವೆ. ಆದ್ದರಿಂದ ಮಾನ್ಯ ಸದಸ್ಯರ ಪೈಕಿ ಅನೇಕ ಜನ ಈ ಸಭೆಯ ಮುಂದೆ ಹೇಳಿದ ಹಾಗೆ ಈ ನಿರ್ದಿಷ್ಟವಾದ ಜಿಲ್ಲೆಗಳಿಗೆ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರದವರು ಕೈಕೊಳ್ಳಬೇಕು ಈಗಾಗಲೇ ಕೈಕೊಂಡಿದ್ದಾರೆ ಕೈಕೊಂಡಿಲ್ಲ ಎಂದಲ್ಲ. ಕೋಲಾರ, ಬೆಂಗಳೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಸಾವಿರಾರು ಕೆರೆಗಳು ಇವೆ ಇದ್ದಾಗ್ಯೂ ಕೂಡ ಕ್ಷಾಮ ಏಕೆ ಎಂಬ ಪ್ರಶ್ನೆ ಬರುತ್ತದೆ ಕೆರೆ ಇದ್ದರೆ ಮಾತ್ರ ರೈತರಿಗೆ ಪ್ರಯೋಜನವಿಲ್ಲ, ಮಳೆ ಬಂದರೆ ಮಾತ್ರ ರೈತರಿಗೆ ಪ್ರಯೋಜನ. ಈ ಕಾಲದಲ್ಲಂತೂ ಕಾಲಕಾಲಕ್ಕೆ ಮಳೆ ಬರುವುದಿಲ್ಲ ಬಿತ್ತನೆ ಹಾಕತಕ್ಕ ಕಾಲಕ್ಕೆ ಮೀರಿ ಕೆರೆಗೆ ನೀರು ಬರುವ ಸಂಭವ ಉಂಟು ಆಗ ಬಿತ್ತ ಬಿತ್ತಿದರೂ ಫಸಲು ಆಗುವುದಿಲ್ಲ. ಬೇಕಾದರೆ ಇದನ್ನು ವ್ಯವಸಾಯದ ಇಲಾಖೆಯವರ ಮುಖಾಂತರ ತಿಳಿದುಕೊಳ್ಳಬಹುದು ರಾಗಿ ಬೆಳೆಯ ಮೇಲೆ ನಾವು ಬಹಳವಾಗಿ ನಂಬಿರತಕ್ಕ ಜನ ರಾಗಿ ಬೆಳೆಯಂತೂ ಕೈಗೆ ಸಿಕ್ಕುವ ಹಾಗೆ ಇಲ್ಲ ಏಕೆಂದರೆ ಕೋಲಾರ ಜಿಲ್ಲೆಯಲ್ಲಿ 22 ಅಂಗುಲ ಮಳೆಯಾಗುತ್ತದೆ ಎಂದು ಸರ್ಕಾರದ ಲೆಕ್ಕದಲ್ಲಿದೆ. ಅಲ್ಲಿ ಸುಮಾರು ಒಂದು ಅಥವಾ ಎರಡು ಅಂಗುಲ ಕೂಡ ಬರದೇ ಇರತಕ್ಕ ತಾಲ್ಲೂಕುಗಳು ಇವೆ. ಶ್ರೀಮಾನ್ ಗೌಡಯ್ಯನವರು ಹೇಳಿದ ಹಾಗೆ ಬೇಕಾದರೆ ನಾಳೆ ಯಾರನ್ನಾದರೂ ಕಳುಹಿಸಿ ನೋಡಿ ಕೆಲವು ಕಡೆ ರೈನ್‌ಗೇಜ್ ಮಾಡತಕ್ಕ ವ್ಯವಸ್ಥೆಯೇ ಇಲ್ಲ. ನಮ್ಮ ತಾಲ್ಲೂಕಿನಲ್ಲಿರತಕ್ಕ ರೇನಗೇಜ್ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆ ವಿಷಯವನ್ನು ಸಂಬಂಧಪಟ್ಟವರಿಗೆ ಬರೆದರೂ ಕೂಡ ಅದಕ್ಕೆ ಇದುವರೆಗೂ ಉತ್ತರ ಕೊಟ್ಟಿಲ್ಲ. ಅಂತೂ ಆ ಪ್ರದೇಶದಲ್ಲಿರತಕ್ಕ ಒಬ್ಬ ಕಾನ್‌ಸ್ಟೇಬಲ್ ಇಷ್ಟು ಮಳೆ ಆಯಿತು ಎಂದು ಹೇಳಿ ಏನು ಬರೆದಿರುತ್ತಾನೆ ಅದೇ ಒಂದು ಲೆಕ್ಕ, ಅದರ ಮೇಲೆ ಸರ್ಕಾರದವರು ಬೆಳೆ ನಿರ್ಣಯ ಮಾಡುತ್ತೇವೆ, ಹಣವಸೂಲು ಮಾಡುತ್ತೇವೆ, ಖಾತೆ ಮಾಡುತ್ತೇವೆ, ಪಹಣಿ ಬರೆಸುತ್ತೇವೆ ಎಂದರೆ ಅದು ಹಿಂದಿನ ಸರ್ಕಾರದ ಒಂದು ಪದ್ಧತಿ ಆದರೆ ಈಗ ಪ್ರಜಾಸರ್ಕಾರದಲ್ಲಿ ಆ ಪದ್ಧತಿಯನ್ನು ತಕ್ಷಣ ಬಿಡಬೇಕು. ಪ್ರತಿಯೊಂದು ಪಂಚಾಯ್ತಿ ಹೆಡ್‌ಕ್ವಾರ್ಟರ್‌ನಲ್ಲೂ ಕೂಡ ಒಂದು ರೇನ್‌ಗೇಜ್ ಇಡಬೇಕು, ಆಯಾಯಾ ಕ್ಷೇತ್ರದಲ್ಲಿ ಮಳೆ ಎಷ್ಟಾಗಿದೆ ಎಂಬುದನ್ನು ಕಂಡು ಹಿಡಿಯಬೇಕು. ಆಯಾಯಾ ಕ್ಷೇತ್ರಕ್ಕೆ ನಿರ್ದಿಷ್ಟವಾದ ಯೋಜನೆಯನ್ನು ತಯಾರು ಮಾಡಬೇಕು. ಇದೆಲ್ಲಾ ಪ್ರಜಾಸರ್ಕಾರದ ಕೆಲಸ. ಈಗಾಗಲೇ ನಮ್ಮ ಸರ್ಕಾರದವರು ಮೈನರ್ ಇರಿಗೇಷನ್ ಕೆಲಸಗಳಿಗಾಗಿ ಹತ್ತಾರು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಮೈನರ್ ಟ್ಯಾಂಕ್ ಇನ್‌ವೆಸ್ಟಿಗೇಷನ್ ಡಿವಿಜನ್‌ನವರು ಸರ್ವೇ ಕೆಲಸ ಪೂರ್ತಿ ಮಾಡಿದ್ದಾರೆ ಅಂದಾಜು ಮಾಡಿದ್ದಾರೆ ನನಗೆ ತಿಳಿದು ಇರುವ ಮಟ್ಟಿಗೆ 3½ ಕೋಟಿ ರೂಪಾಯಿಗಳ ಅಂದಾಜು ತಯಾರಾಗಿದೆ. ಕೆಲವು ಬಜೆಟ್‌ನಲ್ಲೂ ಕೂಡ ಸೇರಿವೆ ಕೆಲವನ್ನು ನಾನ್ ಬಡ್ಜೆಟ್ ಆಗಿದರೂ ಕೂಡ ತೆಗೆದುಕೊಂಡಿದ್ದಾರೆ. ಆದರೂ ಕೂಡ ತುರ್ತು ಪರಿಸ್ಥಿತಿಯಿಂದ ಎಷ್ಟು ಆಗಬೇಕೋ ಅಷ್ಟು ಆಗುತ್ತಿಲ್ಲ. ಶ್ರೀಮಾನ್ ಬಸಪ್ಪನವರು ಹೇಳಿದ ಹಾಗೆ ಆಫೀಸಿನಲ್ಲಿ ರೆಡ್ ಟೇಪಿಸಂ ಇದೆ, ಕಾನೂನೂ ಕೂಡ ಸ್ವಲ್ಪ ರಿಲ್ಯಾಕ್ಸ್ ಮಾಡಬೇಕು. ಹಿಂದೆ ಒಬ್ಬ ಎಕ್ಸಿಕ್ಯೂಟೀವ್ ಎಂಜಿನಿಯರಿಗೆ 25 ಸಾವಿರ ರೂಪಾಯಿಗಳವರೆಗೂ ಮಂಜೂರು ಮಾಡತಕ್ಕ ಅಧಿ

(ಶ್ರೀ ಎಸ್. ಅವಲರೆಡ್ಡಿ)

ಕಾರವಿತ್ತು. ಈಗ ಅದನ್ನು 10 ಸಾವಿರ ರೂಪಾಯಿಗಳಿಗೆ ಲಿಮಿಟ್ ಮಾಡಿದ್ದೀರಿ. ಆ ರೀತಿ ಮಾಡಿರುವುದು ಸರಿಯಲ್ಲ ಮೈನರ್ ಇರಿಗೇಷನ್ ಕೆಲಸ ಶೀಘ್ರವಾಗಿ ನಡೆಯಬೇಕಾದರೆ 25 ಸಾವಿರ ರೂಪಾಯಿಗಳವರೆಗೂ ಕೆಲಸ ನಡೆಸತಕ್ಕ ಅಧಿಕಾರ ಅವರಿಗೆ ಕೊಡಬೇಕೆಂದು ತಮ್ಮ ಮುಖಾಂತರ ಹೇಳಿಕೊಳ್ಳುತ್ತೇನೆ. ಇರಿಗೇಷನ್ ಪಂಪು ಸೆಟ್ಟುಗಳನ್ನು ನಮ್ಮ ಸರ್ಕಾರದವರು ಅವರ ಒಂದು ಸ್ಕೀಂ ಪ್ರಕಾರ ಕೊಡುತ್ತಾ ಇದ್ದಾರೆ. ಗಾಯತ್ರಿ ಮಂತ್ರ ಜಪಿಸಿದ ಹಾಗೆ ಜಪಿಸಬೇಕಾಗಿದೆ. ಗಾಯಿತ್ರಿ ಮಂತ್ರ ಜಪಮಾಡಿ ಯಾವ ರೀತಿ ತಮ್ಮ ಇಷ್ಟಾರ್ಥವನ್ನು ಈಡೇರಿಸಿಕೊಳ್ಳುತ್ತಾರೆಯೋ ಅದೇ ರೀತಿ ನಮ್ಮ ಸರ್ಕಾರದ ಇರಿಗೇಷನ್ ವೆಲ್ಸ್ ಮತ್ತು ಐ.ಪಿ. ಸೆಟ್ಟುಗಳನ್ನು ಪಡೆದುಕೊಳ್ಳಬೇಕಾಗಿದೆ. ಇನ್ನೂ ಹತ್ತಾರು ವರ್ಷಗಳ ಕಾಲದವರೆಗೂ ಪ್ರತಿಯೊಂದು ಕುಟುಂಬವು ಕೂಡ ಒಂದು ಬಾವಿ ಮತ್ತು ಒಂದು ಐ.ಪಿ. ಸೆಟ್ಟನ್ನು ಹೊಂದುವವರೆಗೂ ಈ ಸ್ಕೀಮನ್ನು ನಿಲ್ಲಿಸಬಾರದು ಎಂದು ಹೇಳುತ್ತೇನೆ. ಒಂದು ಉದಾಹರಣೆ ಹೇಳುವುದಾದರೆ ಕೋಲಾರ ಜಿಲ್ಲೆಯಲ್ಲಿ ಇರಿಗೇಷನ್ ವೆಲ್ಸ್‌ಗಳಿಂದ ನಾವು ವ್ಯವಸಾಯವನ್ನು ಮಾಡುತ್ತಾ ಇದ್ದೇವೆ. ಮತ್ತು ನಮಗೆ ಆ ಪ್ಯೂರ್ ವಾಟರ್ ಸಿಕ್ಕುತ್ತಾ ಇದೆ. ನೀವು 3ಸಾವಿರ ರೂಪಾಯಿ ಕೊಡುತ್ತೀರಿ ಆದರೂ ಅದರಲ್ಲಿ 500 ರೂಪಾಯಿ ಸಬ್ಸಿಡಿ— ಬಹಳ ಉದಾರವಾಗಿಯೆ ಕೊಡುತ್ತಾ ಇದ್ದೀರಿ. ಆದರೂ ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಒಂದಕ್ಕೇ 2 ಸಾವಿರ ಪಂಪ್ ಸೆಟ್‌ಗಳಿಗೆ ಅರ್ಜಿಗಳು ಬಂದಿವೆ. ಸರ್ಕಾರದವರು ಕೊಟ್ಟಿರ ಬಹುದು 650 ಇದರಲ್ಲಿ ಡಲವರಿ ಆಗಿರುವುದು 314 ಇದು ಒಂದು ವರ್ಷದ ಪ್ರೋಗ್ರೆಸ್ ಇದಕ್ಕೆ ಕಾರಣವೇನು? ಎಂಬುದನ್ನು ಸರ್ಕಾರದವರು ಪರಿಶೀಲನೆಮಾಡಬೇಕು. ಎಷ್ಟು ಅರ್ಜಿಗಳು ಬರುತ್ತವೆಯೋ ಅಷ್ಟಕ್ಕೂ ಕೂಡ ಕೊಡುವುದಕ್ಕೆ ಸಿದ್ಧವಾಗಿರಬೇಕು ಆ ರೀತಿ ಮಾಡಿದ್ದೇ ಆದರೆ ಇಂತಹ ತರ್ಹ ಪರಿಸ್ಥಿತಿಯಲ್ಲಿ ಅವರು ಸಾಧ್ಯಾ-ವಾದಷ್ಟೂ ಬೆಳೆ ಬೆಳೆಯುವುದಕ್ಕೆ ಸಿದ್ಧವಾಗಿರುತ್ತಾರೆ. ಅದರಲ್ಲಿ ಅನುಮಾನವೇ ಇಲ್ಲ.

ಈ ಬಾಬಿಗೆ ಯಾವ ರೀತಿಯಿಂದಲಾದರೂ ಸರಿ ಹಣವನ್ನು ಒದಗಿಸಿ ಜನರಿಗೆ ಪಂಪುಸೆಟ್ಟುಗಳನ್ನು ಮತ್ತು ಕರೆಂಟನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ—ಈ ವಿಚಾರದಲ್ಲಿ ನಾವು ಸರ್ಕಾರದವರಿಗೆ ಒಂದು ಸ್ಕೀಮನ್ನು ಕೊಟ್ಟು ಇಲ್ಲಿಗೆ 5 ವರ್ಷಗಳ ಮೇಲಾಯಿತು. ನಮ್ಮ ಜಿಲ್ಲೆಯಲ್ಲಿ 5 ನದಿಗಳು ಹುಟ್ಟಿ ಹರಿಯುತ್ತವೆ.—ಅವು ಯಾವುವೆಂದರೆ-ಪಾಲಾರ್, ಪೆನ್ನಾರ್-ಉ. ಪಿನಾಕಿನಿ ದ. ಪಿನಾಕಿನಿ ಮತ್ತು ಚಿತ್ರಾವತಿ ಇತ್ಯಾದಿ ನದಿಗಳು. ಈ ನದಿಗಳ ದಡದಲ್ಲೆಲ್ಲಾ ಜಮೀನುಗಳು ಬಂಜರೇ ಬಿದ್ದಿವೆ. ಜನರಿಗೆ ಸರ್ಕಾರದವರು ಪಂಪ್‌ಸೆಟ್ಟನ್ನೊದಗಿಸಿದರೆ ಅವರು ಅಲ್ಲಿ ನೀರನ್ನು ಎತ್ತಿ ವ್ಯವಸಾಯ ಮಾಡಬಹುದು. ಭಾವಿಗಳನ್ನು ತೆಗೆದರೆ ಮೇಲೆಯೇ ನೀರು ಸಿಕ್ಕುತ್ತೆ. ಅಲ್ಲಿ 25-30 H. P. ಪವರಿನ ಪಂಪ್‌ಸೆಟ್ಟುಗಳನ್ನು ಒದಗಿಸಿದ್ದೇ ಆದರೆ ಅಲ್ಲಿ 50-75 ಸಾವಿರ ಎಕರೆ ಜಮೀನು ನೀರಾವರಿಯಾಗಲು ಅವಕಾಶವಿರುತ್ತೆ. ಇಲ್ಲಿಯವರೆಗೂ ಈ ವಿಚಾರದಲ್ಲಿ ಸರ್ಕಾರ ಒಂದು ಹೆಜ್ಜೆಯನ್ನೂ ಮುಂದಿಟ್ಟಿಲ್ಲ; ಅಷ್ಟು ಲೆತರ್ಜಿಟಿಕ್ ಆಗಿದೆ ನಮ್ಮ ಸರ್ಕಾರ; ಈ ರೀತಿಯಾದರೆ ನಾವಿನ್ನು ಹೇಗೆ ಈ ಎಮರ್ಜನ್ಸಿಯಲ್ಲಿ ಹೆಚ್ಚು ಆಹಾರ ಬೆಳೆಯಬೇಕೋ ಗೊತ್ತಾಗುತ್ತಿಲ್ಲ. ಹೀಗಾದರೆ ದೇಶದಲ್ಲಿ ಕ್ಷಾಮವೂ ಸಹ ತಪ್ಪುವುದಿಲ್ಲ.

4 P.M.

ಇನ್ನು ಮೂರನೆಯದಾಗಿ ನಮ್ಮಲ್ಲಿರತಕ್ಕ ಕೆರೆಗಳಲ್ಲಿ ಈ ಹಿಂದೆ ರಾಜಮಹಾರಾಜರುಗಳೂ ಪಾಳೆಗಾರರೂ ಕಟ್ಟಿಸಿದವುಗಳಾಗಿವೆ. ಆದರೆ ಅನೇಕ ಕೆರೆಗಳನ್ನು ಕಟ್ಟಿಸಿದರೆ, ಕೆಲವನ್ನು ರೆಸ್ಟೋರ್ ಸಹ ಮಾಡಿಸಿದ್ದಾರೆ. ಆದರೂ ಇನ್ನೂ ರೆಸ್ಟೋರ್ ಆಗತಕ್ಕ ಕೆರೆಗಳು ಬಹಳವಾಗಿವೆ. ಇದಕ್ಕಾಗಿ ಸರ್ಕಾರದವರೊಂದು ಸ್ಕೀಮನ್ನು ಮಾಡಿದಾರೆ. ದೇಶದಲ್ಲಿ ನೀರಿಲ್ಲದಂಥ ಕೆರೆಯೊಂದೂ ಇರಬಾರದೆಂತ ಹೇಳಿದ್ದಾರೆ. ಆದರೆ ಕೆಲವು ಕೆರೆಗಳ ಪಕ್ಕದಲ್ಲೇ 1-2 ಫರ್ಲಾಂಗುಗಳಲ್ಲಿ ಹಳ್ಳಗಳು ಹರಿದು ಹೋಗುತ್ತವೆ. ಅಂಥಾ ಹಳ್ಳಗಳನ್ನು ಅಕ್ಕಪಕ್ಕದಲ್ಲೇ ಇರುವ ಕೆರೆಗಳಿಗೆ ತಿರುಗಿಸಿದರೆ ಅದರಿಂದ ಬಹಳ ಅನುಕೂಲವಾಗುತ್ತೆ. ಇದರಿಂದ ಕ್ಷಾಮ ನಿವಾರಣೆಗೆ ಬಹಳ ಸಹಾಯವಾಗುತ್ತದೆ. ಆದರೆ ಈ ದಿವಸ ಎಲೆಕ್ಟ್ರಿಸಿಟಿ ಬೋರ್ಡಿನವರು ಕರೆಂಟನ್ನು ಕೊಡಲು ಇಂತಿಷ್ಟು ಉತ್ಪತ್ತಿ ಬರಬೇಕೆಂತ ಅವರೇನೋ ಒಂದು ಲೆಕ್ಕ ಹಾಕುತ್ತಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಆ ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಆದೇಶವನ್ನು ಕೊಟ್ಟು ಆ ರೀತಿ ಮಾಡಬಾರದೆಂದು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ. ದೇಶದ ಉತ್ಪತ್ತಿಯನ್ನು ಹೆಚ್ಚಿಸತಕ್ಕ ರೈತರ ವಿಷಯದಲ್ಲಿ ಪಂಪ್‌ಸೆಟ್‌ಗಳನ್ನು ಹಾಕೋ ವಿಚಾರದಲ್ಲಿ ಹೀಗೆಲ್ಲಾ ಲೆಕ್ಕಾಚಾರ ಹಾಕುವುದು ಸರಿಯಲ್ಲ ಎಂದು ಹೇಳುತ್ತೇನೆ.

[MR. SPEAKER in the Chair.]

ಇನ್ನು ಕಾಂಟೂರ್ ಬಂಡಿಂಗ್ ವಿಚಾರದಲ್ಲಿ ರಾಜ್ಯ ಸರ್ಕಾರದವರೂ ಮತ್ತು ಕೇಂದ್ರ ಸರ್ಕಾರದವರೂ ವಿವರವಾದ ಯೋಜನೆಗಳನ್ನು ಹಾಕಿರುತ್ತಾರೆ. ಆದರೆ ನಮ್ಮ ಜಿಲ್ಲೆಯಂತೂ ಈ ವಿಚಾರ ಏನೂ ನಡೆದಿಲ್ಲ. ಆದರೆ ಈ ಕಾಂಟೂರು ಬಂಡಿಂಗ್ ಸ್ಕೀಮ್ ಸ್ಯಾಂಟಿರ್ವಿನ್ ಫಾರ್ ಇರುವ ಜಿಲ್ಲೆಗಳಿಗೆ ಬಹಳ ಒಳ್ಳೆಯದೆಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಜಮೀನಿನ ಸುತ್ತಲೂ ಒಂದು ದೊಡ್ಡ ಕಟ್ಟೆ ಹಾಕಿದರೆ ಆ ಜಮೀನಿನಲ್ಲಿ ಸ್ವಲ್ಪ ನೀರು ನಿಂತು ಅಲ್ಲಿ ಬೆಳೆ ಆಗುವುದಲ್ಲದೆ ಅಲ್ಲದರತಕ್ಕ ಸುತ್ತಮುತ್ತಲಿನ ಜಮೀನುಗಳಿಗೂ ತಂಪು ಹೋಗಿ ಜನರಿಗೆ ಬಹಳ ಅನುಕೂಲವಾಗುತ್ತದೆ. ಇದರಿಂದ ಸಬ್‌ಸಾಯಿಲ್ ವಾಟರಿಗೂ ಅನುಕೂಲವಾಗುತ್ತದೆ. ಕ್ಷಾಮ ಪೀಡಿತ ಒಂಭತ್ತು ಜಿಲ್ಲೆಗಳಿಗೂ ಟಾಪ್ ಪ್ರಯಾರಿಟಿ ಕೊಟ್ಟು ದೇಶಕ್ಕೆಲ್ಲ ಅನುಕೂಲವಾಗುವಂತೆ—ಹೆಚ್ಚು ಆಹಾರ ಬೆಳೆಯಲು ಈ ಅನುಕೂಲಗಳನ್ನೆಲ್ಲ ಸರ್ಕಾರದವರು ಕೂಡಲೇ ಒದಗಿಸಬೇಕೆಂದು ಹೇಳಿ ನನಗಿಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Business of the House.

Mr. SPEAKER.—Before I call upon anybody, I am suggesting to the Hon'ble Minister that we will have the whole of day for Debate by the Members. The Hon'ble Minister will not be called upon to reply to-day. In view of the large number of Members who are willing to participate in the Debate. I am suggesting that we will have no 'Question Hour' tomorrow. We can use that hour also for the Debate.

Sri SANJEEVANATH AIKALA (Suratkal).—Sir, in view of the fact that a large number of questions are pending, it is better to have the 'Question Hour'.

Mr. SPEAKER.—How can I satisfy both ways if hon. Members do not co-operate ?

Sri B. D. JATTI (Minister of Fnance).—Sir, this is an important issue in the discussion of which many Members want to participate. If the Members are interested in the 'Question Hour' we can give 15 minutes more on the next day for the Question Hour.'

Mr. SPEAKER.—To-morrow we will not have the 'Question Hour' I do not know whether I have to extent the time for the Debate to-morrow also by one or two hours in view of the large number of Members of who are willing to participate.

MOTION Re: SCARCITY CONDITIONS IN THE STATE.

(*Debate continued.*)

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮಿ ಅಧ್ಯಕ್ಷರೇ, ಈ ಕ್ಷಾಮ ನಿವಾರಣೆ ವಿಚಾರದಲ್ಲಿ ಸರ್ಕಾರದವರು 'ಯುದ್ಧಕಾಲೇ ಶಸ್ತ್ರಾಭ್ಯಾಸೇ' ಎಂದು ಹೇಳುವಂತೆ ಚೀಣಾ ದೇಶದವರು ಬಂದ ಮೇಲೆ ಶಸ್ತ್ರಾಭ್ಯಾಸಕ್ಕೆ ತೊಡಗಿದರು, ಈಗ ದೇಶದಲ್ಲೆಲ್ಲಾ ಕ್ಷಾಮ ಡಾಮರಗಳ ಹಾವಳಿ ಹರಡಿರುವಾಗ ಕ್ಷಾಮ ಪರಿಹಾರ ವಿಚಾರವನ್ನು ಈ ಸಭೆಯ ಮುಂದೆ ಚರ್ಚೆಗೆ ತಂದಿದ್ದಾರೆ. ಈ ಹಿಂದೆ ನಮ್ಮ ದೇಶದಲ್ಲಿ ರೇಷನ್ ಪದ್ಧತಿ ಜಾರಿಯಲ್ಲಿದ್ದಾಗ ಜನರು ನಾನಾ ರೀತಿಯಲ್ಲಿ ಕಷ್ಟನಷ್ಟ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಗಳಿಗೊಳಗಾದುದೇ ಅಲ್ಲದೇ-ಅನೇಕ ಜನರು ಹಸಿವು ತೃಷೆಗಳಿಂದ ಬಳಲಿ-ಕಂಗೆಟ್ಟು ಸತ್ತುಹೋದರು. ಆಗಲೇ ಸರ್ಕಾರದವರು ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿತ್ತು. ಆದರೆ ಈಗ ಪರಿಸ್ಥಿತಿ ಇನ್ನೂ ಹದಗೆಡುತ್ತದೆ. ಆದರೆ 'Better late than never' ಎಂದು ಹೇಳುವಂತೆ ಈಗಲಾದರೂ ಸರ್ಕಾರದವರು ಈ ವಿಚಾರದಲ್ಲಿ ಕಣ್ಣು ಬಿಟ್ಟಿದ್ದಾರೆ. ಆದರೆ ಇಲ್ಲಿ ಭಾಷಣಗಳನ್ನು ಮಾಡಿದನಂತರ ಈ ವಿಚಾರವನ್ನು ಇಷ್ಟಕ್ಕೇ ಕೈಬಿಡುವುದಾದರೆ ಇದರಿಂದೇನೂ ಪ್ರಯೋಜನವಾಗುವುದಿಲ್ಲ. ಈ ಕ್ಷಾಮ ಡಾಮರಗಳ ಹಾವಳಿಯನ್ನು ನೀಗಲು ಶಾಶ್ವತವಾದ ಮಾರ್ಗಗಳೇನಿರುತ್ತವೆಂಬುದನ್ನು ಕಂಡು ಹಿಡಿದು ಅವುಗಳನ್ನು ಕೂಡಲೇ ಕೈಗೊಳ್ಳಬೇಕು. ಜನರಿಗೆ ಈಗಾಗಲೇ ತಾಗಿರತಕ್ಕ ಬಿಸಿ ಸಾಕಾಗಿವೆ. ಅವರಿನ್ನು ತಡೆಯುವಂತಿಲ್ಲ. ಆದುದರಿಂದ ಕೂಡಲೇ ಶಾಶ್ವತವಾದ ಪರಿಹಾರ ಮಾರ್ಗಗಳನ್ನು ಕೈಗೊಳ್ಳಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಈ ಕ್ಷಾಮ ನಿವಾರಣೆಗೆ ಮುಖ್ಯವಾಗಿ ಎರಡು ವರ್ಗಗಳಿವೆ. ಒಂದು ಶಾಶ್ವತವಾದದ್ದು ಇನ್ನೊಂದು ತಾತ್ಕಾಲಿಕವಾದದ್ದು. ಈ ರೀತಿ ಪರಿಹಾರಮಾರ್ಗ ಎರಡು ರೀತಿಯಾಗಿರುತ್ತದೆ. ಶಾಶ್ವತವಾದ ಪರಿಹಾರ ಮಾರ್ಗವನ್ನು ಕಂಡುಹಿಡಿಯಲು ಹೆಚ್ಚು ಹಣ-ಆಹಾರ ಬೇಕಾಗುತದೆ. ಇಲ್ಲವೇ ಹೆಚ್ಚಿನ ನಿಗಾ ಕೊಟ್ಟು ಕೆಲಸ ಮಾಡಬೇಕು. ವ್ಯವಸಾಯದ ಕಸಬಿನಲ್ಲಿ ಎರಡು ರೀತಿ ಇದೆ—ಒಂದು ಎಕ್ಸ್‌ಟೆನ್ಸೀವ್ ಕಲ್ಟಿವೇಷನ್ ಇನ್ನೊಂದು ಇಂಟೆನ್ಸೀವ್ ಕಲ್ಟಿವೇಷನ್. ಈ ಎರಡನ್ನೂ ನಾವು ವಹಿಸಬೇಕಾಗಿದೆ. ನಾನು ನಮ್ಮ ಕ್ಷೇತ್ರಕ್ಕೆ ಅನ್ವಯಿಸುವಂತೆ ಹೇಳುವುದಾದರೆ ಯಾವಾವ ರೈತರಿಗೆ ಉಳಲು ಜಮೀನಿಲ್ಲವೋ ಅಂಥವರಿಗೆಲ್ಲಾ ಅಮೃತ ಮಹಲ್ ಕಾವಲಿನಲ್ಲಿರತಕ್ಕ ಜಮೀನನ್ನೂ ಮತ್ತು ಬಂಜರ್ ಫಾರೆಸ್ಟಿನಲ್ಲಿರತಕ್ಕ ಜಮೀನನ್ನು ಎಲ್ಲರಿಗೂ ಹಂಚಿಕೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಇದರಿಂದ ಜನರಿಗೊಂದು ಉತ್ಸಾಹ ಮೂಡುತ್ತದೆ. ಇದರಿಂದ ಜನರು ವ್ಯವಸಾಯ ಕಸಬಿನಲ್ಲಿ ಹೆಚ್ಚಿಗೆ ತಲ್ಲೀನರಾಗಿ ಇದರಿಂದ ಕ್ಷಾಮ ನಿವಾರಣೆಗೆ ಅನುಕೂಲವಾಗುತ್ತದೆ. ಇದೆಲ್ಲ ಎಕ್ಸ್‌ಟೆನ್ಸೀವ್ ಕಲ್ಟಿವೇಷನಾಯಿತು. ಇನ್ನು ಇಂಟೆನ್ಸೀವ್ ಕಲ್ಟಿವೇಷನ್ ಬಗ್ಗೆ ಹೇಳುವುದಾದರೆ—ಇದರಲ್ಲೂ ಪ್ರಯತ್ನಪಟ್ಟರೆ ಹೆಚ್ಚಿನ ಉತ್ಪತ್ತಿ ತೆಗೆದುಕೊಳ್ಳುವುದಕ್ಕೆ ಅವಕಾಶವಿವೆ. ಈಗ ಒಂದು ಎಕರೆಗೆ ಅರೇ ಜೋಳ ರಾಗಿ 2-2½ ಪಲ್ಲ ಆಗುತ್ತದೆ. ಅದೇ ಎಕರೆಯಲ್ಲಿ 10 ಪಲ್ಲ ರಾಗಿ ಬೆಳೆಯುವುದಕ್ಕೂ ಅವಕಾಶವಿದೆ. ಅದು ಹೇಗೆಂದರೆ-ಆ ಭೂಮಿಗೆ ಹೆಚ್ಚಿಗೆ ಗೊಬ್ಬರ ಹಾಕುವುದು—ಮತ್ತು ಅದಕ್ಕೆ ಅಷ್ಯೂರ್ಡ್ ವಾಟರ್ ಸಪ್ಲೈ ದೊರೆಯುವಂತೆ ಮಾಡಿದರೆ ಅದೂ ಕೂಡ ಸಾಧ್ಯವಾಗುತ್ತೆ. ಈ ದಿವಸ ಯಾರೂ ಕೇವಲ ಮಳೇ ನೀರನ್ನೇ ನಂಬಿಕೊಂಡು ರಾಗಿ-ಜೋಳ ಬೆಳೆಯುತ್ತಿದ್ದಾರೋ ಅವರಿಗೆ ಬಹಳ ಕಡಮೆ ಇಳುವರಿ ಬರುತಿದೆ.

ಇದರಿಂದಾಗಿ ಖುಷ್ಕಿ ಬೆಳೆ ಸರಿಯಾಗಿ ಆಗುತ್ತಿಲ್ಲ. ಖುಷ್ಕಿ ಬೆಳೆಗೆ ಯಾವತ್ತಿಗೂ ಅಷ್ಯೂರ್ಡ್ ವಾಟರ್ ಸಪ್ಲೈ ಇರಬೇಕು. ಇದಕ್ಕೆ ತಾವೇನೋ ಹೇಳಬಹುದು, ಮೀಡಿಯಂ ಇರಿಗೇಷನ್ನು ಯೋಜನೆಗಳಿವೆ. ಇದರ ಮೂಲಕ ನಾಲಾಗಳನ್ನು ತೋಡಿಸಿ ನೀರು ಒದಗಿಸಬಹುದು. ಕೆರೆಗಳನ್ನು ದುರಸ್ತಿಮಾಡಿ ನೀರು ನಿಲ್ಲುವಂತೆ ಮಾಡಬಹುದು. ಬಾವಿಗಳನ್ನು ತೆಗೆಸಬಹುದು, ಐ. ಪಿ. ಸೆಟ್ಟುಗಳಿವೆ. ಇವುಗಳ ಮೂಲಕ ಅಷ್ಯೂರ್ಡ್ ವಾಟರ್ ಸಪ್ಲೈ ಸಿಗುವಂತೆ ಮಾಡಬೇಕಾದರೂ ಅದಕ್ಕೆ ಸರಿಯಾದಂತಹ ಒಂದು ಯೋಜನೆಯನ್ನು ನಾವು ಹಾಕಿಕೊಳ್ಳಬೇಕಾದುದು ಅಗತ್ಯ. ಸಾಮಾನ್ಯವಾಗಿ ನಾವು ಬೆಳೆಯುವಂತಹ ರಾಗಿಬೆಳೆಯನ್ನು ತೆಗೆದು ಮೆದೆ ಹಾಕಿದಾಗ ಅವನ್ನು ಕುಟ್ಟೆಹುಳುಗಳು ಕೊರೆದು ನಾಶಮಾಡುತ್ತವೆ. ಇದರಿಂದ ರಾಗಿ ಬೆಳೆ ಹಾಳಾಗಿ ಹೋಗುತ್ತಿವೆ. ತಿಳುವಳಿಕೆ ಇಲ್ಲದ ರೈತರು ಮೆದೆ ಹಾಕಿದ ರಾಗಿ ಪೈರಿಗೆ ರೋಗ ಬರುತ್ತದೆ ಎನ್ನುವುದನ್ನೂ ತಿಳಿದಿರುವುದಿಲ್ಲ. ಇಂತಹ ರೋಗಗಳು ಬರಲು ಕಾರಣ ಬೆಳೆಮಾಡಿದ ಫಸಲು ನೆಲದಮೇಲೆ ತಗುವುದರಿಂದ ಆಗುತ್ತಿದೆ. ಇಂತಹ ರೋಗಗಳನ್ನು ತಡೆಗಟ್ಟುವ ಸಲುವಾಗಿ ಸರ್ಕಾರದವರು ತಜ್ಞರ ಸಲಹೆಯನ್ನು ಪಡೆದು ಈ ಬೆಳೆಗಳಿಗೆ ಯಾವ ಯಾವ ಕೀಟಗಳಿಂದ ಕಾಯಿಲೆಗಳು ಬರುತ್ತವೆ ಅವುಗಳನ್ನು ನಿವಾರಣೆ ಮಾಡಲಿಕ್ಕೆ ಏನುಮಾಡಬೇಕು, ರೈತರಿಗೆ ಸರಿಯಾದ ಸಲಹೆಗಳನ್ನು ಸಕಾಲದಲ್ಲಿಕೊಟ್ಟು ರೋಗಗಳು ಬಾರದಂತೆ ಹೆಚ್ಚಿನ ಬೆಳೆಯನ್ನು ಹೇಗೆ ಮಾಡಬಹುದು ಎನ್ನುವುದರ ಬಗೆಗೆ ಸಲಹೆಗಳನ್ನೂ ಕೊಟ್ಟು ಸಹಾಯಮಾಡಬೇಕು.

ಇದೇರೀತಿ ದನಗಳಿಗೆ ಹೆಚ್ಚು ಗಮನ ಕೊಡಬೇಕು. ರಾಗಿ ಬೆಳೆಯು ಹೆಚ್ಚುಬಂದರೆ ಅದರ ಹುಲ್ಲು ದನಕರುಗಳಿಗೆ ಅನುಕೂಲವಾಗುತ್ತದೆ, ಅದಕ್ಕೆ ತಕ್ಕಂತೆ ಹೆಚ್ಚಿನ ಕಾಳನ್ನೂ ಬೆಳೆದರೆ ಕ್ಷಾಮ ನಿವಾರಣೆ ಮಾಡಲು ಹೆಚ್ಚು ಸಹಾಯಕವಾಗುತ್ತದೆ. ಇದಕ್ಕೆ ಮುಖ್ಯವಾಗಿ ಬೇಕಾಗಿರುವುದು Phosphatic manures ಇಂಥಹ ಗುಣಗಳಿರತಕ್ಕ ಗೊಬ್ಬರಗಳನ್ನು ಉಪಯೋಗಿಸಬೇಕು

ಮತ್ತು ಅದಕ್ಕೆ ತಕ್ಕಂತಹ ಸಲಹೆಗಳನ್ನು ರೈತರಿಗೆ ಕೊಟ್ಟು ಅವುಗಳ ಸಹಾಯದಿಂದ ಹೆಚ್ಚಿನ ಕಾಳನ್ನು ಬೆಳೆಯುವಂತೆ ಮಾಡಬಹುದು, ಇದಕ್ಕಾಗಿ ಈಗ ಪರದೇಶಗಳಿಂದ ಗೊಬ್ಬರವನ್ನು ತರಿಸಿ ಕೊಳ್ಳಬೇಕಾಗಿದೆ, ಈ ರೀತಿ ಹೊರದೇಶಗಳಿಂದ ತರುವುದಕ್ಕೆ ಬದಲಾಗಿ ನಮ್ಮ ದೇಶದಲ್ಲಿಯೇ ಒಂದು manure plant ಎನ್ನುವುದನ್ನು ಸ್ಥಾಪನೆ ಮಾಡಿದರೆ ರೈತರಿಗೆ ಇಲ್ಲೇ ಹೆಚ್ಚಿನ ಗೊಬ್ಬರ ಸಿಕ್ಕಿ ಅನುಕೂಲವಾಗುತ್ತದೆ.

ಇದರಿಂದ ಕಾಳುಗಳ ಇಳುವರಿಯನ್ನೂ ಹೆಚ್ಚುಮಾಡಿ ಕೊಂಡಂತಾಗುತ್ತದೆ. ಇನ್ನು ಕಾಳನ್ನು ಸ್ಟೋರು ಮಾಡುವುದು ಬಹುಮುಖ್ಯವಾದ ಕೆಲಸ. ನಾವೇನೋ ರಾಗಿ, ಜೋಳ, ಇತ್ಯಾದಿ ದವಸಗಳನ್ನು ಬೆಳೆಸುತ್ತಿದ್ದರೂ ಅವುಗಳನ್ನು ಸರಿಯಾಗಿ ಸ್ಟೋರು ಮಾಡದೇ ಇರುವುದರಿಂದ ಎಷ್ಟೋ ಪಾಲು ಧಾನ್ಯಗಳು ಹಾಳಾಗಿ ಹೋಗುತ್ತಿವೆ. ಪ್ರತಿಯೊಬ್ಬ ರೈತನೂ ಕೂಡ ತಾನು ಬೆಳೆಯುವ ಧಾನ್ಯವನ್ನು ಸರಿಯಾಗಿ ಕಣಜವನ್ನು ಮಾಡಿಕೊಂಡು ಇಡುವುದಕ್ಕಾಗದೇ ಇರುವುದರಿಂದ ಅವನು ಬೆಳೆದ ದವಸಗಳನ್ನು ಇಲಿ, ಹಗ್ಗಣಗಳು ತಿಂದು ಹಾಳಾಗಿ ಹೋಗುತ್ತಿವೆ. ಸುಮಾರು ಶೇಕಡಾ ೨೫ ಭಾಗ ರೈತ ಬೆಳೆದ ಧಾನ್ಯಗಳಲ್ಲಿ ಇಲಿಗಳ ಪಾಲಾಗುತ್ತಿವೆ. ಇದನ್ನು ತಪ್ಪಿಸಲಿಕ್ಕೆ ರೈತನಿಗೆ ಸರಿಯಾದ ಕಣಜ ಕಟ್ಟಲು ಸಿಮೆಂಟು ಇತ್ಯಾದಿಗಳು ಸಿಗದೆ ಕಷ್ಟವಾಗುತ್ತಿದೆ. ಇದಕ್ಕಾಗಿ ಸರಕಾರ ರೈತನ ಅನುಕೂಲಕ್ಕಾಗಿ ಸಿಮೆಂಟು ವಗೈರೆಗಳನ್ನು ಕೊಡಿಸಿಕೊಟ್ಟು ಸರಿಯಾದ ಕಣಜಗಳನ್ನು ಕಟ್ಟಿಸಿಕೊಡುವುದು ಸರಕಾರದ ಆದ್ಯಕರ್ತವ್ಯವಾಗಿದೆ, ಇದನ್ನು ಬೇಗನ ಮಾಡಬೇಕು. ಇದೇ ರೀತಿ ಪ್ರತಿಯೊಂದು ಹೋಬಳಿಯಲ್ಲಿಯೂ ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ವೇರ್‌ಹೌಸುಗಳನ್ನು ಎಂದರೆ ದೊಡ್ಡ ಉಗ್ರಾಣದ ಮಳಿಗೆಗಳನ್ನು ಕಟ್ಟಿಸಿಕೊಡಬೇಕು. ಇಲ್ಲದೇ ಹೋದರೆ ಬಡ ರೈತರಿಗೆ ಸ್ಟೋರೇಜು ಮಾಡುವುದಕ್ಕೆ ಸಾಧ್ಯವಿಲ್ಲ. ಆದಕಾರಣ ಬಡರೈತರು ಅವರು ಬೆಳೆದ ದವಸ ಧಾನ್ಯಗಳನ್ನು ಸರಿಯಾಗಿ ಕಾಪಾಡಿಕೊಂಡು ಇಡಲು ಪ್ರತಿ ತಾಲ್ಲೂಕಿನಲ್ಲಾದರೂ ಇಂತಹ ದೊಡ್ಡ ಉಗ್ರಾಣದ ಮಳಿಗೆಗಳನ್ನು ಕಲ್ಪಿಸಿಕೊಡಬೇಕಾದುದು ಅವಶ್ಯಕ. ಇದಕ್ಕೆ ಅನುಕೂಲವಾದಂತೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ grain co-operatives ಎನ್ನುವ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಅದರ ವ್ಯವಹಾರಗಳನ್ನು ಮಾಡಲು ಅನುಕೂಲವಾಗುತ್ತದೆ. ಇಂಥಹ ಸಂಸ್ಥೆಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸ್ಥಾಪಿಸಿದರೆ ಇದರಿಂದ ರೈತರಿಗೆ ಸಹಾಯ ಮಾಡಿದಂತಾಗುತ್ತದೆ. ಇದನ್ನು prevention of wastage ಸಾಮಾನ್ಯವಾಗಿ ರೈತ ತಾನು ಬೆಳೆದಂತಹ ಧಾನ್ಯವನ್ನು ಸರಿಯಾಗಿ ಉಪಯೋಗಿಸಿಕೊಂಡು ಅದು ಪೋಲಾಗದಂತೆ ನೋಡಿಕೊಳ್ಳುವುದು ಅವಶ್ಯಕ. ವೇರ್‌ಹೌಸುಗಳನ್ನು ನಾವು ನೋಡಿರುವಂತೆ ಕೆಲವು ಕಡೆಗಳಲ್ಲಿ ಅನೇಕರ ಅಶ್ರದ್ಧೆಯಿಂದಾಗಿ ಧಾನ್ಯಗಳೆಲ್ಲಾ ಕೆಟ್ಟುಹೋಗುತ್ತಿದೆ. ಕಲವು ಕಡೆಗಳಲ್ಲಿ ಕೊಳೆತೂ ಹೋಗುತ್ತಿದೆ. ವರ್ತಕರಿಗೆ ಸಹಾಯ ಮಾಡುವುದಕ್ಕೋಸ್ಕರ ಆಹಾರಧಾನ್ಯಗಳನ್ನು ಸ್ಟಾಕುಮಾಡಿ ಅವನ್ನು ವ್ಯಾಪಾರಕ್ಕಾಗಿ ಕೊಡುವಾಗ ಈ ವೇರ್‌ಹೌಸುಗಳಲ್ಲಿ ಸುಮಾರು ಶೇಕಡಾ 20, 25 ರಷ್ಟು ಭಾಗ ದವಸಗಳು ಕೊಳೆತು ಹಾಳಾಗಿ ಹೋಗಿರುತ್ತವೆ. ಮತ್ತು ಧಾನ್ಯಗಳನ್ನು ಮುಗ್ಗಿಸಿಟ್ಟಿರುತ್ತಾರೆ. ಹೀಗೆ ದವಸಗಳನ್ನು ಹಾಳು ಮಾಡಿ ಮುಗ್ಗಿಸುತ್ತಿರುವಂತಹವರ ಮೇಲೆ ತಕ್ಕಕ್ರಮ ತೆಗೆದುಕೊಂಡು ಅಂಥವರಿಗೆ ಶಿಕ್ಷೆ ವಿಧಿಸಬೇಕು. ಮತ್ತು ಈ ರೀತಿ ದೇಶ ಕಂಟಕವಾದ ಕೆಲಸಗಳಿಗೆ ಸರಕಾರ ಅವಕಾಶ ಕೊಡದಂತೆ ಮಾಡಿದರೆ ಎಷ್ಟೋ ಬಡಜನಗಳಿಗೆ ಉಪಕಾರವಾಡಿದಂತಾಗುತ್ತದೆ. ಇದೇರೀತಿ ನಮ್ಮ ಜನಗಳೂ ಕೂಡ ಕಾಳನ್ನುಪಯೋಗಿಸುವುದರಲ್ಲಿ ಹೆಚ್ಚುಶ್ರದ್ಧೆ ತೋರಿಸಬೇಕು. ಬೇಯಿದಂತಹ ಕಾಳುಗಳಲ್ಲಿ ಒಂದು ಕಾಳು ಪೋಲಾಗದಂತೆ ಪ್ರತಿಯೊಬ್ಬರೂ ನೋಡುವುದಾದರೆ ಸುಮಾರು ಬೆಳೆಯುವ ದವಸದಲ್ಲಿ ಕಾಲುಭಾಗದಷ್ಟನ್ನಾದರೂ ಉಳಿಸಬಹುದು. ಹೀಗೆ ಉಳಿಸುವ ಧಾನ್ಯಗಳನ್ನು ಬಡಜನಕ್ಕೆ ಕೊಟ್ಟು ಸಹಾಯ ಮಾಡಬಹುದು. ಇನ್ನು ದೊಡ್ಡವರ ಮನೆಗಳಲ್ಲಿ ಮದುವೆ, ಮುಂಜಿ ಇತ್ಯಾದಿ ಸಮಾರಂಭಗಳಲ್ಲಿ ಆಗುತ್ತಿರುವ Extravagance ಗಳನ್ನು ತಪ್ಪಿಸಬೇಕು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆ ಖರ್ಚಿನಲ್ಲಿ ದವಸಧಾನ್ಯಗಳನ್ನು ಉಪಯೋಗಿಸಬೇಕು ಎಂದು ನನ್ನ ಸಲಹೆ.

ಮದುವೆಗಳಲ್ಲಿ ಊಟ ಮಾಡುವಾಗ ನೋಡುವುದಾದರೆ ಮುಕ್ಕಾಲು ಭಾಗದಷ್ಟು ಪೋಲಾಗುತ್ತಿದೆ, ಕಾಲುಭಾಗಮಾತ್ರ ಉಪಯೋಗವಾಗುತ್ತಿದೆ.

ಇನ್ನು ಕ್ಷಾಮ ನಿವಾರಣೆಗೋಸ್ಕರ ಶಾಶ್ವತವಾದ ಪರಿಹಾರಗಳನ್ನು ಕೊಡುವುದರ ಸಲುವಾಗಿ ಎಲ್ಲರೂ ಅವರವರ ಕ್ಷೇತ್ರಗಳ ಅನುಭವದ ಮೇಲೆ ಇಲ್ಲಿ ಹೇಳಿದ್ದಾರೆ. ಅದರಂತೆ ಪ್ರತಿಯೊಂದು ಗ್ರಾಮದ ಮುಂದೆಯೂ ಒಂದು ಕೆರೆಯನ್ನು ಕಟ್ಟಬೇಕು, ಪ್ರತಿಯೊಂದು ಕಡೆಯಲ್ಲಿಯೂ ಒಡೆದಿರುವ ಕಟ್ಟೆಗಳನ್ನು ರಿಪೇರಿ ಮಾಡಿಸಿಕೊಡಬೇಕು. ಇದನ್ನು ಮಾಡಲು ಈಗ ಸರಿಯಾದ ಸಮಯ ಮತ್ತು ರೈತರಿಗೆ ಈ ಕ್ಷಾಮ ನಿವಾರಣೆಯಕಾಲದಲ್ಲಿ ಸಹಾಯ ಮಾಡಿದಂತೆಯೂ ಆಗುತ್ತದೆ ಮತ್ತು ಜನಗಳಿಗೂ ಕೆಲಸ ಒದಗಿಸಿದಂತಾಗುತ್ತದೆ. ಕೆರೆ ಕಟ್ಟೆಗಳನ್ನು ಈ ಸಮಯದಲ್ಲಿ ಸಾಧ್ಯ

(ಶ್ರೀ ಎಚ್. ಆರ್. ಕೇಶವಮೂರ್ತಿ)

ವಾದ ಮಟ್ಟಿಗಾದರೂ ರಿಪೇರಿ ಮಾಡಿಸಿಕೊಡಬೇಕು ನಮ್ಮ ಕಾನ್ಸ್‌ಟಿಟ್ಯುಯೆನ್ಸಿ ಹೇಗಿದೆ ಎಂದರೆ ವರ್ಷಕ್ಕೆ ಹತ್ತು ಇಂಚಿನಿಂದ 25 ಇಂಚಿನವರೆಗೆ ಮಳೆ ಬೀರಿ ಬರುವುದಿಲ್ಲ.

ಇಲ್ಲಿ ನೀರಾವರಿ ಬಾವಿಗಳಲ್ಲಿ ಇದು Rainshadow area ಮಳೆ ಇಲ್ಲಿ ವಿಪರೀತ ವಾಗಿಯೂ ಬರುವುದಿಲ್ಲ ಗಾಳಿ ಹೆಚ್ಚಾಗಿ ಬೀಸುತ್ತದೆ. ಇಂತಹ ಸ್ಥಳಗಳಲ್ಲಿ ಲಿಫ್ಟ್ ಇರಿಗೇಷನ್ನು ಮಾಡಲು ಬಹಳ ಅನುಕೂಲವಿದೆ. ಈಗಾಗಲೇ ಇಲ್ಲಿಗೆ ಎಲೆಕ್ಟ್ರಿಕ್ ಲೈನು ಬರುತ್ತದೆ. ಅದಕ್ಕಾಗಿ ಇಲ್ಲಿಗೆ ಹೆಚ್ಚು ಹೆಚ್ಚಾಗಿ ಕರೆಂಟನ್ನು ಜನಗಳಿಗೆ ಕೊಡಬೇಕು. ಇದರಜೊತೆಗೆ windmills ಎನ್ನುವುದನ್ನು ಇಲ್ಲಿ ಮಾಡಬಹುದು. ನಮ್ಮ ಕ್ಷೇತ್ರದಲ್ಲಿ ಇದನ್ನು ಸ್ಥಾಪನೆ ಮಾಡಿದರೆ ಹೆಚ್ಚು ಹೆಚ್ಚಾಗಿ ಪಂಪುಸೆಟ್ಟುಗಳನ್ನು ತೆಗೆದುಕೊಂಡು ಲಿಫ್ಟ್ ಇರಿಗೇಷನ್ನು ಮೂಲಕ ಮಾಡಲು ಅನುಕೂಲವಾಗುತ್ತದೆ. ಇದರಿಂದ ಹೆಚ್ಚುಹೆಚ್ಚು ವಿಂಡಮಿಲ್ಲುಗಳನ್ನು ಸ್ಥಾಪನೆ ಮಾಡಿಸಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಮತ್ತೆ ಇನ್ನು ಕೆಲವು ಕಡೆ ಕೆರೆಗಳಿವೆ, ಅವುಗಳು ಹೂಳು ತುಂಬಿ ಹೋಗಿರುತ್ತವೆ. ಅವುಗಳ ಲಿಸ್ಟನ್ನು ಆಲಾಯಿದ ಕೊಡುತ್ತೇನೆ. ಇಂಥ ಕೆರೆಗಳನ್ನು ಡಿಸಿಲ್ಟ್ ಮಾಡಿಸಿಕೊಡಬೇಕು. ಮಳೆ ಬರುತ್ತದೆ. ಆದ್ದರಿಂದ ಹೂಳು ತೆಗೆಸಿ ಕೆರೆಗಳಲ್ಲಿ ಹೆಚ್ಚು ನೀರು ನಿಲ್ಲುವಂತೆ ಅವಕಾಶ ಮಾಡಿಕೊಡಬೇಕು.

ನಾಲೆಗಳ, ಕೆರೆಗಳ ತೂಬು ಅಗಲವಾಗಿರುವುದರಿಂದ ಮಳೆಗಾಲದಲ್ಲಿ ಮತ್ತೆ ಮಳೆ ಇಲ್ಲದಾಗ ಹೆಚ್ಚು ಪ್ರದೇಶದಲ್ಲಿ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಸಾಮಾನ್ಯವಾಗಿ ಪ್ರತಿವರ್ಷವೂ 50 ಎಕರೆಯ ಒಂದು ತರಿ ಬಯಲಿನಲ್ಲಿ 35 ಎಕರೆಗೆ ಉಪಯೋಗಿಸಿಕೊಳ್ಳಬೇಕು. ನೀರನ್ನು ಮಿತವ್ಯಯ ಮಾಡಿಕೊಂಡರೆ ಎರಡು ಎಕರೆಯಲ್ಲಿ, ಮೂರು ಎಕರೆಯಲ್ಲಿ ಆಗತಕ್ಕಂಥ ಪೈರನ್ನು ತೆಗೆಯಬಹುದು. ಈಗ ಗದ್ದೆ ಬಯಲಿನಲ್ಲಿ ಸಿಕ್ಕಾಪಟ್ಟೆ ನೀರು ಹರಿಯುತ್ತಿರುವುದನ್ನು ನೋಡಬಹುದು. ನಾಲೆಗಳ ನೀರನ್ನು ಮಿತವ್ಯಯದಿಂದ ಉಪಯೋಗಿಸಿಕೊಂಡು, ಒಂದು ಮಾಕ್ಸಿಮಂ ಪೈರನ್ನು ತೆಗೆಯುತ್ತಾ ಇಲ್ಲ. ಸರಿಯಾಗಿ ಮಿತವ್ಯಯ ಮಾಡಿದರೆ ಈಗಿರುವ ನೀರಿನಿಂದಲೇ ಸಾವಿರಾರು ಎಕರೆಗಳ ಹೆಚ್ಚು ಜಮೀನನ್ನು ಸಾಗುವಳಿ ಮಾಡಬಹುದು. ನೀರನ್ನು ಹೆಚ್ಚಾಗಿ ಪೋಲು ಮಾಡದಂತೆ ನೋಡಿಕೊಂಡು, ಉಳಿದ ನೀರನ್ನು ಹೆಚ್ಚು ಪ್ರದೇಶಕ್ಕೆ ಒದಗಿಸಿ ಸಾಗುವಳಿ ಮಾಡಲು ಅವಕಾಶ ಮಾಡಿಕೊಡಬೇಕು.

ಹಿಂದೆ ಶ್ರೀ ರಾಜಗೋಪಾಲಾಚಾರಿಯವರು ಹೇಳಿದ್ದಾರೆ: ನೀರು ಇಲ್ಲದೆ ಬೆಳೆಯುವಂಥ ಭತ್ತವನ್ನು ಕಂಡುಹಿಡಿಯಬೇಕು. ನೀರಿನಿಂದ ಬೆಳೆಯುವ ಭತ್ತದ ಜೊತೆಗೆ, ನೀರಿಲ್ಲದೆ ಬೆಳೆಯುವಂಥ ಭತ್ತದ ಬೀಜವನ್ನು ಕಂಡುಹಿಡಿಯಬೇಕು ಕೊಯಂಬತ್ತೂರು ಸಣ್ಣ, ಬರೋಡ ಬತ್ತ, ಇವುಗಳ ಹಾಗೆ ವೆರೈಟಿಗಳನ್ನು ಜಾಸ್ತಿ ಮಾಡಬೇಕು. ಮತ್ತು ಅಂಥ ಬೀಜಗಳನ್ನು ದೇಶಾದ್ಯಂತ ಹಂಚಬೇಕು. ಆ ತರಹ ಬೆಳೆಯುವ ಜನರಿಗೆ ಪ್ರೋತ್ಸಾಹ ಕೊಡಬೇಕು. You must evolve a variety of seed which can grow without much water. ಅದೇ ರೀತಿಯಾಗಿ ರಾಗಿ ಮತ್ತು ಜೋಳಗಳಿಗೆ ಕೂಡ ಇಂಥ ಬೀಜಗಳನ್ನು, ಅಂದರೆ vagaries of rainfall withstand ಮಾಡತಕ್ಕಂಥ ಶಕ್ತಿಯುಳ್ಳ ಬೀಜಗಳನ್ನು ಎವಾಲ್ವ್ ಮಾಡಬೇಕು. ಮತ್ತು ಅವುಗಳನ್ನು ಜನಗಳಿಗೆ ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

ಹಿಂದೆ ಕ್ಷಾಮ ಬಂದಾಗಲೂ ದವಸಧಾನ್ಯಗಳು ಸಿಗುತ್ತಾ ಇರಲಿಲ್ಲ. ಅವಾಗ ಹುಣಸೆ ಅಂಬ್ಲಿಯನ್ನು ಅರೆದುಕೊಂಡು ಕುಡಿದು ಪ್ರಾಣ ಉಳಿಸಿಕೊಂಡಿದ್ದರು; ಅದೇ ರೀತಿ ಕತ್ತಾಳೆ ಗಿಣ್ಣನ್ನು ತಿಂದು ಪ್ರಾಣ ಉಳಿಸಿಕೊಂಡಿದ್ದರು. ಜನಗಳಿಗೆ ಹೊಟ್ಟೆ ತುಂಬ ಆಹಾರ ಸಿಕ್ಕಿದೆಯೆಂದು ಅವುಗಳನ್ನು ಕಡೆಗಣಿಸಿದ್ದಾರೆ. ಮೈಸೂರು ಫುಡ್ ಟೆಕ್ನಾಲಾಜಿಕಲ್ ಇನ್ಸಿಟ್ಯೂಟಿನವರು ಕಣ್ಣು ಮುಚ್ಚಿಕೊಂಡು ನಿದ್ರೆ ಮಾಡುತ್ತಾ ಇದ್ದಾರೆ. ಹುಣಸೆಬೀಜ, ಕಡಲೆಕಾಯಿ ಮತ್ತು ಮರಗೆಣಸು—ಇವುಗಳಿಂದ ಆಹಾರ ಪದಾರ್ಥಗಳನ್ನು (ಅಂದರೆ ಸ್ಪೆಷಲ್ ಫುಡ್) ತಯಾರು ಮಾಡಬಹುದು. ಅವುಗಳನ್ನು ತಯಾರು ಮಾಡತಕ್ಕಂಥ ಒಂದು ವಿಧಾನವನ್ನು ಕಂಡುಹಿಡಿಯುವುದಕ್ಕೆ ಅವರಿಗೆ ಒಂದು ಆದೇಶವನ್ನು ಕೊಡಬೇಕು. ಅವರು ಕಂಡುಹಿಡಿದರೆ ಅದರ ಪ್ರಯೋಜನವನ್ನು ಪ್ರಜಾಕೋಟಿ ಹೊಂದುವುದಕ್ಕೆ ಅವಕಾಶವಿದೆ.

ರೈತನಿಗೆ ಮುಖ್ಯವಾಗಿ ಒಂದು ವಿಧದಲ್ಲಿ ಸಹಾಯ ಮಾಡಬೇಕು. ಅದೇನೆಂದರೆ ಪ್ರೈಸ್ ಕಂಟ್ರೋಲ್ ಮಾಡಬೇಕು, ಪ್ರೈಸ್‌ಲೆವೆಲ್ ಮೇಂಟೇನ್ ಮಾಡಬೇಕು. ನಮ್ಮ ಕ್ಷೇತ್ರದಲ್ಲಿ ಒಂದು ಕಡೆಯಲ್ಲಿ ಜನಗಳು ಅನಾವೃಷ್ಟಿಯಿಂದ ನರಳುತ್ತಿದ್ದಾರೆ. ಒಂದು ಕಡೆ ಆಲೂಗಡ್ಡೆಯನ್ನು ಬೇಕಾದಷ್ಟು ಬೆಳೆದಿದ್ದಾರೆ, ಅದರೆ ಅದಕ್ಕೆ ಧಾರಣೆ ಇಲ್ಲ; ಒಂದು ಮೂಟೆ ಆಲೂಗಡ್ಡೆಗೆ 5 ರೂಪಾಯಿ

ಕೇಳುತ್ತಾ ಇದ್ದಾರೆ. ಅದರಿಂದ ರೈತರಿಗೆ ಬಹಳ ನಿರುತ್ಸಾಹ ಬಂದಿದೆ. ಪ್ರೈಸ್‌ಲೆವೆಲ್ ಇಲ್ಲದೆ ಇರುವುದ ರಿಂದ ರೈತರು ಕಡಿಮೆ ಬೆಲೆಗೆ ಮಾರಿ ನಷ್ಟಪಡುತ್ತಿದ್ದಾರೆ ಆದ್ದರಿಂದ ಖರೀದಿಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಕ್ರಮಗಳನ್ನು ತೆಗೆದುಕೊಳ್ಳಬೇಕು. ನಮ್ಮ ಕಾನಸ್ಟಿಟ್ಯೂಯನ್ಸಿಯಲ್ಲಿ ಶೀಘ್ರದಲ್ಲಿ ಒಂದು ಪೊಟ್ಯಾಟೊ ಡಿಹೈಡ್ರೇಟಿಂಗ್ ಪ್ಲಾಂಟ್ ಸ್ಥಾಪನೆ ಮಾಡಿಕೊಡಬೇಕು.

ಈ ಕ್ಷಾಮಕಾಲದಲ್ಲಿ ರೈತರು ಹಣದ ಅಭಾವದಿಂದ ನರಳುತ್ತಿರುತಾರೆ. ಅವರ ಮಕ್ಕಳು ಮರಿಯ ವಿದ್ಯಾಭ್ಯಾಸದ ಜವಾಬ್ದಾರಿಯೂ ಬಹಳ ಏರುತ್ತದೆ. ಆದ್ದರಿಂದ ಆ ಕೆಲಸವೂ ಸಾಗ ಬೇಕು. ಹೈಸ್ಕೂಲು ಕಾಲೇಜುಗಳಲ್ಲಿ ಓದುತ್ತಿರುವ ರೈತರ ಮಕ್ಕಳಿಗೆ ಫೀ ಮನ್ನಾ ಮಾಡಿಕೊಡ ಬೇಕು.

ನಮ್ಮ ರೈತರಿಗೆ ಒಂದು ಖಾಯಂ ಕ್ಷಾಮ ನಿವಾರಣೆ ಮಾಡಬೇಕಾದರೆ ರೈತನಿಗಿರತಕ್ಕಂಥ ಸಾಲವನ್ನೆಲ್ಲಾ ಆದಷ್ಟುಬೇಗ ಲಿಕ್ವಿಡೇಟ್ ಮಾಡಬೇಕು. ಅವನು ಸಾಲಗಾರನಾಗದಂತೆ ನೋಡಿ ಕೊಳ್ಳಬೇಕಾದ್ದು ಸರಕಾರದ ಮುಖ್ಯ ಹೊಣೆ.

Mr. SPEAKER.—The Hon'ble member will have a chance to speak better on that topic because a Bill is going to be placed before this House.

ಶ್ರೀ ಎಚ್. ಆರ್. ಕೇಶವಮೂರ್ತಿ.—ರೈತನಿಗೆ ಒಡತನ ಒಂದು ಕ್ರಾನಿಕ್ ಇರ್. ಹಳ್ಳಿಗಳ ಕಡೆ ಬಡವರು ಮತ್ತು ಜಮೀನಿಲ್ಲದವರು ನಿರ್ಗತಿಕರಾಗಿದ್ದಾರೆ. ಹಳ್ಳಿಗಳಲ್ಲಿ ಬಡವರಾಗಿ, ನಿರ್ಗ ತಿಕರಾಗಿ ಯಾರ್‍ಯಾರಿದ್ದಾರೆ ಎಂದು ಅಂಕಿ ಅಂಶ ಸಂಗ್ರಹಿಸಲು ಒಂದು ಸರ್ವೆ ಮಾಡಬೇಕು. ಏನಾದರೂ ಸಹಾಯ ಮಾಡಬೇಕಾದರೆ ಅಂಥವರ ಮೇಲೆ ಕಾನಸೆಂಟ್ರೇಟ್ ಮಾಡಿ ಸಹಾಯ ಮಾಡಬೇಕು. ಬರಗಾಲದಲ್ಲಿ ಒಂದು ಪಲ್ಲ ರಾಗಿಯನ್ನೋ, ಇನ್ನಾವುದಾದರೂ ದವಸ ಧಾನ್ಯ ವನ್ನು ಬಡವನಿಗೆ ಕೊಟ್ಟರೆ; ಅವನು 15 ದಿವಸವೋ ಒಂದು ತಿಂಗಳೋ ಜೀವವನ್ನು ಬಿಗಿಯಾಗಿ ಹಿಡಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಸರ್ವೆ ಮಾಡಿ ಲಿಸ್ಟಿನಲ್ಲಿ ಸೇರಿಸಿರುವ ನಿರ್ಗತಿಕರಿಗೆ ಪ್ರಿಫರೆನ್ಸಿಯಲ್ ಟ್ರೀಟ್‌ಮೆಂಟ್ ಕೊಟ್ಟು ಸಹಾಯ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳು ತ್ತೇನೆ.

ಕ್ಷಾಮ ಪರಿಸ್ಥಿತಿಯನ್ನು ಎದುರಿಸಲು ರೈತರು ಲೈಫ್ ಇನ್‌ಶೂರೆನ್ಸ್ ಮಾಡತಕ್ಕಂಥ ಪದ್ಧತಿ ಯನ್ನು ಆದಷ್ಟು ಬೇಗ ಜಾರಿಗೆ ತರಬೇಕು. ರೈತರು ಇನ್ಸೂರೆನ್ಸ್ ಮಾಡಲೇಬೇಕೆಂಬ ಕಡ್ಡಾಯ ವಾದ ಕಾನೂನು ಮಾಡಬೇಕು. ಅದರಂತೆಯೇ ಕ್ರಾಪ್ ಇನ್‌ಶೂರೆನ್ಸ್ ಕಾನೂನು ಕೂಡ ತಾವು ಜಾರಿಗೆ ತರಬೇಕು.

ಅದರ ಜೊತೆಗೆ, ಇರ್ರಿಗೇಶನ್ ಮುಂತಾದ ಸೆಸ್ ಹಾಕಿದಹಾಗೆ, ಫ್ಯಾಮಿನ್ ಸೆಸ್ ಅಂತ ಒಂದು ಲೋಕಲ್‌ಸೆಸ್ ಹಾಕಬೇಕು. ರೂಪಾಯಿಗೆ ಒಂದಾಣೆಯಂತೆ ಈ ಸೆಸ್ ವಸೂಲು ಮಾಡಿ ದರೆ ಕಷ್ಟ ಬಂದಾಗ ಅವನ್ನು ಉಪಯೋಗಿಸಿಕೊಳ್ಳಬಹುದು. ಡಿಫೆನ್ಸ್ ಫಂಡಿಗೆ 5 ಲಕ್ಷ ರೂಪಾಯಿ ಬಂದಿದೆ. ಅದೇ ರೀತಿ ಫ್ಯಾಮಿನ ರಿಲೀಫ್ ಫಂಡ್ ಎಂದು ಮಾಡಿ, ಸೆಸ್ ಹಾಕಿ, ಫಂಡಿಗೆ ಹಣ ಶೇಖರಿಸಬೇಕು. ಅದಕ್ಕೆ 10 ಕೋಟಿ ರೂಪಾಯಿನ ಒಂದು ಟಾರ್ಗೆಟ್ ಇಟ್ಟುಕೊಳ್ಳಬಹುದು. ಈ ಫಂಡನ್ನು ಕ್ಷಾಮನಿವಾರಣೆಗೆ ಉಪಯೋಗಿಸಿಕೊಳ್ಳಲು ಅವಕಾಶ ಮಾಡಿಕೊಳ್ಳಬೇಕು. ಈ ಸಲಹೆಗೆ ಹೆಚ್ಚು ಗಮನಕೊಟ್ಟು ಫಂಡಿಗೆ ನಿಧಿ ಶೇಖರಿಸಬೇಕು.

ಕ್ಷಾಮ ಬರತಕ್ಕ ಪ್ರದೇಶ ಸಾಮಾನ್ಯವಾಗಿ ನಾವು ಕಂಡ ಹಾಗೆ ಬಯಲು ಸೀಮೆ. ಇಲ್ಲಿ ಮುಖ್ಯವಾದ ಬೆಳೆ ರಾಗಿ, ಹುರುಳಿ. ಇಂಥ ತಾತ್ಕಾಲಿಕವಾದ ಬೆಳೆಯನು ಹಾಕುವುದರಿಂದ ಕ್ಷಾಮಕ್ಕೆ ಆಗಿಂದಾಗ್ಗೆ ತುತ್ತಾಗಬೇಕು. ಇದನ್ನು ತಪ್ಪಿಸುವುದಕ್ಕೋಸ್ಕರ ರೈತರು ಹಂಗಾಮಿ ಬೆಳೆಗಳ ಜೊತೆಗೆ ತೆಂಗು, ಅಡಿಕೆ ಮುಂತಾವ ಧೃವ ಬೆಳೆಗಳನ್ನೂ ಹಾಕಬೇಕು. ಕ್ಷಾಮ ಪರಿಸ್ಥಿತಿ ಬಂದಾಗ ಈ ಬೆಳೆಗಳು ಎಷ್ಟೋ ಜನರನ್ನು ಕಾಪಾಡುತ್ತವೆ. ಇದೇ ರೀತಿ ಸರವೆ ಮುಂತಾದ ಮರಗಳನ್ನು ಬೆಳೆಸುವುದಕ್ಕೂ ಅವಕಾಶ ಮಾಡಿಕೊಡಬೇಕು. ಧ್ರುವ ಪೈರುಗಳಿಂದ ಅಭಾವ ಪರಿಸ್ಥಿತಿಯಲ್ಲಿ ಉಸಿರಾಡುವುದಕ್ಕೂ ಅವಕಾಶ ಕೊಟ್ಟ ಹಾಗೆ ಆಗುತ್ತದೆ.

ನಮ್ಮಲ್ಲಿ ಶೇಕಡ 70 ರಿಂದ 90 ಭಾಗ ಜನರು ವ್ಯವಸಾಯವನ್ನೇ ಅವಲಂಬಿಸಿಕೊಂಡಿರು ತ್ತಾರೆ. ಇದರಿಂದ ಕ್ಷಾಮಕ್ಕೆ ತುತ್ತಾಗಬೇಕಾಗುತ್ತದೆ. ಇದನ್ನು ತಪ್ಪಿಸುವುದಕ್ಕೋಸ್ಕರ ಒಂದು ದೀರ್ಘವಾದ ಪ್ರೋಗ್ರಾಂ phased programme ಹಾಕಿಕೊಂಡು ಗ್ರಾಮ ಕೈಗಾರಿಕೆ ಗಳನ್ನು ರೂರಲ್ ಇಂಡಸ್ಟ್ರೀಸ್) ಪ್ರಾರಂಭ ಮಾಡಿದರೆ ಶೇಕಡ 60 ಜನಗಳಿಗಾದರೂ ಕೆಲಸ ಸಿಕ್ಕುತ್ತದೆ. ಉಳಿದವರು ವ್ಯವಸಾಯವನ್ನು ಅವಲಂಬಿಸಬಹುದು. ಹೀಗೆ ಮಾಡುವುದರಿಂದ Rural Industrial Expansion ಗೆ ಕೂಡ ಸಹಾಯ ಆಗುತ್ತದೆ ವ್ಯವಸಾಯದ ಕಾರ್ಮಿಕ ರನ್ನು ಕೈಗಾರಿಕಾ ಕಾರ್ಮಿಕರನ್ನಾಗಿ ಪರಿವರ್ತಿಸಿದರೆ ಅವರು ಕ್ಷಾಮಕ್ಕೆ ತುತ್ತಾಗದಂತೆ ಉಳಿಸಿ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಕೊಂಡ ಹಾಗೆ ಆಗುತ್ತದೆ. ಅದಷ್ಟು ಶೀಘ್ರವಾಗಿ ಗ್ರಾಮ ಕೈಗಾರಿಕೆಗಳನ್ನು ಪ್ರಾರಂಭ ಮಾಡ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

4-30 P.M.

ಕ್ಷಾಮ ಪರಿಸ್ಥಿತಿಯನ್ನು ಸಾಧ್ಯವಾದ ಮಟ್ಟಿಗೂ ತಡೆಗಟ್ಟಬೇಕಾದರೆ sea wealth ಏನಿದೆ ಅದನ್ನು ಕೂಡ ಉಪಯೋಗಿಸಬೇಕು. ಸಮುದ್ರದಲ್ಲಿ ಸಿಕ್ಕುವ ಮೀನನ್ನು ಹಿಡಿಯುವ ಉದ್ಯಮಕ್ಕೆ ಪ್ರೋತ್ಸಾಹ ಕೊಟ್ಟು ಮೀನನ್ನು ಹೆಚ್ಚು ಹೆಚ್ಚಾಗಿ ಶೇಖರಣೆಮಾಡಿ ಬರಗಾಲದಲ್ಲಿ ಅದನ್ನು ಸಹ ಉಪಯೋಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಇವಲ್ಲದೆ ಹೆಚ್ಚು ಹೆಚ್ಚಾಗಿ ಕುರಿಗಳನ್ನು ಸಾಕುವುದಕ್ಕೆ ಅವಕಾಶ ಮಾಡಿಕೊಡಬೇಕು. ಕುರಿ ಗಳು ದೇಶಕ್ಕೆ national wealth ಕಷ್ಟ ಕಾಲದಲ್ಲಿ ಬೇಕಾಗುತ್ತವೆ. ಕುರಿಗಳ ಬೆಳವಣಿಗೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು.

ಹಂಗಾಮಿ ಕ್ಷಾಮ ಪರಿಹಾರ ಕಾರ್ಯಗಳ ಬಗ್ಗೆ ಹೇಳಬೇಕಾದರೆ, ಈ ವರ್ಷ ಎಲ್ಲೆಲ್ಲಿ ಕ್ಷಾಮ ಪರಿಸ್ಥಿತಿ ಇದೆಯೋ ಅದನ್ನೆಲ್ಲ ಸರ್ವೆಮಾಡಿಸಿ ಅಲ್ಲಿ ಕಂದಾಯವನ್ನು ಮಾಫಿ ಮಾಡಬೇಕು. ಈ ವಿಷಯ ದಲ್ಲಿ ಸಾಮಾನ್ಯವಾದ ನಡವಳಿಕೆ ಏನು ಎಂದರೆ, ಕಂದಾಯವನ್ನು ವಸೂಲು ಮಾಡಿದ ಮೇಲೆ ಎಷ್ಟು ರಿಮಿಷನ್ ಕೊಡಬೇಕು ಎಂದು ಹೇಳುತ್ತಾರೆ. ಪಹಣಿ ಬರೆಯುವಾಗ ಶ್ಯಾನಭೋಗರು ಮನೆಯಲ್ಲೋ ಅಥವಾ ಚಾವಡಿಯಲ್ಲೋ ಕುಳಿತುಕೊಂಡು 8 ಆಣೆ ಬೆಳೆ, 10 ಆಣೆ, 6 ಆಣೆ ಬೆಳೆ, ಹೀಗೆ ಬರೆಯುತ್ತಾರೆ. ನಾಲ್ಕಾಣೆಗಿಂತ ಜಾಸ್ತಿ ಬೆಳೆ ಆಗುತ್ತದೆಂದು ಪಹಣಿಯಲ್ಲಿ ಬರೆ ದರೆ ಅಲ್ಲಿ ಅಭಾವ ಪರಿಸ್ಥಿತಿ ಇಲ್ಲವೆಂದು ತಿಳಿದು ರಿಮಿಷನ್ ಕೊಡುವುದಿಲ್ಲ. ಹೀಗೆ ಆಗುವುದಕ್ಕೆ ಅವ ಕಾಶ ಕೊಡದಂತೆ ಈಗಲೇ ಸರಿಯಾದ ತಿಳುವಳಿಕೆ ಕೊಟ್ಟು ಎಲ್ಲೆಲ್ಲಿ ಕ್ಷಾಮ ಪರಿಸ್ಥಿತಿ ಇದೆಯೋ ಅಲ್ಲಿ ನಾಲ್ಕಾಣೆಗೆ ಒಳಗೆ ಬೆಳೆಯಾಗುವುದೆಂದು ಪಹಣಿಯಲ್ಲಿ ಬರೆಯಬೇಕೆಂದು ನಾನು ಕೇಳಿಕೊಳ್ಳು ತ್ತೇನೆ.

ಇದೇ ರೀತಿಯಾಗಿ ಕ್ಷಾಮಪೀಡಿತಕ್ಕ ಪ್ರದೇಶದಲ್ಲಿ ಸೊಸೈಟಿ ಸಾಲಗಳು ಮತ್ತು ಇತರ ಸಾಲ ಗಳು ಬಾಕಿ ಇದ್ದರೆ ಈ ವರ್ಷ set off ಮಾಡಬೇಕೆಂದು ಹೇಳುತ್ತೇನೆ.

ತಕಾವಿ ಮತ್ತು land improvement ಸಾಲಗಳನ್ನು ಈಗ ಕೆಲವು ವ್ಯಕ್ತಿಗಳು ಮಾತ್ರ ತೆಗೆದುಕೊಂಡುಬಿಡುತ್ತಿದ್ದಾರೆ. ಇದನ್ನು ತಪ್ಪಿಸಲು ಪರಮಾವಧಿ ಮಿತಿಯನ್ನು 500 ರೂಪಾಯಿ ಗಳಿಗೆ ನಿಗದಿಮಾಡಬೇಕು. ಹೀಗೆ ಮಾಡಿದರೆ ಹೆಚ್ಚು ಜನರಿಗೆ ಅದರ ಅನುಕೂಲ ಸಿಕ್ಕುತ್ತದೆ.

ಕ್ಷಾಮ ಪರಿಸ್ಥಿತಿಯಿಂದಾಗಿ ನಮ್ಮ ಕಡೆ ದನಗಳೆಲ್ಲ ಲಕವಳ್ಳಿ ಕಾಡಿನ ಕಡೆ ಹೋಗಿವೆ. ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ಯಾವ ಪ್ರದೇಶದಲ್ಲಿ ಕ್ಷಾಮ ವಿದೆಯೋ ಅದರ ಅಕ್ಕಪಕ್ಕದಲ್ಲಿರುವ ಅಮೃತಮಹಲ್ ಕಾವಲು ಮತ್ತು ಕಾಡುಗಳಲ್ಲಿ ರೈತರ ದನ ಗಳು ಯಾವ ತೆರಿಗೆಯೂ ಇಲ್ಲದೆ ಮೇಯುವುದಕ್ಕೆ ಅವಕಾಶ ಕೊಡಬೇಕು. ಈ ಬಗ್ಗೆ ಕೂಡಲೇ ಅಪ್ಪಣೆ ಕೊಡಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಅತಿವೃಷ್ಟಿ ಮತ್ತು ಅನಾವೃಷ್ಟಿ ಇವುಗಳಿಂದ ಆಗುವ ತೊಂದರೆಗೆ ಜನರು ಸಿಕ್ಕದಂತೆ ತಪ್ಪಿ ಸುವುದಕ್ಕೋಸ್ಕರ ಮಾನ್ಯ ಸದಸ್ಯರಾದ ಗೌಡಯ್ಯನವರು ಹೇಳಿದ ಹಾಗೆ ಸಾಮೂಹಿಕ ಪ್ರಾರ್ಥನೆ ಮಾಡಬೇಕು ಮತ್ತು ಜನಗಳಿಗೆ ಆ ತರಹ ಬುದ್ಧಿ ಬರುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಸನ್ಮಾನ್ಯ ಸಭಾಪತಿಗಳೇ, ಇಂದು ಸಭೆಯ ಮುಂದಿರುವ, ಶ್ರೀ ಹುಚ್ಚಮಾಸ್ತಿಗೌಡರು ತಂದಿರುವ ಉಪಯುಕ್ತವಾದ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತ ಅಭಾವ ಪರಿಸ್ಥಿತಿಯ ಪ್ರದೇಶವಾದ ತುಮಕೂರು ಜಿಲ್ಲೆಯ ದುಸ್ಥಿತಿಯನ್ನು ನಾನು ಸರ್ಕಾರದ ಗಮನಕ್ಕೆ ತರಲು ಪ್ರಯತ್ನಿಸುತ್ತೇನೆ. ಈಗಾಗಲೇ ತುಮ ಕೂರು ಜಿಲ್ಲೆಯ ಇಬ್ಬರು ಸದಸ್ಯರು ಆ ಜಿಲ್ಲೆಯ ಅಭಾವ ಮತ್ತು ಕ್ಷಾಮ ಪ್ರದೇಶದ ವಿಷಯ ಗಳನ್ನು ವಿವರವಾಗಿ ಹೇಳಿದ್ದಾರೆ. ನಾನು ತುಮಕೂರು ತಾಲ್ಲೂಕಿಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ದೈವವಶಾತ್ ಮೂರು ದಿವಸಗಳಿಂದ ತುಮಕೂರಿನಲ್ಲಿ ಮಳೆ ಬಿದ್ದಿದೆ ಎಂದು ಗೊತ್ತಾಗಿದೆ. ಆದರೆ ಮುಂಗಾರುಮಳೆ ಚೆನ್ನಾಗಿ ನಡೆಯದೆ ಈಗ ಮಳೆ ಬಂದಿರುವುದರಿಂದ ನಮಗೆ ಏನೂ ಪ್ರಯೋಜನವಾಗುತ್ತ ಇಲ್ಲ, ಸರಿಯಾದ ಬೆಳೆ ದೊರಕುವುದಿಲ್ಲ. ಕೇವಲ ಮೂರನೆ ಎರಡು ಭಾಗ ಮಾತ್ರ ನಮ್ಮಲ್ಲಿ ಬೆಳೆಯನ್ನು ಇಟ್ಟಿದ್ದಾರೆ.

ಬಾಕಿ ಭೂಮಿಯನ್ನು ಉಳುಮೆ ಕೂಡ ಮಾಡಿರುವುದಿಲ್ಲ. ಈಗ ಬೆಳೆ ಇಟ್ಟಿರತಕ್ಕದ್ದು ಕೂಡ ಪೈರಿನಲ್ಲಿ ಸರಿಯಾದ ಸತ್ವವಿಲ್ಲದೆ ಈಗ ಮಳೆ ಬಂದರೂ ತೆನೆಯಲ್ಲಿ ಸರಿಯಾದ ಕಾಳು ಕೊಡುವುದಿಲ್ಲ. ಆದುದರಿಂದ ಈ ಸಾರಿ ನಮಗೆ ಎಷ್ಟು ಬೆಳೆ ಬರಬೇಕೋ ಅಷ್ಟು ಬೆಳೆಸಿಕ್ಕುವ ಹಾಗಿಲ್ಲ. ತುಮಕೂರು ಜಿಲ್ಲೆಯು ರಾಜ್ಯದಲ್ಲಿ ಹಳ್ಳಿಗಳನ್ನು ಹೊಂದಿರುವ ಜಿಲ್ಲೆಗಳಲ್ಲಿ ಎರಡನೆಯದಾಗಿದೆ. ಮಳೆಯೇ ರೈತರ ಆಧಾರ ಮತ್ತು ವ್ಯವಸಾಯವೇ ಅವರ ಕಸಬಾಗಿದೆ. ಅಂಥ ಜಿಲ್ಲೆ ಮತ್ತು ಅಂಥ ತಾಲ್ಲೂಕಿಗೆ ಸರ್ಕಾರದವರು ಅಭಾವ ಪರಿಸ್ಥಿತಿ ಆಗಾಗ್ಗೆ ಬರದಂತೆ prevention is better th n cure ಎನ್ನುವಂತೆ ಅಭಾವ ಪರಿಸ್ಥಿತಿ ಬಂದಮೇಲೆ ಅದನ್ನು ತಡೆಗಟ್ಟುವುದಕ್ಕೆ ಬದಲಾಗಿ ಮುಂಚೆಯೇ ಅಭಾವ ಪರಿಸ್ಥಿತಿ ಬರದಂತೆ ಸರ್ಕಾರ ಗಮನದಲ್ಲಿಟ್ಟು ಕೆಲಸಗಳನ್ನು ಮಾಡಿಕೊಡಬೇಕು.

ವ್ಯವಸಾಯದ ಬಾವಿಗಳನ್ನು ತೆಗೆಸುವುದಕ್ಕೋಸ್ಕರ ಸರ್ಕಾರದವರು ಹಣವನ್ನು ಕೊಟ್ಟಿರುತ್ತಾರೆ. ಆದರೆ ನಮ್ಮ ತಾಲ್ಲೂಕಿನ ಕಡೆ ಈ ವರ್ಷದಲ್ಲಿ 73 ಬಾವಿಗಳಿಗೆ ಮಾತ್ರ ಹಣ ಕೊಟ್ಟಿದ್ದಾರೆ. ಸುಮಾರು ಎರಡು ಸಾವಿರ, ಮೂರು ಸಾವಿರ ಅಪ್ಲಿಕೇಷನ್ನುಗಳು ಬಂದಿವೆ. ಬಾವಿಗಳಿಗಾಗಿ ಮೂರು ಸಾವಿರ ರೂಪಾಯಿ ಕೊಟ್ಟಿದ್ದಾರೆ. ದುರದೃಷ್ಟವಶಾತ್ ಕೆಲವರು ಮೂರು ಸಾವಿರ ರೂಪಾಯಿ ಜೊತೆಗೆ ತಮ್ಮಲ್ಲಿದ್ದ ನಾಲ್ಕು ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದರೂ ಕೂಡ ಆ ಬಾವಿಗಳು ಪೂರ್ತಿಯಾಗದೆ ಕೆಳಗೆ ಬಂಡೆ ಸಿಕ್ಕಿರುತ್ತದೆ. ಹಣ ತೆಗೆದುಕೊಂಡು ಆರು ತಿಂಗಳೊಳಗಾಗಿ ಆ ಬಾವಿಗಳನ್ನು ಪೂರೈಸಬೇಕು ಎಂದು ನಿಯಮವಿದೆ. ಅಷ್ಟರಲ್ಲಿ ಬಾವಿಯನ್ನು ಮುಗಿಸದೆ ಇದ್ದರೆ ಅವರಿಗೆ ಸಬ್ಸಿಡಿದೊರಕುವುದಿಲ್ಲ. ಹೀಗೆ ಅನಾನುಕೂಲವಾಗಿರತಕ್ಕ ಬಾವಿಗಳವರಿಗೆ ಸರ್ಕಾರದವರು ಏನಾದರೂ ರಿಯಾಯಿತಿಯನ್ನು ಕೊಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಬಂಡೆ ಸಿಕ್ಕಿರತಕ್ಕ ಬಾವಿಗಳವರಿಗೆ ಬೋರಿಂಗ್ ಯಂತ್ರಗಳನ್ನು ಒದಗಿಸಿ ನೀರನ್ನು ಮೇಲೆ ತರುವ ಪ್ರಯತ್ನ ಮಾಡಬೇಕು. ಬೋರ್‌ಮಾಡುವ ಕೆಲಸ ಯಶಸ್ವಿಯಾದರೆ ಆಗ ಬಾವಿಗಳ ಒಡೆಯರಿಂದ ಕಂತುಗಳ ಪ್ರಕಾರ ಹಣವನ್ನು ವಾಪಸು ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಅದನ್ನು ಪೂರ್ತಿಯಾಗಿಬಿಟ್ಟು ಬಿಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ಇಂಥ ಅಭಾವ ಪರಿಸ್ಥಿತಿಯಲ್ಲಿ ಸರಕಾರದವರು ಹೆಚ್ಚೆಚ್ಚು ಕೆರೆಗಳನ್ನು ಕಟ್ಟಿಸುವುದಕ್ಕೂ ಜೀರ್ಣೋದ್ಧಾರ ಮಾಡುವುದಕ್ಕೂ ಮತ್ತು ಪಿಕ್‌ಅಪ್ಪಗಳನ್ನು ಮಾಡುವುದಕ್ಕೂ ಗಮನ ಕೊಡಬೇಕು ನಮ್ಮ ತಾಲ್ಲೂಕಿನ ಕೋರಾ ಹೋಬಳಿಯಲ್ಲಿ ಕೋರಾಕೆರೆ ತುಂಬ ಬಹಳ ಶಿಥಿಲವಾಗಿದೆ. ನಮ್ಮ ಜಿಲ್ಲೆಯಿಂದಲೇ ಆರಿಸಿ ಬಂದಿರತಕ್ಕಂಥ ಮಾನ್ಯ ರೆವಿನ್ಯೂ ಸಚಿವರು ಅದನ್ನು ಕಣ್ಣಾರೆ ನೋಡಿದವರು ಆಗಿದ್ದಾರೆ. ಅದನ್ನು ಆದಷ್ಟು ಜಾಗ್ರತೆ ದುರಸ್ತಿ ಮಾಡಿಸಬೇಕಾದುದು ಅಗತ್ಯ. ಕೆರೆಗಳ ಜೀರ್ಣೋದ್ಧಾರ ಮಾಡಲು ಹೆಚ್ಚು ಹಣ ಒದಗಿಸಿಕೊಡಬೇಕೆಂದು ಸರ್ಕಾರಕ್ಕೆ ನಾನು ಪ್ರಾರ್ಥಿಸುತ್ತೇನೆ.

ಇನ್ನು ಜಮೀನುಗಳ ಅಬಾದಿಗಾಗಿ ತಕಾವಿ ಸಾಲ ಹೆಚ್ಚೆಚ್ಚು ಕೊಡಬೇಕು. ವ್ಯವಸಾಯದಲ್ಲಿ ರೈತರಿಗೆ ಆಧಾರವಾಗಿರುವ ಪಶುಗಳ ಸಂರಕ್ಷಣೆಗಾಗಿ ಅಲ್ಲಲ್ಲಿ ಗೋಶಾಲೆಗಳನ್ನು ನಿರ್ಮಾಣ ಮಾಡಬೇಕು. ಕ್ಯಾಟಲ್ ಶೆಡ್ಡುಗಳಿಗೆ ಹೆಚ್ಚು ಹಣ ಒದಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ಜಿಲ್ಲೆಗೆ ಪಂಪಸೆಟ್ ಬಹಳ ಕಡಿಮೆ ಕೊಟ್ಟಿದ್ದೀರಿ. ಅದರಲ್ಲಿಯೂ ಕೊಟ್ಟಿರತಕ್ಕಂಥ ಪಂಪಸೆಟ್ಟುಗಳಿಗೆ ತಂತಿ ಇಲ್ಲ ಟ್ರಾನ್ಸ್‌ಫಾರ್ಮರ್ ಇಲ್ಲ. ಇದರಿಂದ ಏನಾಗಿದೆ ಎಂದರೆ ರೈತ ನೀರು ಒದಗಿಸಿಕೊಳ್ಳಲಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಪಂಪಸೆಟ್ ಕೆಲಸವ ಡಲು ಸರಿಯಾದ ವ್ಯವಸ್ಥೆ ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮಲ್ಲಿ ಹೆಚ್ಚಾಗಿ ಜೋಡಿ ಗ್ರಾಮಗಳಿವೆ. ಈ ಜೋಡಿ ಗ್ರಾಮಗಳಿಗೆ ಯಾವ ಸವಲತ್ತು ಬರುತ್ತಾ ಇಲ್ಲ. ಜೋಡಿ ಜಮೀನುದಾರರಿಗೆ ಯಾವ ಸೌಲಭ್ಯವೂ ಇಲ್ಲ. ಆದುದರಿಂದ ಈ ಜೋಡಿ ಜಮೀನುದಾರರಿಗೆ ಬಾವಿ ತೆಗೆಯುವುದಕ್ಕೆ ಸೌಲಭ್ಯ ಒದಗಿಸಿ ಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಇದಲ್ಲದೆ ರೈತನಿಗೆ ಸಕಾಲಕ್ಕೆ ಸರಿಯಾಗಿ ಬೀಜ ಗೊಬ್ಬರ ರೋಗ ನಿವಾರಣೆಗೆ ಬೇಕಾದಂಥ ಔಷಧಿ, ಉಪಕರಣ ಒದಗಿಸಬೇಕು. ಸೊಸೈಟಿ ಮುಖಾಂತರ ಇವುಗಳನ್ನು ಒದಗಿಸುವ ಒಂದು ವ್ಯವಸ್ಥೆ ಮಾಡಬೇಕಾದುದು ಅಗತ್ಯ ಎಂದು ಹೇಳುತ್ತೇನೆ. ಕಾಂಟೂರ್ ಬಂಡ್‌ಹಾಕಲು ಕೇಂದ್ರ ಸರಕಾರದಿಂದ ಬರತಕ್ಕಂಥ ಹಣದ ಸಹಾಯ ಸಾಲದ ರೂಪದಲ್ಲಿರುವುದರಿಂದ ಅಂಥ ಹಣ ವಾಪಸ್ಸು ಕೊಡಬೇಕಾಗುತ್ತದೆ. ಮಳೆ ಬಿದ್ದರೆ ಮಾತ್ರ ಈ ಬಂಡಿಂಗ್ ಹಾಕಿದ್ದಕ್ಕೆ ಪ್ರಯೋಜನವಾಗುತ್ತದೆ. ಬೆಳೆಬರುತ್ತದೆ. ಮಳೆಯಾಗಿ ಬೆಳೆ ಬಂದರೆ ಮಾತ್ರ ಈ ಸಾಲದ ಹಣ ತೀರಿಸಲು ಆಗುತ್ತದೆ ಇಲ್ಲದಿದ್ದರೆ ರೈತನಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ರೈತನಿಗೆ ಸಬ್‌ಸಿಡಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ನಮ್ಮ ಜಿಲ್ಲೆ ಕ್ಷಾಮ ಪ್ರದೇಶ ಎಂದು ಸರಕಾರ ನಿರ್ಧರಿಸಿದ್ದಾರೆ. ತುಮ

(ಶ್ರೀಮತಿ ಜಿ. ಸಿ. ಭಾಗೀರಥಮ್ಮ)

ಕೂರು ಜಿಲ್ಲೆಗೆ ಹೆಚ್ಚಿನ ಸಹಾಯ ಮಾಡಿ ಅಭಾವ ನಿವಾರಣೆ ಮಾಡುತ್ತಾರೆಂದು ಭಾವಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಇರತಕ್ಕಂಥ ಈ ಕ್ಷಾಮ ಪರಿಸ್ಥಿತಿಯ ಬಗ್ಗೆ ಇರತಕ್ಕಂಥ ನಿರ್ಣಯದ ಮೇಲೆ ಮಾತನಾಡಲು ಹೆಚ್ಚು ಕಾಲವಕಾಶ ತೆಗೆದುಕೊಳ್ಳುವುದಿಲ್ಲ. ಯಾಕೆಂದರೆ ಫ್ಯಾಮಿನ್ ರಿಲೀಫ್ ಫಂಡ್ ಬಿಲ್ ಮೇಲೆ ಮಾತನಾಡಬಹುದೆಂದು ಅಧ್ಯಕ್ಷರು ಅಪ್ಪಣೆ ಕೊಡಿಸಿದ್ದಾರೆ. ಈ ಸಂದರ್ಭದಲ್ಲಿ ಸರಕಾರ ಕೈಕೊಂಡಿರುವ ಕ್ರಮದ ಬಗ್ಗೆ ಅಂಕಿಅಂಶಗಳನ್ನು ಕೊಟ್ಟು ಕೆಲವು ಮಾತು ಹೇಳಲು ಬಯಸುತ್ತೇನೆ.

ಸ್ವಾಮಿ, ಕ್ಷಾಮ ಪರಿಸ್ಥಿತಿ ನಮ್ಮ ದೇಶಕ್ಕೆ ಇದೇನೂ ಹೊಸದಲ್ಲ. ಅನೇಕ ಮಾನ್ಯ ಸದಸ್ಯರು ಹೇಳಿರುವ ಹಾಗೆ ಸರ್ವೇ ಸಾಧಾರಣವಾಗಿ ಇದು ನಮ್ಮ ದೇಶದ ಒಂದಿಲ್ಲೊಂದು ಭಾಗದಲ್ಲಿ ಪ್ರತಿ ವರ್ಷ ಇರುತ್ತದೆ. ಈ ದೇಶದ ಜನತೆಗೆ ಅಭಾವದಿಂದ ತೊಂದರೆ ಉಂಟಾಗುತ್ತಿದೆ. ಇದಕ್ಕೆ ಒಂದು ಶಾಶ್ವತವಾದ ಪರಿಹಾರ ಕಂಡುಹಿಡಿಯಬೇಕು. ರಾಜ್ಯ ಸರಕಾರ 40 ಕೋಟಿ ರೂಪಾಯಿ ಅಂದಾಜು ಮಾಡಿ ಕೇಂದ್ರದ ಸಹಾಯ ಪಡೆಯಲು ಪ್ರಯತ್ನ ಮಾಡುವುದು ಗಮನಾರ್ಹವಾದ ವಿಷಯ. 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಡಕ ಮಾಡಿರುವ ಯೋಜನೆಗಳನ್ನು ಕೈಕೊಳ್ಳದೆ ಹೋದರೆ ಆಹಾರದ ಬಗ್ಗೆ ಕಷ್ಟವಾಗುತ್ತದೆ. ಮೂರನೆ ಪ್ಲಾನ್ ಪ್ರಕಾರ ನೀರಾವರಿ ಯೋಜನೆಗಳು ಕಾರ್ಯಗತವಾಗದೇ ಹೋದರೆ ಶಾಶ್ವತವಾದ ಪರಿಹಾರ ದೊರೆಯುವುದಿಲ್ಲ.

ಇನ್ನು ನನ್ನ ಜಿಲ್ಲೆಯ ಕೆಲವು ಸಮಸ್ಯೆಗಳನ್ನು ಹೇಳುವುದಾದರೆ, ಹಾಸನ, ಅರಸಿಕೆರೆ, ಚನ್ನರಾಯಪಟ್ಟಣ ಹೊಳೆನರಸೀಪುರ ಈ ಪ್ರದೇಶದಲ್ಲಿ ಶಾಶ್ವತವಾದ ಪರಿಹಾರ ಕ್ರಮ ತೆಗೆದುಕೊಳ್ಳಬೇಕೆಂದು ಜಿಲ್ಲಾ ಪರಿಷತ್ತು ಅಭಿಪ್ರಾಯಪಟ್ಟಿದೆ. ಮಾನ್ಯ ಸಭೆಯ ಗಮನಕ್ಕೆ ಈ ವಿಷಯ ಏತಕ್ಕೆ ತರುತ್ತಿದ್ದೇನೆಂದರೆ ಶಾಶ್ವತವಾದ ಪರಿಹಾರ ಕ್ರಮದ ಬಗ್ಗೆ ಜಿಲ್ಲಾ ಪರಿಷತ್ತು ಇದಲ್ಲದೆ ಸಂಬಂಧಪಟ್ಟವರು ಒತ್ತಾಯ ಮಾಡಿದರೂ ಕೂಡ ಅದು ಸರಕಾರದ ಗಮನಕ್ಕೆ ಹೋಗಿಲ್ಲ. ನಮ್ಮ ಪ್ರಯತ್ನಕ್ಕೆ ಸರಕಾರ ಮನ್ನಣೆ ಕೊಡದೇ ಹೋದರೆ ಅದು ಸಾರ್ಥಕವಾಗುವುದಿಲ್ಲ. ನಮ್ಮ ತಾಲ್ಲೂಕಿನ ಪರಿಸ್ಥಿತಿ ಆಗಿಂದಾಗ್ಗೆ ಮಾನ್ಯ ಮಂತ್ರಿಗಳು ನೋಡಿದ್ದಾರೆ. ಈ ಸಲದ ಪರಿಣಾಮ ಏನು ಎಂಬುದನ್ನು ತಿಳಿದುಕೊಳ್ಳಬೇಕು. ರಿಪೋರ್ಟ್ ತರಿಸಿ ಅದರ ಬಗ್ಗೆ ಯೋಚನೆ ಮಾಡಬೇಕು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಹೊಳೆನರಸೀಪುರ ತಾಲ್ಲೂಕಿನಲ್ಲಿ ಪ್ರತಿ ವರ್ಷ ಕ್ಷಾಮ ಇರುತ್ತದೆ. ಮಳೆ ಇಲ್ಲದೆ ಜಾನುವಾರುಗಳಿಗೆ ಕುಡಿಯಲು ನೀರು ಇಲ್ಲ ಮನುಷ್ಯರಿಗೂ ಕುಡಿಯಲು ನೀರು ಇಲ್ಲ ಕುಡಿಯುವ ನೀರಿನ ಬಗ್ಗೆ ಒಂದು ಸರಿಯಾದ ವ್ಯವಸ್ಥೆ ಇಲ್ಲ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೂಡ ಜಾಗ್ರತೆಯಾಗಿ ಒಂದು ಶಾಶ್ವತವಾದ ಕಾಯಂ ಆದ ಪರಿಹಾರ ಒದಗಿಸಿ ಕೊಡಲು ಸಾಧ್ಯವಾಗಿಲ್ಲ. ಕ್ಷಾಮ ಬಂದಾಗ್ಗೆ ತಾತ್ಕಾಲಿಕವಾಗಿ ರಸ್ತೆ, ಕೆರೆ ಮಾಡಿಸುತ್ತೇವೆಂದು ಹೇಳಿದರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ. ಅಂಥ ಕ್ರಮ ಶಾಶ್ವತವಾದ ಪರಿಹಾರವಾಗುವುದಿಲ್ಲ. ಮೂರನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಹೊಳೆನರಸೀಪುರ. ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಒಂದು ಶಾಶ್ವತ ಯೋಜನೆ ಮಾಡಬೇಕೆಂದು ಸ್ಪಷ್ಟವಾಗಿ ಹೇಳುತ್ತೇನೆ.

ಒಂದು ಕಡೆ ರಾಜಕೀಯವಾದ ಕೆಲವು ಭಿನ್ನಾಭಿಪ್ರಾಯಗಳಿರಬಹುದೆಂದು ವ್ಯಕ್ತಪಡುತ್ತದೆ. ಇನ್ನೊಂದು ಕಡೆ ಹಣ ಇಲ್ಲ. ಇಂತಹ ಒಂದು ಕುಂದುಕೊರತೆಯಿಂದ ಮುಂದುವರಿಸುತ್ತಾ ಇದ್ದಾರೆಯೋ ಅಥವಾ ಕೇಂದ್ರ ಸರ್ಕಾರದವರು ಟೆಕ್ನಿಕಲ್ ಕ್ಲಿಯರನ್ಸ್ ಕೊಟ್ಟಿಲ್ಲ ಎಂದು ಮುಂದುವರಿಸುತ್ತಾ ಇದ್ದಾರೆಯೋ ಗೊತ್ತಾಗುತ್ತಿಲ್ಲ. ಈ ರೀತಿ ಮಾಡುವುದರಿಂದ ಉಪಯೋಗವಾಗುವುದಿಲ್ಲ. ಯಾವುದಾದರೂ ಒಂದು ಧೈರ್ಯ ಮಾಡಿ ಆಶಾ ಭಾವನೆಯಿಂದ ಇದನ್ನು ಕಟ್ಟಲೇಬೇಕೆಂದು ಮನಸ್ಸು ಮಾಡದೆ ಇದ್ದರೆ ಜನರು ಬಹಳ ನಿರಾಶರಾಗುತ್ತಾರೆ ಎಂದು ಸ್ಪಷ್ಟವಾಗಿ ಹೇಳಿ ತಮ್ಮಿಂದ ಜನ ಏನು ನಿರೀಕ್ಷಣೆ ಮಾಡುತ್ತಿದ್ದಾರೆ ಎಂಬುದರ ಕಡೆಗೆ ತಮ್ಮ ಗಮನವನ್ನು ಸೆಳೆಯುತ್ತಾ ಇದ್ದೇನೆ. ಮೂರನೆಯ ಪಂಚವಾರ್ಷಿಕ ಯೋಜನೆಯು ಎರಡನೆಯ ವರ್ಷ ಪೂರೈಸಿ ಮೂರನೆಯ ವರ್ಷದಲ್ಲಿ ಕಾಲಿಟ್ಟಿದ್ದೇವೆ. ಹಿಂದೆ ನೀವು ಯಾವ ಯಾವ ಕಾರ್ಯಗಳನ್ನು ಮಾಡಿಕೊಡುತ್ತೇವೆಂದು ಭರವಸೆ ಕೊಟ್ಟಿದ್ದೀರೋ ಅವನ್ನು ಅದಷ್ಟು ಜಾಗ್ರತೆ ನೆರವೇರಿಸಿಕೊಡದಿದ್ದರೆ ಮತ್ತು ಯಾವ ಒಂದು ಯೋಜನೆ ಆಗಬೇಕೋ ಅದನ್ನು ಒಬ್ಬೊಬ್ಬರ ಹಿತದೃಷ್ಟಿಯಿಂದ ಸಾರ್ವಜನಿಕರೆಲ್ಲರ ಹಿತದೃಷ್ಟಿಯನ್ನು ಬದಿಗೊತ್ತುವುದಾದರೆ ನೀವು ರಾಜ್ಯವನ್ನಾಳುವುದಕ್ಕೆ ಅರ್ಹರಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತು ಹಾರಂಗಿ ಪ್ರಾಜೆಕ್ಟಿನ ಬಗ್ಗೆ 25 ವರ್ಷದ ಪತ್ರವ್ಯವಹಾರನೋಡಿ.

ಹಳೇ ಮೈಸೂರಿನಲ್ಲಿ ಕೆಲವು ಪ್ರದೇಶಗಳು ಪ್ರತಿವರ್ಷ ಕ್ಷಾಮಕ್ಕೆ ಈಡಾಗುತ್ತಿವೆ. ಅಂತಹ ಪ್ರದೇಶಗಳಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ. ನಮ್ಮ ಮೈಸೂರಿನ ದುರ್ದೈವ ಟೆಕ್ನಿಕಲ್ ಅಧಿಕಾರಿಗಳುಯಾರಿದ್ದಾರೆ ಅವರನ್ನು ನಿಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳದೇ ಕೆಲಸ ಕಾರ್ಯಗಳನ್ನು ಮಾಡುತ್ತೀರಿ ಮತ್ತು ಅವರಿಗೆ ತಮ್ಮ ಮನಸ್ಸಿನಲ್ಲಿ ಏನಿದೆ ಅದನ್ನು ನಿರ್ಭಯವಾಗಿ ಸರ್ಕಾರದ ಮುಂದೆ ಇಡುವುದಕ್ಕೆ ಬಿಡುವುದಿಲ್ಲ. ಒಂದೊಂದು ಮಂತ್ರಿ ಮಂಡಲ ಬದಲಾವಣೆ ಯಾದರೆ ಒಂದೊಂದು ರೀತಿಯಲ್ಲಿ ರಿಪೋರ್ಟ್ ಕೊಡಬೇಕೆಂದರೆ ಅವರಿಂದ ನಾವು ಯಾವ ಒಳ್ಳೆಯ ವ್ಯವಹಾರವನ್ನೂ ಅಪೇಕ್ಷೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ರೀತಿಯಾಗದೇ ಇದಕ್ಕೆ ಒಂದು ಖಾಯಂ ಆದ ಪರಿಹಾರ ದೊರೆಯಬೇಕು. ನಮ್ಮ ಜಿಲ್ಲೆಯಲ್ಲಿ ಹೇಮಾವತಿ ಮತ್ತು ಹಾರಂಗಿ ಪ್ರಾಜೆಕ್ಟುಗಳನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡಲು ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ ?

ನಮ್ಮ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಇವತ್ತಿನ ದಿವಸ ಆಲೂರು ಹನುಮಂತಪ್ಪನವರು ಇದರ ಬಗ್ಗೆ ಅನೇಕ ಮೀಟಿಂಗ್‌ಗಳನ್ನು ಮಾಡಿ ಸಣ್ಣ ನೀರಾವರೀ ಯೋಜನೆಗಳನ್ನು ಆದಷ್ಟು ಬೇಗ ಕೈಕೊಳ್ಳಬೇಕೆಂದು ಆಸಕ್ತಿ ವಹಿಸಿದ್ದಾರೆ. ಆದರೂ ಇನ್ನೂ ಅಂತಿಮ ತೀರ್ಮಾನಕ್ಕೆ ಬಂದಿಲ್ಲ ಎಂದು ವ್ಯಕ್ತ ಪಡುತ್ತದೆ. ಆದಷ್ಟು ಜಾಗ್ರತೆ ಒಂದು ಪಾಲಿಸಿ ತೀರ್ಮಾನ ಮಾಡಿ ಹಾಸನ ಜಿಲ್ಲೆಯಲ್ಲಿ ಹೆಚ್ಚು ಪರಿಣಾಮಕಾರಿಯಾದ ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಮತ್ತು ರಿಲೀಫ್ ಮೆಷರ್ಸ್ ತೆಗೆದುಕೊಳ್ಳುವುದಕ್ಕೆ ಕೆರೆಗಳ ಹೂಳು ತೆಗೆಸುವ ಕೆಲಸವನ್ನಾಗಲಿ ಅಥವಾ ಅವನ್ನು ರಿಪೇರಿ ಮಾಡಿಸುವ ಕೆಲಸವನ್ನಾಗಲಿ ಮಾಡಿದರೆ ಅದು ತಾತ್ಕಾಲಿಕ ಪರಿಹಾರವಾಗುತ್ತದೆ ಶಾಶ್ವತವಾದ ಪರಿಹಾರ ದೊರೆಯುವುದಿಲ್ಲ. ಶಾಶ್ವತವಾದ ಪರಿಹಾರ ದೊರೆಯಬೇಕಾದರೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿರತಕ್ಕ ಪ್ರಾಜೆಕ್ಟುಗಳನ್ನು ಮಾಡಲೇ ಬೇಕು, ಇಲ್ಲದೇ ಇದ್ದರೆ ಆಗುವುದಿಲ್ಲ ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಕೊನೆಯದಾಗಿ ಹೊಳೇನರಸೀಪುರ ತಾಲ್ಲೂಕಿನಲ್ಲಿ ಬೇಕಾದರೆ ರಿಪೋರ್ಟ್ ತರಿಸಿ ನೋಡಿ. 82 ಸಾವಿರ ಎಕರೆ ಖುಷ್ಕಿಯಲ್ಲಿ ಮೂರನೆ ಎರಡು ಭಾಗದಷ್ಟು ಜಮೀನಿನಲ್ಲಿ ಮಳೆ ಬೆಳೆಯಾಗಿಲ್ಲ. ಉಳಿದ ಮೂರನೇ ಒಂದು ಭಾಗದಲ್ಲಿ ಅಲ್ಪಸ್ವಲ್ಪ ಬೆಳೆಯಾಗಿದ್ದರೂ ಕೂಡ ಜನ ಕಂಗಾಲಾಗಿದ್ದಾರೆ ನಿನ್ನೆ ಏನೋ ಸ್ವಲ್ಪ ಮಳೆಯಾಗಿದೆ ಆಗಿದ್ದರೂ ಕೂಡ ಅದರಿಂದ ಪರಿಣಾಮವಾಗುವುದಿಲ್ಲ. 12 ಸಾವಿರ ಎಕರೆ ತರೀ ಜಮೀನಿನಲ್ಲಿ 9 ಸಾವಿರ ಎಕರೆ ಕೆರೆ ಕೆಳಗೆ ಇದೆ. 3 ಸಾವಿರ ಎಕರೆ ನಾಲೆಯ ಕೆಳಗೆ ಬರುತ್ತದೆ. ಕೆರೆ ಹಿಂಭಾಗದಲ್ಲಿರತಕ್ಕ ಜಮೀನಿನಲ್ಲಿ ಬೆಳೆಯೆಲ್ಲಾ ಪೂರ್ಣವಾಗಿ ಹೋಗಿದೆ ಬೇಕಾದರೆ ಅಧಿಕಾರಿಗಳಿಂದ ವರದಿ ತರಿಸಿ ನೋಡಿ. ಇದು ಸತ್ಯಾಂಶ ಕಂಡು ಬಂದರೆ ತಕ್ಷಣ ಪರಿಹಾರ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತೇನೆ. ತಾಲ್ಲೂಕು ಬೋರ್ಡಿನ ಮುಖಂಡರು ಹಾಗೂ ನಾನೂಕೂಡ ತಮ್ಮಲ್ಲಿ ಇದರ ಬಗ್ಗೆ ಮನವಿಗಳನ್ನು ಅರ್ಪಿಸಿದ್ದೇವೆ. ಸೂಕ್ತ ಕ್ರಮ ತೆಗೆದು ಕೊಳ್ಳಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ತಕಾವಿ ಲೋನ್ ಕೊಡುವಾಗಲೂ ಕೂಡ ಆದಷ್ಟು ಜಾಗ್ರತೆ ಅದು ರೈತರ ಕೈ ಸೇರುವಂತೆ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಿರೀಕ್ಷಣೆ ಮಾಡಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair.]

†ಶ್ರೀ ಎ. ಜಿ. ಬಂದೀಗೌಡ (ಶ್ರೀರಂಗಪಟ್ಟಣ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಹುಚ್ಚ ಮಾಸ್ತಿಗೌಡರು ಆಹಾರದ ಅಭಾವದ ವಿಚಾರದಲ್ಲಿ ದೇಶದಲ್ಲಿ ಉಂಟಾಗಿರತಕ್ಕ ಪರಿಸ್ಥಿತಿಯನ್ನು ಕುರಿತು ಏನೊಂದು ನಿರ್ಣಯವನ್ನು ತಂದಿದ್ದಾರೆ ಆ ನಿರ್ಣಯದ ಮೇಲೆ ಮಾನ್ಯ ಸದಸ್ಯರು ಕೊಡ ಬೇಕಾದ ಸಲಹೆಗಳನ್ನು ಕೇಳಿರುವುದು ಬಹಳ ಶ್ಲಾಘನೀಯವಾದದ್ದು. ಕೇವಲ ಭಾಷಣ ಮಾತ್ರ ಕೇಳಿ ಸರ್ಕಾರದವರು ಸುಮ್ಮನೆ ಇದ್ದರೆ ಸಾಲದು ಅದಕ್ಕೆ ಬೇಕಾದಂತಹ ಏರ್ಪಾಡುಗಳನ್ನೆಲ್ಲಾ ಸರ್ಕಾರದವರೂ ಕೂಡ ಮಾಡಬೇಕೆಂದು ಹೇಳಿ ಸೂಚನೆ ಮಾಡುತ್ತಾ ಇದ್ದೇನೆ. ನಾನು ಶ್ರೀರಂಗ ಪಟ್ಟಣ ಕ್ಷೇತ್ರದಿಂದ ಬರುತ್ತಾ ಇದ್ದೇನೆ. ಅಲ್ಲಿ ಆಹಾರದ ಅಭಾವ ಉಂಟೇ? ಅಲ್ಲಿ ಬೇಕಾದಷ್ಟು ನದಿಗಳು ಇವೆ, ಬೇಕಾದಷ್ಟು ಕಾಲುವೆಗಳು ಇವೆ ಅಥವಾ ಅಲ್ಲಿ ಅಭಾವ ಇರಲಾರದು ಎಂದು ಅನೇಕರಿಗೆ ಭಾವನೆ ಇದೆ. ಅಲ್ಲಿ ಅನೇಕ ನಾಲೆಗಳು ಇದ್ದಾಗ್ಯೂ ಕೂಡ ಸುಮಾರು ಶೇಕಡ 40ರಷ್ಟು ತರೀ ವ್ಯವಸಾಯವಾಗುತ್ತಾ ಇದೆ. ಶೇಕಡಾ 60ರಷ್ಟು ಖುಷ್ಕಿ ವ್ಯವಸಾಯವಾಗುತ್ತಾ ಇದೆ. ಈ ಸಾರಿ ಅಲ್ಲಿ ಮಳೆ ಸ್ವಲ್ಪವೂ ಕೂಡ ಬರದೇ ಅನೇಕ ಕಡೆಗಳಲ್ಲಿ ಬೀಜವನ್ನು ಬಿತ್ತಿ ಮತ್ತು

(ಶ್ರೀ ಎ. ಡಿ. ಬಂದೀಗೌಡ)

ಬಿತ್ತಿರತಕ್ಕ ಕಡೆಗಳಲ್ಲಿ ಬೆಳೆಯೆಲ್ಲಾ ಒಣಗುತ್ತಾ ಇದೆ. ನಾನು ಸುಮಾರು 15 ದಿವಸದ ಕೆಳಗೆ ನಮ್ಮ ತಾಲ್ಲೂಕನ್ನೆಲ್ಲಾ ಸುತ್ತಿ ನೋಡಿಕೊಂಡು ಬಂದೆ. ಈಗ ನೋಡಿದರೆ ರಾಗಿ ಬೆಳೆ ಪೂರ್ತಿ ಒಣಗುತ್ತಾ ಇದೆ. ಇನ್ನು ಕೆಲವು ದಿವಸಗಳಲ್ಲಿ ಹಸ್ತ, ಚಿತ್ತೆ ಮಳೆ ಬರಬಹುದು ಎಂದು ಕಾಣುತ್ತದೆ, ಬಂದರೂ ಕೂಡ ಅವರಿಂದ ಯಾವ ಬೆಳೆಗೂ ಪ್ರಯೋಜನವಿಲ್ಲ ಎಂದು ಹೇಳಬಹುದು. ಬೆಳೆ ಒಣಗಿರುವುದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಬತ್ತಕ್ಕೆ ಸರಿಯಾಗಿ ಮಳೆ ಇಲ್ಲದೆ ಒಂದು ತರಹ ಚಪ್ಪೆ ರೋಗ ಬಂದಿದೆ ಬತ್ತದ ಬೆಳೆ ಕೆಡುತ್ತಾ ಇದೆ, ಹೀಗಾಗಿ ಶ್ರೀರಂಗಪಟ್ಟಣದಲ್ಲೂ ಕೂಡ ಅಭಾವ ಪರಿಸ್ಥಿತಿ ಉಂಟಾಗಿದೆ ಆದ್ದರಿಂದ ಪರಿಹಾರ ಕಾರ್ಯಕ್ರಮಗಳನ್ನು ಯಾವ ಯಾವದನ್ನು ತೆಗೆದುಕೊಳ್ಳಬೇಕೆಂಬುವದರ ಬಗ್ಗೆ ಶ್ರೀಮಾನ್ ಟಿ. ಮಾದಯ್ಯಗೌಡರು ಆಗಲೇ ಹೇಳಿದ್ದಾರೆ. ನಾಗಮಂಗಲದಲ್ಲಿ, ಕೃಷ್ಣರಾಜಪೇಟೆಯಲ್ಲಿ, ಹಾಗೆಯೇ ಮೈಸೂರು ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಚಾಮರಾಜನಗರ, ಗುಂಡ್ಲುಪೇಟೆ ಮುಂತಾದ ಅನೇಕ ಕಡೆ ಈ ಸಾರಿ ಬೆಳೆ ಆಗಿಲ್ಲ. ಇಂತಹ ಸಂದರ್ಭದಲ್ಲಿ ಎರಡು ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಒಂದನೇಯದಾಗಿ ಕೇವಲ ಕ್ಷಾಮ ಬಂದ ಕಾಲದಲ್ಲಿ ಮಾತ್ರ ಹೀಗೆ ಮಾತನಾಡಿಬಿಟ್ಟು ಸುಮ್ಮನೆ ಕುಳಿತು ಬಿಡದೆ ಒಂದು ಶಾಶ್ವಿತ ಪರಿಹಾರ ಕಲ್ಪಿಸಲು ಏನೇನು ಮಾರ್ಗಗಳಿವೆ ಎಂಬುದನ್ನು ಕಂಡು ಹಿಡಿಯಬೇಕು. ಇದರ ಜೊತೆಗೆ ತಾತ್ಕಾಲಿಕ ಪರಿಹಾರಗಳೇನೆಂಬುದನ್ನೂ ಕೂಡಾ ವಿಚಾರ ಮಾಡಬೇಕು. ಈ ಎರಡು ಪರಿಹಾರ ಮಾರ್ಗಗಳನ್ನು ಕಂಡುಹಿಡಿಯಬೇಕು. ಇನ್ನು ನಾವು ನಮ್ಮ ಅರಣ್ಯಗಳನ್ನು ಚೆನ್ನಾಗಿ ಕಾಪಾಡಿಕೊಂಡು ಬರಬೇಕಾದ್ದು ಅತ್ಯಗತ್ಯವೆಂಬುದನ್ನು ನಾವೀಗ ಕಂಡುಕೊಂಡಿದ್ದೇವೆ. ನಾವು ಈ ಹಿಂದೆ ಕೆಲವು ದಿನಗಳ ಕೆಳಗೆ ವನಮಹೋತ್ಸವವನ್ನು ಆಚರಿಸಲಾಯಿತು. ವನಗಳು ಎಷ್ಟು ಸೊಂಪಾಗಿದ್ದರೆ ಅಷ್ಟು ಮಳೆ ಬರುತ್ತೆಂದು ಹೇಳುತ್ತಾರೆ. ಮಳೆ ಬಂದಷ್ಟೂ ಬೆಳೆಗಳು ಚೆನ್ನಾಗಿ ಆಗುತ್ತವೆ. ಎಲ್ಲಿ ಮರಗಳು ದಟ್ಟವಾಗಿ ಬೆಳೆದಿರುತ್ತಾವೆಯೋ ಅಲ್ಲಿ ಚೆನ್ನಾಗಿ ಬೆಳೆಯಾಗುತ್ತದೆಂಬುದನ್ನು ನಾವೀಗ ಕಂಡುಕೊಂಡಿದ್ದೇವೆ. ಇದು ನಮ್ಮೆಲ್ಲರ ಅನುಭವಕ್ಕೂ ಬಂದಿದೆ. ಆದದರಿಂದ ಅರಣ್ಯಗಳನ್ನು ಹಾಳು ಮಾಡದಂತೆ ಕಾಪಾಡಿಕೊಂಡು ಬರುವುದು ಬಹಳ ಮುಖ್ಯವಾದದ್ದು.

5-00 P.M.

ಇನ್ನು ಎರಡನೇಯದಾಗಿ ಹೊಸದಾಗಿ ಕೆರೆಕಟ್ಟೆಗಳನ್ನು ನಿರ್ಮಾಣ ಮಾಡುವುದು ಹಾಗೂ ಹಳೆಯ ಕೆರೆಕಟ್ಟೆಗಳನ್ನು ದುರಸ್ತಿ ಮಾಡತಕ್ಕದ್ದು ಅವಶ್ಯಕವೆಂದು ನಾನು ಈ ಸಂದರ್ಭದಲ್ಲಿ ಸೂಚಿಸಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿ ಸುಮಾರು 25-30 ಸಾವಿರ ಕೆರೆಗಳಿವೆ, ಇವುಗಳನ್ನು ಮೂರು ಭಾಗ ಮಾಡಬಹುದು: ಹತ್ತು ಎಕರೆಗಳಿಗಿಂತ ಕೆಳಗಿರತಕ್ಕ ಅಚ್ಚುಕಟ್ಟುಳ್ಳ ಕೆರೆಗಳೆಂತ ಒಂದು ಭಾಗ; ಹತ್ತು ಎಕರೆಗಳಿಗೆ ಮೇಲ್ಪಟ್ಟು 60 ಎಕರೆಯೊಳಗೆ ಅಚ್ಚುಕಟ್ಟುಳ್ಳ ಕೆರೆಗಳನ್ನು ಎರಡನೇ ಭಾಗವನ್ನಾಗಿಯೂ ಮತ್ತು 60-75 ಎಕರೆಗಳಿಗೆ ಮೇಲ್ಪಟ್ಟ ಅಚ್ಚುಕಟ್ಟುಳ್ಳ ಕೆರೆಗಳನ್ನು ಮೇಜರ್ ಕೆರೆಗಳೆಂತಲೂ ಭಾವಿಸಿ ಹೀಗೆ ಮೂರು ವಿಭಾಗ ಮಾಡಬಹುದು. ಈಗ ಹತ್ತು ಎಕರೆಗಳ ಕೆಳಗಿರತಕ್ಕ ಕೆರೆಗಳು ಸುಮಾರು 17 ಸಾವಿರ ಇರುತ್ತವೆ. ಈಗ ಇವುಗಳ ಕೆಲಸಕಾರ್ಯಗಳನ್ನು ತಾಲ್ಲೂಕ್ ಬೋರ್ಡುಗಳಿಗೆ ವಹಿಸಲಾಗಿದೆ; ಇನ್ನೂ ಕೆಲವು ಕಡೆ ವಹಿಸಬೇಕಾಗಿದೆ. ಆದ್ದರಿಂದ ಈಗ ತಾಲ್ಲೂಕ್ ಬೋರ್ಡುಗಳಿಗೆ ಸಾಕಷ್ಟು ಹಣವಿಲ್ಲದೆ ಈ ಕೆರೆಗಳೆಲ್ಲ ನಿಷ್ಪ್ರಯೋಜನವಾಗಿವೆ. ಇನ್ನು 10 ಎಕರೆ ಮೇಲ್ಪಟ್ಟು 50 ಎಕರೆ ಅಚ್ಚುಕಟ್ಟುಳ್ಳ ಕೆರೆಗಳ ಆಡಳಿತ ರೆವಿನ್ಯೂ ಇಲಾಖೆಯವರ ಕೈಯಲ್ಲಿದೆ. ಆದರೆ ಈ ಇಲಾಖೆಯವರು ಇವುಗಳನ್ನು ಸರಿಯಾಗಿ ಮೈಂಟೇನ್ ಮಾಡುತ್ತಿಲ್ಲ. ಇವುಗಳ ಕೆಲಸವನ್ನು ರೆವೆನ್ಯೂ ಇಲಾಖೆಯವರು P.W.D. ವಹಿಸಲು ಸಿದ್ಧವಾಗೇನೋ ಇದ್ದಾರೆ. ಆದರೆ P.W.D. ಅದನ್ನು ತೆಗೆದುಕೊಳ್ಳಲು ಮುಂದೆ ಬರುತ್ತಿಲ್ಲ. ಹೀಗಾಗಿ ಈ ದಿವಸ ಈ ಕೆರೆಗಳಿಂದಲೂ ಪ್ರಯೋಜನವಿಲ್ಲ.

ಇನ್ನು ಮೂರನೇಯದಾಗಿ ಮೇಜರ್ ಕೆರೆಗಳ ಮೂಲಕ ಸ್ವಲ್ಪ ಪ್ರಯೋಜನವಾಗುತ್ತಿದೆ. ಆದರೆ ಈ ಮೂರು ತರಹೆಯ ಕೆರೆಗಳನ್ನು ರಿಪೇರಿ ಮಾಡತಕ್ಕದ್ದು ಅವಶ್ಯಕ ಹಾಗೂ ಬಹಳ ಅಗತ್ಯವಾದುದ್ದು. ಈ ವಿಚಾರದಲ್ಲಿ ಸರ್ಕಾರದವರ ಒಂದು ಕನ್‌ಸಾಲಿಡೇಷನ್ ಸಮಿತಿಯನ್ನು ಅದರ ಮೂಲಕ ಇವುಗಳನ್ನು ಕ್ರಮವನ್ನಾಗಿ ಮೈಂಟೇನ್ ಮಾಡಿಕೊಂಡು ಬರತಕ್ಕದ್ದನ್ನು ಪರಿಶೀಲನೆ ಮಾಡತಕ್ಕದ್ದು ಅತ್ಯಗತ್ಯ ಮತ್ತು ಬಹಳ ಸೂಕ್ತವಾದ್ದೆಂದು ನಾನು ಈ ಸಂದರ್ಭದಲ್ಲಿ ಸೂಚಿಸಲಿಚ್ಛಿಸುತ್ತೇನೆ.

ಇನ್ನು ಅನೇಕ ಕಡೆಗಳಲ್ಲಿ ಪಿಕಪ್‌ಗಳನ್ನು ಮಾಡಿದರೆ ಕೇವಲ ಕಡಮೆ ಖರ್ಚಿನಲ್ಲಿ ನೀರಿನ ಸೌಕರ್ಯ ದೊರೆತು ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಶ್ರೀರಂಗ ಪಟ್ಟಣ ತಾಲ್ಲೂಕಿನಲ್ಲಿ—ಕಸಬಾ ಹೋಬಳಿಯಲ್ಲಿ ನಾಲ್ಕಾರು ಇಂಥ ಪಿಕಪ್‌ಗಳನ್ನು ಹಾಕಲು ಅವಕಾಶವಿದೆ. ಮಂಡ್ಯ ತಾಲ್ಲೂಕಿನಲ್ಲೂ—ಹೊಸೂರು ಪ್ರಾಂತ್ಯದಲ್ಲಿ ಇಂಥ ಪಿಕಪ್‌ಗಳನ್ನು ಹಾಕಿ ಸಾವಿರಾರು ಎಕ್ರೆ ಜಮೀನಿಗೆ ನೀರು ಸಾಗುವಳಿಗೆ ಬರಲು ಅವಕಾಶವಿರುತ್ತೆ ಹೀಗೆ ಎಲ್ಲೆಲ್ಲಿ ಸಾಧ್ಯ ವಿದೆಯೋ ಅಲ್ಲೆಲ್ಲ ಈ ಪಿಕಪ್‌ಗಳನ್ನು ಮಾಡಬೇಕಾದ್ದು ಅತ್ಯಗತ್ಯ. ಈ ವಿಚಾರವನ್ನು ಸರ್ಕಾರ ದವರು ಗಮನದಲ್ಲಿಟ್ಟುಕೊಳ್ಳಬೇಕು. ನಾನು ಮತ್ತೊಂದು ಸಮಾಚಾರವನ್ನು ಈ ಹಿಂದೆ ಬಡ್ಜೆಟ್ ಅಧಿವೇಶನದ ಕಾಲದಲ್ಲೂ ಹೇಳಿದೆ. ನಮ್ಮ ಕೆ. ಆರ್. ಸಾಗರದಲ್ಲಿ ಅಗ್ರಿಮೆಂಟ್ ಪ್ರಕಾರ ನಾವು ಮದ್ರಾಸ್ ಸರ್ಕಾರಕ್ಕೆ 900 ಕ್ಯುಸೆಕ್ಸ್ ನೀರನ್ನು ಬಿಟ್ಟುಕೊಡಬೇಕಾಗಿದೆ. ಅದರಿಂದ ಅಲ್ಲಿಯ ಅಚ್ಚುಕಟ್ಟುದಾರರಿಗೆ ನೀರು ಬಹಳ ಕಡಮೆಯಾಗುತ್ತದೆ. ಆ ನೀರನ್ನು ಉಳಿಸಿಕೊಳ್ಳಲು ಮಂಡ್ಯ ಜಿಲ್ಲೆಯಲ್ಲಿ ಒಂದು ಅಣೆಕಟ್ಟನ್ನು ಹಾಕಿದರೆ ಅದರಿಂದ ಬಹಳ ಅನುಕೂಲವಾಗುತ್ತದೆ. ನಮಗೆ ಈ ನೀರೂ ಉಳಿತಾಯವಾಗುತ್ತದೆ. ಇದನ್ನು ಸರ್ಕಾರದವರು ಪರಿಶೀಲಿಸಬೇಕೆಂದು ಸೂಚನೆ ಮಾಡುತ್ತೇನೆ. ಈ ದಿವಸ ಮಳವಳ್ಳಿ ತಾಲ್ಲೂಕಿನಲ್ಲಿ ಅನೇಕ ನಾಲೆಗಳನ್ನು ತೋಡಲಾಗಿದೆ. ಆದರೆ ಅದರಿಂದ ಅಷ್ಟೇನೂ ಅನುಕೂಲವಾಗುತ್ತಿಲ್ಲ. ಆದ್ದರಿಂದ ರೆವಿನ್ಯೂ ಮಂತ್ರಿಗಳು ಪ್ರತಿ ವರ್ಷವೂ ಅಲ್ಲಿಗೆ ರಿಮಿಷನ್ ಕೊಡಬೇಕಾಗಿ ಬರುತ್ತದೆ. ಅವರಿಗೆ ನಾಲೆಗಳನ್ನು ಕೊಟ್ಟ ಮೇಲೆ ನೀರನ್ನು ಸರಿಯಾಗಿ ಒದಗಿಸಬೇಕಾದ್ದು ಸರ್ಕಾರದವರ ಕರ್ತವ್ಯ. ಈ ವಿಚಾರವನ್ನು ಸರ್ಕಾರದವರು ಜ್ಞಾಪಕದಲ್ಲಿಟ್ಟುಕೊಂಡು ಅಲ್ಲಿಗೆ ಅನುಕೂಲತೆ ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಹೂಲಿ ಕೆರೆ ಟನಲ್‌ನಲ್ಲಿ ಕೂಡ ಅಲ್ಲಿ 2,500 ಕ್ಯೂಸೆಕ್ಸ್ ನೀರನ್ನು ಬಳಸಲು ಅವಕಾಶವಿದ್ದರೂ ಆ ಟನಲ್‌ನಲ್ಲಿ 2,000 ಕ್ಯೂಸೆಕ್ಸ್‌ಗಿಂತ ಹೆಚ್ಚು ನೀರು ಬರುವುದಿಲ್ಲ. ಕಾರಣ ಆ ಟನಲ್‌ನ ಕ್ಯಾಪ್ಯಾಸಿಟಿಯೇ ಅಷ್ಟು. ಹೀಗಾಗಿ ಅಲ್ಲಿ 500 ಕ್ಯೂಸೆಕ್ಸ್ ನೀರು ವೇಸ್ಟಾಗುತ್ತಿದೆ. ಈ ನೀರನ್ನು ನಾವು ಉಪಯೋಗ ಮಾಡಿ ಕೊಂಡರೆ ಮಳವಳ್ಳಿ ಟೀ-ನರಸೀಪುರ ತಾಲ್ಲೂಕುಗಳಲ್ಲಿ ಇನ್ನು 20 ಸಾವಿರ ಎಕ್ರೆ ಭೂಮಿ ತರೀ ಸಾಗುವಳಿಗೆ ಬರುತ್ತದೆ. ಆ ಹುಲಿಕೆರೆ ಟನಲ್‌ನಿಂದ ತುರುಬನೂರು ಕಡೆ ನೀರನ್ನು ತಿರುಗಿಸಿ ಜನರಿಗೆ ಅನುಕೂಲ ಕಲ್ಪಿಸುತ್ತಾರೆಂದು ನಾನು ನಂಬಿದ್ದೇನೆ. ಆ ಮೇಲೆ ರೈತನ ಬೆಳೆಗೆ ಒಂದು ಗ್ಯಾರಂಟಿ ಇರಬೇಕಾದ ವಿಚಾರದಲ್ಲಿ ಶ್ರೀ ವಿ. ಮರಿಯಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ವರ್ಷದ ಸುಗ್ಗೀ ಕಾಲದಲ್ಲಿ ರೈತನ ಬಳಿ ಯಾರೂ ಬಂದು ದವಸವನ್ನು ಬೆಲೆ ಮಾಡಲಿಲ್ಲ. ಆಗ ರೈತರು ಹೆದರಿ ತಮ್ಮಲ್ಲಿದ್ದ ದವಸ ಧಾನ್ಯಗಳನ್ನು ಅಗ್ಗದ ಬೆಲೆಗೆ ಮಾರಿ ಬಿಟ್ಟರು. ಈಗ ಅದು ಪಲ್ಲಾಕ್ಕೆ ಹತ್ತು ರೂಪಾಯಿಗಳು ಜಾಸ್ತಿಯಾಗಿದೆ. ಈ ರೀತಿ ಆದರೆ ಬೆಳೆದ ವನಿಗೂ ಪ್ರಯೋಜನವಿಲ್ಲ; ಬೆಳೆಸತಕ್ಕವನಿಗೂ ಪ್ರಯೋಜನವಿಲ್ಲ. ಮಧ್ಯಸ್ತಗಾರನಿಗೆ ಈ ಪ್ರಯೋಜನ ಈಗ ಹೋಗುತ್ತಿದೆ. ಆದುದರಿಂದ ಮುಂದಿನ ಸುಗ್ಗಿ ಬರುವುದರೊಳಗಾಗಿ ಇಂತಿಂಥ ಧಾನ್ಯಕ್ಕೆ ಇಷ್ಟಿಷ್ಟು ಬೆಲೆ—ಅದಕ್ಕಿಂತ ಬೆಲೆ ಬಿದ್ದು ಹೋದರೆ ಆಗ ಸರ್ಕಾರದವರು ಆ ದವಸ ಧಾನ್ಯ ಗಳನ್ನು ಕೊಳ್ಳುವುದಾಗಿ ರೈತರಿಗೊಂದು ಭರವಸೆ ಕೊಡಬೇಕು. ಇದರಿಂದ ರೈತನಿಗೆ ಹೆಚ್ಚು ಆಹಾರ ಉತ್ಪನ್ನ ಮಾಡಲು ಒಂದು ಪ್ರೋತ್ಸಾಹವಿರುತ್ತದೆ. ಇದರಿಂದ ರೈತನಿಗೂ ಅನುಕೂಲ. ಸರ್ಕಾರ ದವರು ಒಂದು ಮಿನಿಮಂ ಪ್ರೈಸನ್ನು ನಿಗದಿ ಮಾಡಲೇಬೇಕೆಂದು ಹೇಳುತ್ತೇನೆ. ಮೇಲಾಗಿ ಈ ದಿವಸ ರೈತನಿಗೂ ಸಹ ಅವನು ಬೆಳೆಯತಕ್ಕ ದವಸ ಧಾನ್ಯಗಳ ಬಗ್ಗೆ ಕಾಸ್ಟ್ ಅಫ್ ಪ್ರೊಡಕ್ಷನ್ ಜಾಸ್ತಿ ಯಾಗಿದೆ. ಉಳುಮೆ—ಗೊಬ್ಬರ ಹಾಗೂ ವ್ಯವಸಾಯದ ಮುಟ್ಟುಗಳ ಬೆಲೆ ಬಂದಕ್ಕೆ ನಾಲ್ಕರಷ್ಟು ಏರಿದೆ. ಕೂಲಿ ಆಳುಗಳಿಗೂ ಕೂಲಿ ಜಾಸ್ತಿ ಆಗಿದೆ. ಹೀಗಿರುವಾಗ ರೈತನು ತಾನು ಬೆಳೆದ ದವಸ ವನ್ನು ಕಡಮೆ ಬೆಲೆಗೆ ಮಾರಾಟ ಮಾಡಲು ಸಾಧ್ಯವಿಲ್ಲ. ಯಾವ ವಸ್ತುವೇ ಆಗಲಿ ಅದರ ಉತ್ಪತ್ತಿ ವೆಚ್ಚಕ್ಕೆ ತಕ್ಕ ಬೆಲೆ ದೊರೆಯಲೇಬೇಕು. ಈ ದಿವಸ ಕಾರ್ಖಾನೆಗಳಲ್ಲಿ ಸಾಮಾನುಗಳು ತಯಾರಾದರೆ ಅವುಗಳ ಉತ್ಪನ್ನದ ವೆಚ್ಚ ಇತ್ಯಾದಿಗಳನ್ನೆಲ್ಲ ಲೆಕ್ಕ ಹಾಕಿ ಅದರ ಮಾರಾಟದ ಬೆಲೆಯನ್ನು ನಿಗದಿ ಮಾಡಲಾಗುತ್ತದೆ.

ಇದೇ ರೀತಿ ವ್ಯವಸಾಯಗಾರರೂ ಕೂಡ cost of cultivation ಕೊಡತಕ್ಕದ್ದು ಉತ್ತಮ. ನಾನು ಎಸ್ಟಿಮೇಟು ಕಮಿಟಿಯ ಮೆಂಬರಾಗಿ ಪ್ರವಾಸ ಹೋಗಿ ವ್ಯವಸಾಯ ಇಲಾಖೆಯನ್ನು ಪ್ರಶ್ನೆ ಕೇಳಿದಾಗ ನಮ್ಮ ಡಿಪಾರ್ಟುಮೆಂಟಿನಿಂದ Agriculture cost of cultivation ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಆಗ ಅವರು ಉತ್ತರ ಕೊಟ್ಟರು. ಆದರೆ ಈಗ ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು cost of cultivation ನ್ನು ಬೆಂಗಳೂರು ಜಿಲ್ಲೆಗಾಗಿ ಮಾಡಿಸಿದೆ ಎಂದು ಹೇಳಿ ಅದಕ್ಕಾಗಿ ಸುಮಾರು 444/-ರೂಪಾಯಿಗಳಷ್ಟು ಖರ್ಚು ಒಂದು ಎಕರೆಗೆ ಆಗಬಹುದು ಎಂದು ಹೇಳಿದರು. ಬಹಳ ಸಂತೋಷ. ಒಂದು ಎಕರೆಗೆ 444/-ರೂಪಾಯಿನಷ್ಟಾದರೆ ಎಷ್ಟು ರಾಗಿ ಬೆಳೆಯಬಹುದು ಅದರ ಪರ್ಸೆಂಟೇಜನ್ನು ಇವೊತ್ತು ನೋಡಿದರೆ ಎಷ್ಟು ಲಾಭ ಬರುತ್ತದೆ ಅಥವಾ

(ಶ್ರೀ ಎ. ಜಿ. ಬಂದೀಗೌಡ)

ಎಷ್ಟು ನಷ್ಟ ಬರುತ್ತದೆ ಎನ್ನುವುದು ನಮಗೆ ಗೊತ್ತಾಗುತ್ತದೆ. ಹಾಗೇ ಪ್ರತಿಯೊಂದು ಬೆಳೆಗೂ ಕೂಡ cost of cultivation ಇಷ್ಟು ಇದರ ಬೆಲೆ ಇಷ್ಟು ಎಂದು ಜನಗಳಿಗೆ ತಿಳಿಯುವಂತೆ ಹೇಳಿದರೆ ಜನರಲ್ಲಿ ಒಂದು ತರಹದ ಹಾಹಾಕಾರ ಮತ್ತು ದಂಗೆ ಏಳಲು ಅವಕಾಶವಿರುವುದಿಲ್ಲ. Cost of cultivation ನನ್ನು ನೋಡಿಕೊಂಡು ರೈತ ಇಷ್ಟಕ್ಕೆ ದವಸವನ್ನು ಮಾರುತ್ತಾನೆ ಎಂದು. ಈ ರೀತಿ ಮಾಡುವುದು ಉತ್ತಮ. ಹಾಗೆ ಮಾಡಿದರೆ ಆಹಾರದ ಅಭಾವವೂ ಸ್ವಲ್ಪ ಕಡಿಮೆಯಾಗುತ್ತದೆ ಎಂದು ನನಗೆ ತೋರುತ್ತದೆ.

ಇನ್ನು Famine Relief ಮತ್ತು Flood Relief ಬಗ್ಗೆ ನಾನು ಒಂದು ಸೂಚನೆ ಕೊಡುತ್ತೇನೆ. ಏಕೆಂದರೆ ನಮ್ಮಲ್ಲಿ ಪ್ರವಾಹ ಕೂಡ ಆಗಿಂದಾಗ್ಗೆ ಬರುತ್ತಿದೆ. ಇದರಿಂದಾಗಿ ವ್ಯವಸಾಯ ಮಾಡುವ ಅನೇಕರ ಜಮೀನುಗಳು ಮುಳುಗಡೆಯಾಗಿ ಪ್ರವಾಹದಿಂದ ಕೊಚ್ಚಿ ಹೋಗುತ್ತದೆ. ಇದಕ್ಕಾಗಿ ಶಾಶ್ವತವಾದ ಪರಿಹಾರ ಕಾರ್ಯಕ್ರಮವೊಂದನ್ನು ಕಂಡು ಹಿಡಿಯುವುದು ಉತ್ತಮ. ನಮ್ಮ ಇಂಡಿಯಾ ಸರಕಾರದವರೂ ಕೂಡ ಪ್ರವಾಹಕ್ಕಾಗಿ ಶಾಶ್ವತವಾಗಿ ಏನು ಮಾಡಬೇಕು ಎನ್ನುವುದಕ್ಕಾಗಿ ಒಂದು ಕಮಿಟಿ ಮಾಡಿ ಅವರು ಒಂದು ಖಾಯಂ ಆದ ಸಲಹೆಗಳನ್ನು ಕೊಡಲಿ ಎಂದು ಹೇಳಿದ್ದಾರೆ. ಅಂತಹ ಒಂದು ಕಮಿಟಿ ಅಲ್ಲಲ್ಲಿ ಕರೆಯುತ್ತ ಬಂದಿದ್ದಾರೆ, ರಾಜ್ಯ ಸರಕಾರದವರು ಕೂಡ ಈ ಸಲಹೆಯನ್ನು ತೆಗೆದುಕೊಂಡು ಇದೇ ಸಂದರ್ಭದಲ್ಲಿ Flood Relief ಗಾಗಿ ಅಂತಹ ಒಂದು ಕಮಿಟಿ ಮಾಡಬೇಕೆಂದು ಸೂಚಿಸುತ್ತೇನೆ. Famine Relief and Flood Relief ಇವೆರಡನ್ನು ಒಟ್ಟಿಗೆ ತೆಗೆದುಕೊಂಡು ಜನಕ್ಕೆ ಸಾಧುವಾದಷ್ಟು ಸಹಾಯವನ್ನು ಕೊಡಬೇಕೆಂದು ಸೂಚನೆ ಮಾಡುತ್ತೇನೆ.

ಲಿಫ್ಟ್ ಇರಿಗೇಷನ್ನು ಮಾಡುವುದು ಬಹಳ ಶ್ರೇಷ್ಟವಾದುದು. ಸರಕಾರದವರು ಆಗಾಗ್ಗೆ ಇದರ ಬಗ್ಗೆ ಸ್ಟೇಟುಮೆಂಟುಗಳನ್ನು ಕೊಡುತ್ತಿರುತ್ತಾರೆ. ಹೀಗೆ ಬೇಕಾದಷ್ಟು ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಲಿಫ್ಟ್ ಇರಿಗೇಷನ್ನು ಕೆಲಸಗಳನ್ನು ಪ್ರಯಾರಿಟಿ ಬೇಸಿಸ್ಸಿನ ಮೇಲೆ ಮಾಡುವುದೊಳ್ಳೆಯದು. ನಮಗೆ ಎಲ್ಲೆಲ್ಲಿ ವ್ಯವಸಾಯ ಮಾಡುವುದಕ್ಕೆ ನೀರಿನ ಸೌಕರ್ಯ ಸರಿಯಾಗಿ ಸಿಗದೆ ಇರುವುದರಿಂದ ಕೆಲವು ಕಡೆ ಎಕರೆಗೆ ಮೂರು, ನಾಲ್ಕು ಪಲ್ಲದಷ್ಟು ರಾಗಿಯನ್ನು ಬೆಳೆಯಲು ಆಗುತ್ತಿಲ್ಲ, ಆದರೆ ಲಿಫ್ಟ್ ಇರಿಗೇಷನ್ನಿನ ಸಹಾಯದಿಂದಾಗಿ ಕೆಲವು ಕಡೆಗಳಲ್ಲಿ ಎಕರೆಗೆ ಹದಿನೈದು ಪಲ್ಲದಷ್ಟು ರಾಗಿ ಬೆಳೆದ ನಿದರ್ಶನಗಳೂ ನಮ್ಮ ಮುಂದಿದೆ ಲಿಫ್ಟ್ ಇರಿಗೇಷನ್ನು ಸ್ಕೀಮುಗಳನ್ನು ಹೆಚ್ಚಾಗಿ ಮಾಡಲು ಈಗ ಮಾಡಿರತಕ್ಕ ಕೆಲವು ಕಾನೂನುಗಳನ್ನು ಸಡಿಲಿಸಿ ಆದಷ್ಟು ಬೇಗ ಈ ಯೋಜನೆಯನ್ನು ಹೆಚ್ಚು ಮಾಡುವುದು ಸೂಕ್ತ.

ಈ ಎಲ್ಲ ಸಲಹೆಗಳನ್ನೂ ಸರಕಾರ ತೆಗೆದುಕೊಂಡು ಆದಷ್ಟು ಜಾಗ್ರತೆ ಇದನ್ನು ಕಾರ್ಯ ರೂಪಕ್ಕೆ ತರುತ್ತಾರೆ ಮತ್ತು ಸದ್ಯದ ತುರ್ತುಪರಿಸ್ಥಿತಿಗೂ, ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಬಿ. ಬೊಮ್ಮಣ್ಣ (ಅರಸೀಕೆರೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ದೇಶದಲ್ಲಿ ಅನೇಕ ಕಡೆ ಅಭಾವ ಪರಿಸ್ಥಿತಿ ಬಂದಿದೆ ಎಂದು ಈ ಅಭಾವದ ವಿಷಯದಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರುವ ಪ್ರಸಂಗ ಇಲ್ಲಿ ಬಂದಿದೆ. ಈ ವಿಷಯ ಶುಕ್ರವಾರ ಅಥವಾ ಶನಿವಾರ ಉದ್ಭವವಾಗಿದೆ, ನಾಲ್ಕೈದು ತಿಂಗಳಿನಿಂದಲೂ ಮಳೆಯಾಗದೆ ಇರುವುದರಿಂದ ಇದರ ಬಗ್ಗೆ ಅಸೆಂಬ್ಲಿಯಲ್ಲಿ ಏನೂ ತೀರ್ಮಾನ ಮಾಡುತ್ತಾರೆ ಎಂದು ರೈತರ ಕಾದು ನೋಡುತ್ತಿದ್ದಾರೆ. ಅದು ಅವರ ದುರಾದೃಷ್ಟದಿಂದಲೋ ಏನೋ ಈ ದಿವಸ ಮಳೆ ಬಂದು ಬಿಟ್ಟು ಇದರ ಹುರುಪು ಕಡಿಮೆಯಾಗುತ್ತಿದೆ ಎಂದು ಕಾಣುತ್ತದೆ. ಹೆಚ್ಚು ಕಡಿಮೆ ಮಾತನಾಡಿದ ಎಲ್ಲರೂ ಇಂತಹ ಅಭಾವ ಪರಿಸ್ಥಿತಿ ನಮ್ಮ ದೇಶಕ್ಕೆ ತಪ್ಪಿದ್ದಲ್ಲ, ಮುಂದೆ ಇಂತಹ ಅಭಾವಗಳು ಬಂದರೂ ಜನರು ಭಯವಾಗದ ರೀತಿಯಲ್ಲಿ ಒಂದು ತೀರ್ಮಾನಕ್ಕೆ ಬರಬೇಕೆಂದು ನನ್ನ ಆಸೆ. ಅಭಾವ ಪರಿಸ್ಥಿತಿ ಎನ್ನುವುದು ನೂರಾರು ವರ್ಷಗಳ ಇತಿಹಾಸ ನೋಡಿಕೊಂಡರೆ ಹತ್ತು ವರ್ಷಕ್ಕೊಂದಾವರ್ತಿ, ಇಪ್ಪತ್ತು ವರ್ಷ ಕ್ಕೊಂದಾವರ್ತಿ ಸಾಮಾನ್ಯವಾದ ಕ್ಷಾಮ ಬರುತ್ತಿತ್ತು ಎಂದು ಹೇಳುತ್ತಿದ್ದರು. ಅರವತ್ತು ವರ್ಷಕ್ಕೊಮ್ಮೆ "ಘೋರಕ್ಷಾಮ" ಎಂದು ಬರುತ್ತಿತ್ತು. ಈಚೆಗೆ 1940ನೇ ಇಸವಿಯಿಂದ ಪ್ರತಿ ವರ್ಷವೂ ಕ್ಷಾಮ ಎನ್ನುವುದು ಬರುತ್ತಲೇ ಇದೆ. ಇದಕ್ಕೆ ಕಾರಣವನ್ನು ತಜ್ಞರು ಹೇಳಬೇಕು ಸರಕಾರ ಕೂಡ ಇದಕ್ಕೆ ಏನೂ ಅಂತಹ ಕಠಿಣವಾದ ಕಾರ್ಯಕ್ರಮವೊಂದನ್ನು ಯೋಚನೆ ಮಾಡಲು ಪ್ರಯತ್ನ ಮಾಡಿಲ್ಲ. ಕಾಲಕಾಲಕ್ಕೆ ಮಳೆ ಬರುವುದಿಲ್ಲ. ಎನ್ನುವುದು ಒಂದು ಅಲ್ಲದೆ ನಮ್ಮಲ್ಲಿ ಹಲವರು ಹೇಳಿದಂತೆ ಸರಕಾರದವರು ರಾಗಿ, ಅಕ್ಕಿಯನ್ನು ಶೇಖರಣೆ ಮಾಡುವಾಗ ಅದನ್ನು ಬೂಡ್ಸಿನ ಕಾಲಿನಲ್ಲಿ ತುಳಿದು ಒದ್ದುಬಿಟ್ಟಿದ್ದರಿಂದ ಅದಕ್ಕೋಸ್ಕರ ಕ್ಷಾಮ ಬರುತ್ತಿದೆ. ಧಾನ್ಯಲಕ್ಷ್ಮಿ ಎನ್ನುವುದು ಕೈ ಬಿಟ್ಟಿದೆ

ಎನ್ನುತ್ತಾರೆ. ಬೆಳೆಗಳನ್ನು ಬೆಳೆಯಲು ಮಳೆ ಬಹಳ ಮುಖ್ಯವಾಗಿ ಬೇಕು. ಕ್ಷಾಮ ಬಾರದಂತೆ ಮಾಡಲು ಸರಕಾರ ನೋಡಿಕೊಳ್ಳಬೇಕು ಇದು ಸರಕಾರದ ಮೊದಲನೇ ಕರ್ತವ್ಯ. ಇದನ್ನು ಮಾಡದಿರುವುದರಿಂದ ಅನೇಕ ನ್ಯೂನತೆಗಳಿಗೆ ಕಾರಣವಾಗಿದೆ. ಹಿಂದೆ Grow More Food Seheme ಅನ್ನು ಜಾರಿಗೆ ತಂದರು ಆವಲ್ಲವೇ ತಗಾವಿ ಲೋನು ಕೊಡುವುದು ಇದಕ್ಕಾಗಿ short term loans, medium term loans ಎಂದು ಕೊಡುತ್ತಿದ್ದಾರೆ. ಷಾರ್ಟ್ ಟರ್ಮ್ ಲೋನೆಂದು 300-400ಗಳಷ್ಟನ್ನು ರೈತ ತೆಗೆದುಕೊಂಡು ಹೋಗಿ ಗೊಬ್ಬರ, ಬೀಜ ತೆಗೆದುಕೊಂಡು ಭೂಮಿಗೆ ಹಾಕಿದರೆ ಹಾಳಾಗಿ ಹೋಗುತ್ತಾನೆ. ಏಕೆಂದರೆ ಬೆಳೆ ಬರದೇ ಹಾಳಾಗಿ ಹೋಗುತ್ತದೆ ಎಂದು ಅದನ್ನು ಬೇರೆ ರೀತಿ ಉಪಯೋಗಿಸಿಕೊಳ್ಳುತ್ತಾನೆ. ಇಲ್ಲಿ ಕಮರ್ಷಿಯಲ್ ಕ್ರಾಪ್ ಆಗಲೀ ಬೇರೆ ಯಾವ ಬೆಳೆ ಮಾಡಲು ಅವನ ನಿರೀಕ್ಷೆಯಂತ ಮಳೆ ಬರುವುದಿಲ್ಲ. ಅದರಿಂದ ಅವನು ಸಾಲವಾಗಿ ಪಡೆಯುವ ಷಾರ್ಟ್ ಟರ್ಮ್ ಲೋನನ್ನು ಬೇರೆ ರೀತಿಯಾಗಿ ವ್ಯವಹಾರಕ್ಕಗಿ ಉಪಯೋಗಿಸುತ್ತಿರುವುದರಿಂದ ಸರಕಾರ ಕೊಟ್ಟ ಹಣ ವಾಪಸ ಬರುತ್ತಿದೆ. ಇಲ್ಲವಿದ್ದರೆ ಅವನು ಕೊಡುವುದಕ್ಕೆ ಆಗುವುದಿಲ್ಲ. ಕ್ಷಾಮಪರಿಹಾರ ನಿಧಿ ಎಂದು ಡೆಪ್ಯೂಟಿ ಕಮಿಷನರವರದು ಮಂಜೂರು ಮಾಡುತ್ತಾರೆ. ಅದರಂತೆ ತಕಾವಿ ಸಾಲಗಳನ್ನು ಮಂಜೂರು ಮಾಡುತ್ತಾರೆ. ಆದರೆ ಮಳೆಯೇ ಬಾರದೇ ಹೋದರೆ ಅವನು ಸಾಲ ತೆಗೆದುಕೊಂಡು ಜಮೀನನ್ನು ಹೇಗೆ ತಾನೇ ಆಬಾದು ಮಾಡುವುದಕ್ಕಾಗುತ್ತದೆ. ಅಲ್ಲದೆ ಈಗ ರಸ್ತೆ ಕೆಲಸ ಮಾಡಬೇಕೆಂದು ಹೇಳುತ್ತಾರೆ. ಭೂಮಿಯಲ್ಲಾ ಒಣಗಿರುತ್ತದೆ, ಇದರಿಂದ ರಸ್ತೆ ಕೆಲಸ ಎಷ್ಟು ಮಟ್ಟಿಗೆ ನಡೆಯುತ್ತದೆ ಇದಕ್ಕೆ ಕೆರೆಗಳ ಒಳ ಅಂಗಳದಲ್ಲಿ ನಾಲ್ಕು ಬಾವಿಗಳನ್ನು ತೆಗೆಸಲು ಕ್ಷಾಮ ಪರಿಹಾರ ನಿಧಿಯಿಂದ ಹಣ ಒದಗಿಸಿದರೆ ಕ್ಷಾಮ ನಿವಾರಣೆ ಮಾಡಲು ಸ್ವಲ್ಪ ಜನಕ್ಕೆ ಉಪಕಾರ ಮಾಡಿದಂತಾಗುತ್ತದೆ. ರಸ್ತೆ ಕೆಲಸ ಮಾಡಿಸುವುದರಿಂದ ಕ್ಷಾಮ ಬಂದಾಗ ಹೆಚ್ಚಿನ ಸಹಾಯ ಮಾಡಿದಂತಾಗುವುದಿಲ್ಲ. ಕ್ಷಾಮ ನಿವಾರಣಾ ನಿಧಿಯಿಂದ ಕ್ಷಾಮವನ್ನು ಬರದಂತ ಕಡೆಗಟ್ಟುವ ಕಾರ್ಯಕ್ರಮಗಳಿಗೆ ಖರ್ಚುಮಾಡಿದರೆ ಗ್ರಾಮಾಂತರಗಳಲ್ಲಿ ಕ್ಷಾಮನಿವಾರಣೆಗಾಗಿ ಸಹಾಯ ಮಾಡಿದಂತಾಗುತ್ತದೆ.

ಈವಾಗ 1940ನೇ ಇಸವಿಯಿಂದ ಮಳೆ ಸಕಾಲಕ್ಕೆ ಬರದೆ ಇರುವುದು ತಮಗೆ ಗೊತ್ತಿದೆ. ಆದ್ದರಿಂದ ಆ ಕಾಲದಲ್ಲಿ ಮಳೆಯಿಂದ ಬರತಕ್ಕಂಥ ನೀರನ್ನು ಕೂಡಿಟ್ಟುಕೊಂಡ ಸಕಾಲಕ್ಕೆ ಉಪಯೋಗವಾಗುವ ಹಾಗೆ ಮಾಡುವುದು ಒಳ್ಳೆಯದು. ಈ ಕಾಲದಲ್ಲಿ ಬರತಕ್ಕಂಥ ಮಳೆಯಿಂದ ನೀರನ್ನು ಕೂಡಿರಿಸಿಕೊಂಡರೆ, ಬಾವಿಗಳ ಪ್ರಯೋಜನ ಸಹ ಹೆಚ್ಚಾಗುತ್ತದೆ. ನಮ್ಮ ಪಂಪುಸೆಟ್ಟು, ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಚೆನ್ನಾಗಿ ನಡೆಸಬಹುದು. 1930ನೇ ಇಸವಿ ಹಿಂದಕ್ಕೆ ರೈತರ ಸ್ಥಿತಿ ಏನಿತ್ತೆಂದರೆ, ಬೇಕಾದಷ್ಟು ಬೆಳೆಯುತ್ತಾ ಇದ್ದರು, ಮನೆ ತುಂಬ ದವಸ ಧಾನ್ಯವಿರುತ್ತಿತ್ತು, ಆದರೆ ಧಾರಣೆ ಇರಲಿಲ್ಲ ಈವಾಗ ಬೆಳೆಗೆ ಸಾಮಾನ್ಯವಾದ ಧಾರಣೆ ಇದೆ, ಆದರೆ ಬೆಳೆ ಅಭಾವ ಬಂದಿವೆ. ಸಕಾಲಕ್ಕೆ ಮಳೆ ಈವಾಗ ಇಲ್ಲ. ಅದರಿಂದ ತೊಂದರೆ ಪಡುತ್ತಿದ್ದೇವೆ. ನಾನು ಆಗಲೇ ಹೇಳಿದ ಹಾಗೆ, ಆ ಕಾಲಕ್ಕೆ ಬಂದ ಮಳೆಯನ್ನು ಸಕಾಲದಲ್ಲಿ ಉಪಯೋಗಿಸಿಕೊಳ್ಳಲು ವ್ಯವಸ್ಥೆ ಮಾಡಿಕೊಳ್ಳಬೇಕು. ಬಾವಿಯಿಂದಲೂ ವ್ಯವಸಾಯ ಮಾಡಬೇಕು; ಏಕೆಂದರೆ ಮಳೆಯನ್ನು ಕ್ರಮ ಪಡಿಸುವುದಕ್ಕಾಗುವುದಿಲ್ಲ.

ಈಗ ಇನ್ನೊಂದು ಯೋಚನೆ ಮಾಡಬೇಕಾಗಿದೆ. ಈ ವ್ಯವಸಾಯ ವೃತ್ತಿಯನ್ನು ವಿಶೇಷವಾಗಿ ಬಂಡವಾಳಸ್ಥರೇ ಅವಲಂಬಿಸಿದರೆ ಉತ್ತಮವಾಗುವುದೇನೋ ಎಂದೆನಿಸುತ್ತದೆ. ಅವರಲ್ಲಿ ಕೆಲವರು ಬಹಳ ಉತ್ತಮ ಮಟ್ಟದ ಕೃಷಿ ಮಾಡಿದ್ದಾರೆ. ಬಂಡವಾಳಸ್ತರಿಗೆ ಹೆಚ್ಚಿಗೆ ನಷ್ಟ ಬಂದರೂ, ಅದನ್ನು ಮತ್ತೊಂದರಿಂದ ಸರಿದೂಗಿಸಿಕೊಳ್ಳುತ್ತಾರೆ. ಉದಾಹರಣೆ ಹೇಳುವುದಾದರೆ ಜೋಗಿಹಳ್ಳಿಯಲ್ಲಿ ಶ್ರೀ ವೆಂಕಟಸ್ವಾಮಪ್ಪನವರು ವ್ಯವಸಾಯ ಮಾಡಿದ್ದಾರೆ. ಅವರು ಆಬಾದಿಗೆ ತಂದಿರುವ ಭೂಮಿಯನ್ನು ಮುಂಚೆ ನೋಡಿದ್ದರೆ, ಅಷ್ಟು ಕಲ್ಲುಬಂಡೆಯಿಂದ ಕೂಡಿದ ಪ್ರದೇಶದಲ್ಲಿ ಏನಾದರೂ ವ್ಯವಸಾಯ ಮಾಡುವುದಕ್ಕೆ ಸಾಧ್ಯವೇ ಎಂಬ ಶಂಕೆ ಉಂಟುಮಾಡುತ್ತಿತ್ತು. ಈವಾಗ ನೋಡಿದರೆ ಆ ಕಲ್ಲು ಭೂಮಿಯಲ್ಲಿ ಬೆಳೆ ಬೆಳೆಯುತ್ತಿದ್ದಾರೆ. ಇವತ್ತಿನ ದಿವಸ ಅಲ್ಲಿ ನೋಡಿದರೆ ಲಕ್ಷ್ಮಿ ಇದ್ದಾಳೆ ಅನ್ನುವುದು ಎದ್ದು ಕಾಣುತ್ತದೆ. ಆ ಭೂಮಿಯನ್ನು ಫಲವತ್ತಾಗಿ ಹೇಗೆ ಮಾಡಿದ್ದಾರೆಂದು ತಿಳಿದುಕೊಳ್ಳಲು ನಮ್ಮ ಮಂತ್ರಿಗಳು ಆ ಹಳ್ಳಿಗೆ ಹೋಗಿ ನೋಡಿಕೊಂಡು ಬರಬೇಕು. ನಮಗೆ large-scaleನಲ್ಲಿ ಬೇಡ, small-scaleನಲ್ಲಿ ರೈತರಿಗೆ ಆ ತರಹ ಅನುಕೂಲ ಮಾಡಿಕೊಟ್ಟರೆ, ನಮ್ಮ ಯೋಜನೆಗಳು ಸಫಲವಾಗುತ್ತವೆ, ಹೆಚ್ಚು ಆಹಾರವನ್ನು ಬೆಳೆಯಬಹುದು, ರೈತರೂ ಮುಂದಕ್ಕೆ ಬರುತ್ತಾರೆ. ಅಲ್ಲಿ ಹೋಗಿ ನೋಡಿದರೆ ಚೆನ್ನಾಗಿ ಗೊತ್ತಾಗುತ್ತದೆ.

ನಮ್ಮ ಅರಸೀಕೆರೆ ಪರಿಸ್ಥಿತಿಯನ್ನು ಸ್ವಲ್ಪ ಸಮಯದಲ್ಲಿಯೇ ಹೇಳುತ್ತೇನೆ ನಮ್ಮ ಅರಸೀಕೆರೆ ಕಾನ್‌ಸ್ಟಿಟ್ಯುಯನ್ಸಿಯಲ್ಲಿ ತೆಂಗಿನಗಿಡ ಜಾಸ್ತಿ ಇದೆ. ಆದ್ದರಿಂದ ಪ್ರತಿಯೊಬ್ಬರಿಗೂ ಬಾವಿ ತೆಗೆಯುವುದಕ್ಕೆ ಉತ್ಸಾಹ ಕಡಿಮೆ ಏಕೆಂದರೆ, ಒಂದು ಊರಿನಲ್ಲಿ ನೋಡಿದರೆ ಸ್ವಲ್ಪ ಉತ್ತಮವಾಗಿ ಬೆಳೆಯು

(ಶ್ರೀ ಎ. ಬಿ. ಬೊಮ್ಮಣ್ಣ)

ತಕ್ಕಂಥಾವರು ಒಂದೆರಡು ಒಕ್ಕಲುಗಳಿರಬಹುದು. ಆದರೆ ಬಾಕಿ ಒಕ್ಕಲುಗಳೆಲ್ಲಾ ಟ್ಯೂಬ್‌ವೆಲ್ ಗಳಿಂದ ವ್ಯವಸಾಯ ಮಾಡಬಹುದು. ಈಗ 10 ಎಕರೆ ಜಮೀನನ್ನು ಹೊಂದಿರಬೇಕು, ಮಾಡಿಸುತ್ತಿರಬೇಕು ಎಂಬ ಒಂದು ಜಂಭ ನಮ್ಮ ಜನರಲ್ಲಿ ಇದೆಯೇ ಹೊರತು, 10 ಎಕರೆಯಲ್ಲಿ 5 ಎಕರೆಯಲ್ಲಿ ಬೆಳೆಯುವಷ್ಟನ್ನು ಒಂದು ಎಕರೆಯಲ್ಲಿ ಬೆಳೆಯಬೇಕೆಂಬ ಆಕಾಂಕ್ಷೆ ಇಲ್ಲ; ಅಂಥ ಒಂದು ಉತ್ಸಾಹ ಯಾರಲ್ಲಿಯೂ ಕಂಡುಬರಲಿಲ್ಲ. ನಿಜವಾಗಿಯೂ ಒಂದು ಎಕರೆಯಲ್ಲಿ, 2 ಪಲ್ಲಕ್ಕೆ ಜಾಸ್ತಿ ಬರುವುದಿಲ್ಲ. 5 ಎಕರೆ ಜಮೀನು ಮಾಡಿಕೊಳ್ಳಬೇಕು ಎಂಬ ಒಂದು ಅನಾವಶ್ಯಕವಾದ ಆಸೆ ಇದೆಯೇ ಹೊರತು, ಇವತ್ತೂ ಒಂದು ಎಕರೆಯೊಳಗೆ 10 ಪಲ್ಲ ಬೆಳೆಯಬೇಕೆಂಬ ಉತ್ಸಾಹವಿಲ್ಲ. ತಾವು ಹೋಬಳಿಗೆ ಒಂದೊಂದು ಕಡೆ, ಎರಡು ಕಡೆ ಫಾರಮ್ಮುಗಳನ್ನು ಮಾಡಿ, ಟ್ಯೂಬ್ ವೆಲ್ಲುಗಳಿಂದ ಎಷ್ಟರ ಮಟ್ಟಿಗೆ ಹೆಚ್ಚಿಗೆ ಆಹಾರ ಬೆಳೆಯಬಹುದು ಎಂದು ತೋರಿಸಿಕೊಟ್ಟರೆ, 10 ಜನಕ್ಕೆ ಉಪಕಾರವಾಗುತ್ತದೆ. ಜಾಸ್ತಿ ಬೆಳೆ ಬೆಳೆಯುವ ಎಕ್ಸ್‌ಪೆರಿಮೆಂಟಲ್ ಪ್ಲಾಟುಗಳನ್ನು ಸರ್ಕಾರದವರು ಮಾಡಿದರೆ, ಅದನ್ನು ನೋಡಿಕೊಂಡು ಒಂದು ಎಕರೆಯಲ್ಲಿ 10 ಪಲ್ಲ ಬೆಳೆಯಬಹುದು ಎಂಬ ಭರವಸೆ ರೈತರಲ್ಲಿ ಬರುತ್ತದೆ. ಅಂಥ ಪ್ರದರ್ಶನಗಳು ರೈತರಿಗೆ ಉತ್ತೇಜನ ಕೊಡುತ್ತವೆ. ಅದನ್ನು ತಾವು ಮಾಡಬೇಕು.

ನಮ್ಮ ಅರಸೀಕೆರೆಗೆ ಯಗಚಿ ಹೊಳೆಯನ್ನು ತಿರುಗಿಸುವುದರಿಂದ ಅನುಕೂಲವಾಗುತ್ತದೆ. ಸುಮಾರು 40 ವರ್ಷದಿಂದ ಈ ಪ್ರಶ್ನೆ ಹಾಗೆಯೇ ಉಳಿದಿದೆ. ಯಗಚಿ ನೀರು ಅರಸೀಕೆರೆಗೆ ಬರುವಂತೆ ಅದನ್ನು ತಿರುಗಿಸಲು ದುಬಾರಿ ಖರ್ಚಾಗುತ್ತದೆಂದ ವರದಿ ಬಂದಿದೆ ಎಂದು ಕೇಳಿದ್ದೇನೆ, ಎಷ್ಟೇ ಖರ್ಚಾದರೂ ಚಿಂತೆ ಇಲ್ಲ. ಈ ಯೋಜನೆಯಿಂದ ಕ್ಷಾಮಕ್ಕೆ ತುತ್ತಾಗತಕ್ಕಂಥ ಪ್ರದೇಶಕ್ಕೆ ಬಹಳ ಉಪಯೋಗವಾಗುವುದರಿಂದ ಸರ್ಕಾರದವರು ಅದನ್ನು ಉದಾರತೆಯಿಂದ ನೋಡಬೇಕು, ಖರ್ಚನ್ನು ಏತಕ್ಕೆ ತೆಗೆದುಕೊಳ್ಳಬಾರದು. ಹೇಗಾದರೂ ಯಗಚಿ ಹೊಳೆ ನೀರು ನಮ್ಮ ಅರಸೀಕೆರೆ ತಾಲ್ಲೂಕಿಗೆ ಉಪಯೋಗವಾಗುವಹಾಗೆ ಮಾಡಿಕೊಡಬೇಕು.

ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ನಾನು ನಮ್ಮ ಎದುರಿಗಿರುವ ಗೊತ್ತುವಳಿಯ ಮೇಲೆ ಮಾತನಾಡಲು ಒಂದು ಸಂಧಿಯನ್ನು ಒದಗಿಸಿಕೊಟ್ಟದ್ದಕ್ಕೆ, ಈ ಸೂಚನೆಯನ್ನು ತಂದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಮತ್ತು ಸಾಮಾನ್ಯ ವಿವೇಚನೆಗೊಳಪಟ್ಟ ಕೆಲವು ವಿಷಯ ನಾನು ಮೊದಲು ಹೇಳಿ, ಆಮೇಲೆ ಒಂದು ಪ್ರತ್ಯೇಕವಾದ ವಿಷಯಕ್ಕೆ ಬರುತ್ತೇನೆ.

ಸಾಮಾನ್ಯವಾಗಿ ಈವರೆಗೆ ನಿನ್ನೆಯಿಂದ ನಮ್ಮ ಅನೇಕ ಸ್ನೇಹಿತರು ಈ ಬರಗಾಲದ ವಿಷಯದಲ್ಲಿ, ಬರಗಾಲದ ನಿವಾರಣೆ ವಿಷಯದಲ್ಲಿ ಮತ್ತು ಇವುಗಳ ಬಗ್ಗೆ ನಿರಂತರವಾದ ವ್ಯವಸ್ಥೆ ಯಾವರೀತಿ ಮಾಡಬೇಕೆಂಬುದರ ಬಗ್ಗೆ ಅನೇಕ ಸೂಚನೆಗಳನ್ನು ಮಾಡಿರುತ್ತಾರೆ. ಈ ದೃಷ್ಟಿಯಿಂದ ಮುಖ್ಯವಾಗಿ ನಾವು ಆಲೋಚನೆ ಮಾಡಬೇಕಾದುದು ಏನೆಂದರೆ, ಈಗ ಯಾವ ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿವೆ ಮತ್ತು ಮಂಜೂರಾಗಿವೆ (ಅಥವ ಅರ್ಧಬಂರ್ಧ ಮಂಜೂರಾಗಿವೆ), ಅವುಗಳನ್ನೆಲ್ಲಾ ಬೇಗನೆ ಪ್ರಾರಂಭ ಮಾಡಬೇಕು. ಅದರಲ್ಲಿ ಕೃಷ್ಣ ಮತ್ತು ಮಲಪ್ರಭಾ—ಇವೆರಡು ಅತ್ಯಂತ ಹೆಚ್ಚಿನ ಜನರ ಲಕ್ಷ್ಯವನ್ನು ಸೆಳೆದಿವೆ. ಹೆಚ್ಚಿಗೆ ಬರಗಾಲ ಪ್ರದೇಶದಲ್ಲಿ ಹರಿಯುವಂಥ ಈ ನದಿಗಳಿಂದ ಲಕ್ಷಾಂತರ ಎಕರೆ ಭೂಮಿಗಳಿಗೆ ಉಪಕಾರವಾಗುತ್ತದೆ ಎಂಬುದನ್ನು ಸರ್ಕಾರದವರು ಈಗಾಗಲೇ ಮನಗಂಡಿದ್ದಾರೆ. ಸರ್ಕಾರದವರು ಹೆಚ್ಚಿಗೆ ದೃಷ್ಟಿ ಹರಿಸಿ, ಅಲ್ಲಿಯ ಕೆಲಸ ಹೆಚ್ಚಿನ ಪ್ರಗತಿಯಿಂದ, ವಿಳಂಬವಿಲ್ಲದ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯದ ಸೂಚನೆ ಮಾಡಬಯಸುತ್ತೇನೆ.

ಎರಡನೆಯದಾಗಿ, ಈ ಬರಗಾಲ ಪರಿಹಾರಕ್ಕಾಗಿ ಬಾವಿಗಳನ್ನು ತೋಡಿಸುವ ಕೆಲಸವನ್ನು ಎಷ್ಟೋ ರೀತಿಯಿಂದ ಪ್ರಾರಂಭ ಮಾಡಿದ್ದಾರೆ. ನಮ್ಮ ಇವತ್ತಿನ ಕಂದಾಯ ಮಂತ್ರಿಗಳು ಕೇಂದ್ರದಲ್ಲಿದ್ದಾಗ ನಮಗೆ ಕೋಟ್ಯಂತರ ರೂಪಾಯಿ ಕೊಟ್ಟು ಅನೇಕ ಬಾವಿಗಳನ್ನು ತೋಡಿಸಿದರು; ಈಗ ಮತ್ತೆ ವರ್ಷ ವರ್ಷ ಆ ಕೆಲಸ ನಡೆಯುತ್ತಾ ಇದೆ. ಆದರೆ ಇಷ್ಟಕ್ಕೇ ಪ್ರಶ್ನೆ ನಿಲ್ಲುವುದಿಲ್ಲ. ದೊಡ್ಡ ದೊಡ್ಡ ಯೋಜನೆಗಳಿಗಿಂತ ಸಣ್ಣ ಯೋಜನೆಗಳಿಗೆ ಹೆಚ್ಚಾಗಿ ಲಕ್ಷ್ಯ ಕೊಟ್ಟರೆ ಅದಕ್ಕಿಂತ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಭೂಮಿಗಳು ಸಾಗುವಳಿಯಾಗುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ನೀರಾವರಿ ಬಾವಿಗಳು ಹೆಚ್ಚು ಹೆಚ್ಚಾಗಿ ನಮ್ಮ ರಾಜ್ಯದಲ್ಲಿ ಆಗಬೇಕು. ಆ ದೃಷ್ಟಿಯಿಂದ ಸರಕಾರದವರು ಎಲ್ಲೆಲ್ಲಿ ನೀರಾವರಿ ಬಾವಿಗಳಾಗುವ ಸಂಭವವಿದೆಯೋ ಅಲ್ಲೆಲ್ಲಾ ಕೊಡಲು ಪ್ರಯತ್ನ ಮಾಡಬೇಕು. ಉದಾಹರಣೆಗೆ ರೋಣ ತಾಲ್ಲೂಕಿನೊಳಗೆ ಸುಮಾರು 2 ವರ್ಷದಲ್ಲಿ 200 ಬಾವಿಗಳು ಬೇಳ್ಳಕ್ಕೆ ಆದುವು. ಆದರೂ ಇನ್ನೂ 200 ಬಾವಿಗಳು ಆಗುವ ಸಂಭವವಿದೆ.

ಈ ದೃಷ್ಟಿಯಿಂದ ಅಲ್ಲಿ ಮತ್ತೊಂದು ಅಡಚಣೆ ಏನೆಂದರೆ ಅದು ಕಂದಾಯ ಮಂತ್ರಿಗಳಿಗೆ ಗೊತ್ತಿರಬಹುದು. ರೋಣ ತಾಲ್ಲೂಕಿನೊಳಗಿರುವ ಗಜೇಂದ್ರಗಡ ಭಾಗ ಸರಂಜಾಮು ಭಾಗವಾಗಿತ್ತು. ಸರಂಜಾಮು ಭಾಗದೊಳಗೆ ಒತ್ತಾಯದಿಂದ ಬಾಬಿ ಮಂಜೂರು ಮಾಡುವುದು ಸಾಧ್ಯವಿರಲಿಲ್ಲ. ಈಗ ಸುದೈವದಿಂದ ಇನಾಂದಾರು ಮಾಡಿದ ರಿಟ್ ಅವರಿಗೆ ವಿರುದ್ಧವಾಗಿ ಆಗಿದೆ. ಅದು ಸರ್ಕಾರಕ್ಕೆ ಅನುಕೂಲವಾಗಿದೆ. ಇದೇ ಸಮಯವನ್ನು ಬೇಗ ಉಪಯೋಗಿಸಿ ರೈತರ ಮಾಲ್ಕಿ ಹಕ್ಕನ್ನು ಹೆಚ್ಚಿಸಲಿಕ್ಕೆ ಏರ್ಪಾಡು ಮಾಡಬೇಕು. ಅಭಾವ ಪರಿಸ್ಥಿತಿ ಹೋಗಬೇಕಾದರೆ ಮೊದಲು ಭೂಮಿಯಲ್ಲಿ ಬೆಳೆ ಬೆಳೆಯುತಕ್ಕ ರೈತನಿಗೆ ಅದು ತನ್ನ ಸ್ವಂತ ಭೂಮಿ ಎಂಬ ಭಾವನೆ ಬರಬೇಕು.

5-30 P.M.

ಭೂಮಿ ತನ್ನದು ಎನ್ನುವ ಭಾವನೆ ಬಾರದಿದ್ದರೆ ರೈತ ಚೆನ್ನಾಗಿ ಕೆಲಸ ಮಾಡುವುದಿಲ್ಲ. ಇದಕ್ಕಾಗಿಯೇ ಶಕ್ಯವಿದ್ದ ಎಲ್ಲ ಇನಾಂಗಳನ್ನೂ ರದ್ದುಮಾಡಿ ಉಳುವವನೇ ಒಡೆಯನಾಗಬೇಕು ಎನ್ನುವ ಮಾತನ್ನು ಇಲ್ಲಿ ಒತ್ತಿ ಹೇಳದೆ ಇರಲಾರೆ. ಇನಾಂ ಗ್ರಾಮಗಳಲ್ಲಿ ಅನೇಕ ಪ್ರಶ್ನೆಗಳು ಹೇಗೆ ವಿಳಂಬವಾಗುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಹೋದಸಲ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ, ಹಂಚನಾಳ ಮತ್ತು ಕೆಲವು ಗ್ರಾಮಗಳಲ್ಲಿ ಇನಾಂ ರದ್ದಿಯಾತಿಯಾಯಿತು. ಅವನ್ನು ಸರಕಾರದವರು resume ಮಾಡಿದರು. resume ಮಾಡಿದ ಪ್ರಕಾರ ರೈತರ ಹೆಸರುಗಳನ್ನು ಹಚ್ಚಬೇಕೆಂದು ಪ್ರಯತ್ನ ನಡೆಯಿತು. ಆರು ತಿಂಗಳು ಆದರೂ ಹಚ್ಚಲಿಕ್ಕಾಗಿಲ್ಲ. ಇದರಲ್ಲಿ ಶ್ರೀಮಂತರ ಕೈ ಇರುತ್ತದೆ ಎನ್ನುವುದು ಗೊತ್ತು. ಬಡವರಾಗಿದ್ದರೆ ಆಶಕ್ತಿ ಇರುವುದಿಲ್ಲ. ರೈತರಿಗೆ ಆಶಕ್ತಿ ಇರುವುದಿಲ್ಲ, ಚಾಕಚಕ್ಯತೆ ಇರುವುದಿಲ್ಲ. ಶ್ರೀಮಂತರ ಹತ್ತಿರ ಎಲ್ಲ ಇರುತ್ತವೆ. ಆ ಕಾರಣದಿಂದ ರೈತರಿಗೆ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಕೊಟ್ಟಿಲ್ಲ. ಮಂತ್ರಿಗಳ ಮನಸ್ಸಿನಲ್ಲಿ ಅಪೇಕ್ಷೆ ಇದ್ದರೆ ತೀರಿತು, ಅದರಂತೆ ಯಂತ್ರಕೆಲಸ ಮಾಡಬೇಕು ಎನ್ನುವಂತೆ ಸರ್ಕಾರದ ಧೋರಣೆಯನ್ನು ಆಯಂತ್ರ ಅನುಸರಿಸಬೇಕು ಎನ್ನುವ ರೀತಿಯಲ್ಲಿ ಕೆಲಸ ಮಾಡಬೇಕು. ನಾನು ಕೂಡಲೇ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಮೊನ್ನೆ ಹೈಕೋರ್ಟಿನಲ್ಲಿದ್ದ ರಿಟ್ ಅರ್ಜಿ ಒಂದು technical ಕಾರಣಕ್ಕಾಗಿ ಸರ್ಕಾರದ ವಿರುದ್ಧವಾಗಿದೆ. ಸರ್ಕಾರದವರು ಪುನಃ ಇದರ ಪರಿಶೀಲನೆ ನಡೆಸಿದ್ದಾರೆ. ಆ ಬಗ್ಗೆ ರಿಪೋರ್ಟ್ ಇಷ್ಟು ಹೊತ್ತಿಗೆ ಬಂದಿರಬಹುದು. ದಯವಿಟ್ಟು ಅಂಥ ಪ್ರಶ್ನೆಗಳನ್ನೆಲ್ಲ ಮುಗಿಸಿ ಎಲ್ಲ ಇನಾಂ ಹಳ್ಳಿಗಳಲ್ಲಿಯೂ ರೈತರು ಆ ಭೂಮಿಯ ಮಾಲೀಕರು ಎನ್ನುವುದನ್ನು record of rights ನಲ್ಲಿ ನಮೂದಿಸಬೇಕು. ಸುಪ್ರೀಂ ಕೋರ್ಟಿಗೆ ಹೋಗುತ್ತಾರೆ, ಇನ್ನೊಂದು ಕೋರ್ಟಿಗೆ ಹೋದಾರು ಎಂದು ವಿಳಂಬ ಮಾಡದೆ, ಸರ್ಕಾರದವರು ತಮ್ಮ ಪಾಲನ ಕಾರ್ಯವನ್ನು, ಹೆಚ್ಚಿನ ರೆಡ್‌ಟೇಪಿಸಂಗೆ ಆಸ್ಪದವಿಲ್ಲದ ಹಾಗೆ ಮಾಡಿ ತೀವ್ರ ರೈತರಮಾಲ್ಕಿ ಮಾಡಬೇಕು ಎಂದು ಮೊದಲನೆಯದಾಗಿ ಹೇಳುತ್ತೇನೆ.

ಇನ್ನು ಚಿಕ್ಕ ನೀರಾವರಿಯಲ್ಲಿ ಪಂಪ್ ಸೆಟ್‌ಗಳ ಬಗ್ಗೆ ಹೇಳಬೇಕಾದರೆ ನಮ್ಮ ವ್ಯವಸಾಯ ಮಂತ್ರಿಗಳು ಪಂಪ್‌ಸೆಟ್‌ಗಳನ್ನೆಲ್ಲ ಪುಕ್ಕಟೆಯಾಗಿ ಒಂದು ವಿಧವಾದ ರೀತಿಯಲ್ಲಿ ಹಂಚಬೇಕೆಂದು ಘೋಷಣೆ ಮಾಡಿದರು. ತತ್ಪರಿಣಾಮವಾಗಿ ಏನಾಗುತ್ತಿದೆ ಎಂದರೆ ಪಂಪ್‌ಸೆಟ್ ಸಿಕ್ಕುತ್ತದೆಂದು ಒಂದು ತಾಲ್ಲೂಕಿನಿಂದ ಒಂದು ನೂರು, ಎರಡು ನೂರು, ಮೂರು ನೂರು ಅರ್ಜಿಗಳು ಬಂದಿದ್ದರೆ ಅದನ್ನು ಪಡೆಯುವ ವ್ಯವಸ್ಥೆ ಚಕ್ರವ್ಯೂಹದ ಕೋಟೆಯೊಳಗೆ ಅಭಿಮನ್ಯು ಹೋಗಿ ಹಿಂದಕ್ಕೆ ಬರುವುದು ಕಷ್ಟವಾದಂತೆ—ಬಹಳ ಸುತ್ತುವರಿ ಹಾಕಿದ ಹಾಗೆ ಇದೆ. ಪಂಪ್‌ಸೆಟ್ ಬೇಕು ಎಂದು ಒಬ್ಬ ಅರ್ಜಿಕೊಟ್ಟರೆ ತೀರಿತು, ಮತ್ತೆ ಅದರ ಉದ್ಧರಿ, ಉಸಾಬರಿ, ಬೇಡ ಎಂದು ಹೇಳುವಂತಾಗುತ್ತದೆ. ಎಷ್ಟು ಪಂಪ್‌ಸೆಟ್‌ಗಳನ್ನು ಸಾಲದ ರೂಪವಾಗಿ ಕೊಡುತ್ತಾರೆ. ಎಷ್ಟು ಪಂಪ್‌ಸೆಟ್ ಕೊಟ್ಟಿದ್ದಾರೆ, ಯಾವ ಯಾವ ಜಿಲ್ಲೆಗೆ ಎಷ್ಟು ಹಂಚಿದ್ದಾರೆ, ಎಂದು ಹೇಳಿದರೆ ನಮ್ಮ ಸರ್ಕಾರಕ್ಕೂ ನಿರಾಶೆಯಾಗಬಹುದು ಇದರಿಂದ ಪೂರ್ಣ ಪ್ರಯೋಜನವಾಗಿಲ್ಲವೆಂದು. ಪಂಪ್‌ಸೆಟ್‌ಗಳನ್ನು ಕೊಡಲು ಮಾಡಿರುವ ನಿಯಮಗಳನ್ನು ಸಡಿಲ ಮಾಡಬೇಕು, ಸಾಕಷ್ಟು ಪಂಪ್‌ಸೆಟ್‌ಗಳನ್ನು ಕೊಳ್ಳಲು ಬೇಕಾದ ಹಣವನ್ನು ಅವರು ತಮ್ಮ ಕಡೆ ಇಟ್ಟುಕೊಂಡಿದ್ದಾರೆಯೋ ಇಲ್ಲವೋ ಅದು ಅವರಿಗೇ ಗೊತ್ತು, ನನಗೆ ಗೊತ್ತಾದಂತೆ ಬೇರೆ ಬೇರೆ ಜಿಲ್ಲೆಯೊಳಗೆ executive officers ರವರಿದ್ದಾರೆ, ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಕೆಲವುಕಡೆ ಒಳ್ಳೆಯವರಿದ್ದಾರೆ, ಬಾಕಿ ಕಡೆಗಳಲ್ಲಿ ಕೆಲವರು ಬೇಕಾದಂಥ ರೀತಿಯಲ್ಲಿ ವಿಳಂಬವಾಗುವುದಕ್ಕೆ ಕಾರಣರಾಗಿದ್ದಾರೆ. ಅದಕ್ಕಾಗಿಯೇ ಜಿಲ್ಲಾವಾರು ಅಂಕೆಗಳನ್ನು ತರಿಸಿದರೆ ಪಂಪ್ ಸೆಟ್‌ಗಳ ಸಲುವಾಗಿ ಎಷ್ಟು ಅರ್ಜಿಗಳು ಬಂದವು, ಅವುಗಳಲ್ಲಿ ಎಷ್ಟು ವಿಲೇವಾರಿಯಾಗಿವೆ, ಮತ್ತು ಕಡಮೆಯಾಗಿ ವಿಲೇವಾರಿಯಾಗಿದ್ದರೆ ಏಕೆ ಆಯಿತು, ಎಲ್ಲೆಲ್ಲಿ ಪಕ್ಷಪಾತ ಮಾಡುತ್ತಾರೆ, ಎಂಬ ವಿಚಾರಗಳೆಲ್ಲ ತಿಳಿಯುತ್ತವೆ.

(ಶ್ರೀ ಎ. ಜಿ. ದೊಡ್ಡಮೇಟಿ)

ಮುಖ್ಯವಾಗಿ ನಾನು ಇಲ್ಲಿ ಹೇಳಬೇಕಾದುದು ಏನೆಂದರೆ, ಇದರಂತೆಯೇ ಟ್ರ್ಯಾಕ್ಟರ್ ಮೊದಲಾದುವುಗಳನ್ನು ಕೊಡುವ ವಿಷಯ. ಇದರಲ್ಲಿ ಬಹಳ ಅವಿಣ-ನೀಯ ವಿಳಂಬವಾಗಿದೆ. ಇವುಗಳನ್ನು ಜಾಗ್ರತೆ ಕೊಡುವುದಕ್ಕೆ ವ್ಯವಸ್ಥೆ ಮಾಡಿದರೆ ಒಳ್ಳೆಯದಾದೀತು ಎಂದು ನನಗನ್ನಿಸುತ್ತದೆ.

ವಿಶೇಷವಾಗಿ ನಾನು ಬರಗಾಲ ಪ್ರದೇಶಕ್ಕೆ ಸಂಬಂಧಪಟ್ಟ ಕೆಲವು ಮಾತುಗಳನ್ನು ಹೇಳುತ್ತೇನೆ. ಬಿಜಾಪುರ ಜಿಲ್ಲೆಯ ದಕ್ಷಿಣಭಾಗ ಮತ್ತು ಧಾರವಾಡ ಜಿಲ್ಲೆಯ ಉತ್ತರ ಭಾಗ ಈವು ಸಾಮಾನ್ಯವಾಗಿ ಹೊಂದಿಕೊಂಡಿರುತ್ತವೆ. ಇದೆಲ್ಲ ಬರಗಾಲ ಪ್ರದೇಶವೆನ್ನುವುದು ಒಪ್ಪುವಂಥ ಮಾತು. ಅದರಲ್ಲಿ ಭಿನ್ನಪ್ರಶ್ನೆಯೇ ಇಲ್ಲ. ಇಂಥಾದ ರಲ್ಲಿಸಹಿತ ಅನೇಕ ಅನಿಶ್ಚಿತ ರೀತಿಯಿಂದ ಕೆಲವು ದೌರ್ಜನ್ಯಗಳು ನಡೆಯುತ್ತವೆ. ಒಂದು ಉದಾಹರಣೆ ಹೇಳುವುದಾದರೆ ಕಂದಾಯ ಮಂತ್ರಿಗಳ ಎದುರಿಗೆ ನಡೆದದ್ದನ್ನೇ ಹೇಳುತ್ತೇನೆ. ಅದನ್ನು ಹೇಳದಿದ್ದರೆ ಆತ್ಮ ವಂಚನೆಯಾದೀತು ಎಂದು ಹೇಳುತ್ತೇನೆ. ಧಾರವಾಡ ಜಿಲ್ಲೆಯೊಳಗೆ ಬರಗಾಲ ಪ್ರಶ್ನೆಯನ್ನು ಚರ್ಚೆ ಮಾಡಿದಾಗ, ಮಾನ್ಯ ಮಂತ್ರಿಗಳ ಸಮ್ಮುಖದೊಳಗೆ ಮುಖ್ಯವಾಗಿ ಕೂಡಿದ್ದಂಥ ಆ ಸಭೆಯೊಳಗೆ ಏನಾಯಿತು ಎಂದರೆ ಯಾವ ಯಾವ ತಾಲ್ಲೂಕಿನ ಪರಿಸ್ಥಿತಿ ಏನು ಎಂದು ಚರ್ಚೆಯಾದ ಮೇಲೆ, ರೋಣ ತಾಲ್ಲೂಕಿನ ಪರಿಸ್ಥಿತಿ ಬಂತು. ಆ ಪರಿಸ್ಥಿತಿಯೊಳಗೆ ಧಾರವಾಡ ಜಿಲ್ಲೆಯ ಡೆಪ್ಯುಟಿ ಕಮೀಷನರು ಮತ್ತು ಬೆಳಗಾಂ ಡಿವಿಷನಲ್ ಕಮೀಷನರು ಹಾಜರಿದ್ದರು. ಮಂತ್ರಿಗಳು, ಚೇರ್ಮನ್ನರಿದ್ದರು. ಅಲ್ಲಿ ರೋಣ ತಾಲ್ಲೂಕಿಗೆ ಅರ್ಧ ಕಂದಾಯ ಮಾಫಿ ಕೊಡುತ್ತೇನೆಂದು ಜಿಲ್ಲಾಧಿಕಾರಿಗಳು ಹೇಳಿದರು. ಆಗ ನಾನು ಅಲ್ಲಿಯ ಆರು ಹಳ್ಳಿಗಳಲ್ಲಿ ಎರಡು ಹತ್ತೆ ವಸೂಲ್ಮಾಡುವ ಪರಿಸ್ಥಿತಿ ಇದೆ, ಕೇಳಿಕೊಳ್ಳಿ ಎಂದು ಹೇಳಿದೆ. ಡೆಪ್ಯುಟಿ ಕಮಿಷನರು ತಹಸೀಲ್ದಾರರನ್ನು ಕೇಳಿದರು, ಅವರು ಹೌದು ಎಂದರು. ಆಮೇಲೆ ಮತ್ತೆ ಡೆಪ್ಯುಟಿ ಕಮಿಷನರು ಹೇಳಿದರು, ಆ ಆರ್ಡರ್ ಹಾಗೆ ಮಾಡಿದ್ದಲ್ಲ. ಪುನಃ recommend ಮಾಡಿ ಕಳುಹಿಸಿದ್ದೇವೆ, ಇಡೀ ತಾಲ್ಲೂಕಿಗೇ ಅರ್ಧಮಾಫಿ ಆಗುತ್ತದೆ ಅಂದರು. ಈ ಯಲ್ಲ ಮಾತು ಕಂದಾಯ ಮಂತ್ರಿಗಳ ಸಮಕ್ಷಮ, ಡಿವಿಜನಲ್ ಕಮಿಷನರ ಸಮಕ್ಷಮ ಡೆಪ್ಯುಟಿ ಕಮಿಷನರು ಹೇಳುತ್ತಾರೆಂದರೆ ನಾವು ಏನು ತಿಳಿದುಕೊಂಡೆವು ಎಂದರೆ ಇಡೀ ತಾಲ್ಲೂಕಿಗೇ ಅರ್ಧ ಮಾಫಿ ಆಯಿತು ಎಂದು. ಆದರೆ ಡೆಪ್ಯುಟಿ ಕಮಿಷನರ್ ಮಾಡಿದ recommendation ಡಿವಿಜನಲ್ ಕಮಿಷನರ್ ಕಡೆಯಿಂದ turn down ಆಗಿ ಎರಡು ಹತ್ತೆ ವಸೂಲ್ಮಾಡಬೇಕು ಎಂದು ಬಂತು. ರೈತರೆಲ್ಲ ಬಗಿ ಹಿಡಿದರು. ಏನೇನೋ ತೊಂದರೆಯಾಯಿತು. ಸರ್ಕಾರಕ್ಕೆ ಅಪೀಲು ಹಾಕಿ ಕಂದಾಯ ಮಂತ್ರಿಗಳನ್ನು ಭೇಟಿ ಮಾಡಿದೆವು. Stay ಕೊಡಬಹುದು ಎನ್ನುವ ಅಭಿಪ್ರಾಯ ವ್ಯಕ್ತವಾಯಿತು. ದುರ್ದೈವ, ಅನಿಷ್ಟಕರ ಪ್ರಸಂಗ ಎಂದು ತಿಳಿಯುತ್ತೇನೆ—ಸರ್ಕಾರದ ಅಪ್ಪಣೆಯಾಯಿತು. ಕಂದಾಯ ಮಂತ್ರಿಗಳ ಸಮಕ್ಷಮದಲ್ಲ, ಡಿವಿಜನಲ್ ಕಮಿಷನರ ಸಮಕ್ಷಮದಲ್ಲ ಬಾಯಿಮಾತಿನಲ್ಲಿ ನಿಮ್ಮ ತಾಲ್ಲೂಕಿಗೆ ಅರ್ಧ ಆಯಿತು ಎಂದು ಹೇಳಿ ಹೊರಗೆ ಬಂದರು. ಆದರೆ ಕಡೆಗೆ ಹೀಗಾಯಿತು, ನಾವು ಏನು ಅರ್ಥ ಮಾಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲ. ಹೀಗೆ ಏಕೆ ಆಗುತ್ತದೆ? ಇದರ ಬಗ್ಗೆ serious ಆಗಿ ಆಲೋಚನೆ ಮಾಡಬೇಕು. ಇದು ಪ್ರಜಾ ಪ್ರಭುತ್ವ. ''ಯಥಾ ರಾಜ ತಥಾ ಪ್ರಜಾ'' ಎಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಈಗ ರಾಜ ಉಳಿದಿಲ್ಲ, ರಾಜ ನಮ್ಮ ದೇಶದಲ್ಲಿಲ್ಲ. ''ಯಥಾ ಪ್ರಜಾ ತಥಾ ಸ್ಥಿತಿ'' ಎಂದು ಯೋಚನೆ ಮಾಡಬೇಕು. ಸರ್ಕಾರದಿಂದ ಹೊರಟಂಥ ಸೂಚ್ಯ ಶಬ್ದ ಸಹಿತ ಅದು ಕಾರ್ಯಶೀಲವಾಗಬೇಕು ಎನ್ನುವ ದೃಷ್ಟಿಯಿಂದ ಸರ್ಕಾರ ನೋಡಬೇಕು ಎನ್ನುವಂಥ ಮಾತನ್ನು ಇಲ್ಲಿ ಹೇಳಿ ರೋಣ ತಾಲ್ಲೂಕಿನ ದಕ್ಷಿಣಭಾಗ, ಗದಗ್ ತಾಲ್ಲೂಕಿನ ಉತ್ತರ ಭಾಗ, ಶಿರಹಟ್ಟಿ, ಮುಂಡರಗಿ, ನರಗುಂದ ಇಲ್ಲೆಲ್ಲ ಅಭಾವ ಪರಿಸ್ಥಿತಿ ಇದೆ. ಆಕಡೆ ತಾವು ಲಕ್ಷ್ಯಕೊಡುತ್ತೀರೆಂದು ತಿಳಿಯುತ್ತೇನೆ. ಇದಕ್ಕೆ ಮುನ್ನ ನಾನು ಹೇಳಿದ ವಿಷಯಗಳ ಬಗ್ಗೆ ಸರ್ಕಾರದವರು ತೀವ್ರ ಗಮನ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ಹೇಳುತ್ತೇನೆ, ಅವತ್ತಿನ ಸಭೆಯಲ್ಲಿ ನಡೆದಂಥ ವಿಷಯ ನನ್ನ ಆಯುಷ್ಯವಿರುವ ತನಕ ಮರೆಯಲಾರೆ. ಇದನ್ನು ಕೊಡೋಣ ಎಂದು ನುಡಿದದ್ದರಿಂದ ಇಷ್ಟು ತೊಂದರೆಯಾಯಿತು. ಈ ರೀತಿ ವಚನ ಭಂಗಮಾಡಿದ್ದನ್ನು ನಾನು ಎಲ್ಲಿಯೂ ನೋಡಲಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ—ನೀವು ಬೇರೆಯವರೊಡನೆ ಮಾತನಾಡುತ್ತಿದ್ದಿರಿ. ನನ್ನ ಮುಂದೆ ಆ ವಿಷಯ ಮಾತನಾಡಲಿಲ್ಲ. ನನ್ನ ಮುಂದೆ ಚರ್ಚೆ ನಡೆದಿದ್ದರೆ ಖಂಡಿತವಾಗಿ ಕೊಡಿಸುತ್ತಿದ್ದೆನು.

ಶ್ರೀ ಎ. ಜಿ. ದೊಡ್ಡಮೇಟಿ.—ಹಾಗಾದರೆ ನನ್ನ ಬೆನ್ನು ಏಕೆ ಚಪ್ಪರಿಸಿದಿರಿ? ಇದನ್ನು ನಿಮ್ಮ ಸೆಕ್ರೆಟರಿಯವರಿಗೆ ಎಕ್ಸ್‌ಪ್ಲೇನ್ ಮಾಡಿದ್ದೇನೆ, ನಾಲ್ಕಾರು ಸಲ ನಾನು ಅವರಿಗೆ ಫೋನ್ ಮಾಡಿ

ದ್ದೇನೆ. ಈಗಿನ ಪರಿಸ್ಥಿತಿಯಲ್ಲಿ ಉಳಿದದ್ದನ್ನು ಸಸ್ಪೆನ್‌ಷನ್ ಮಾಡಬೇಕು. ಏನಾದರೂ ಮಾಡಿ ಸರಕಾರದ ಗೌರವ, ಜನತೆಯ ಗೌರವ ಉಳಿಸಬೇಕು. ಈ ವಿಷಯಕ್ಕೆ ನನಗೆ ಮಾತನಾಡಲು ಅಪ್ಪಣೆ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಸಂಜೀವನಾಥ ಐಕಳ.—ಮಾನ್ಯ ಸಭಾಧ್ಯಕ್ಷರೇ, ಈ ತನಕ ಮಾತನಾಡಿದಂಥ ಸದಸ್ಯರು ಅನಾವೃಷ್ಟಿಯಿಂದ ಈ ಪ್ರಾಂತಕ್ಕೆ ಒದಗಿರುವ ಕ್ಷಾಮದ ವಿಷಯವಾಗಿ ಮಾತನಾಡಿದರು. ಅದಕ್ಕೆ ವಿರುದ್ಧವಾದ ಪರಿಸ್ಥಿತಿಯ ಬಗ್ಗೆ ಇರುವ ವಿಷಯ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಮಳೆ ಬಾರದೆ ಅನಾವೃಷ್ಟಿಯಿಂದ ಕ್ಷಾಮ ಬರುವ ಸ್ಥಿತಿ ಇಲ್ಲ. ಆದರೆ ಅತಿವೃಷ್ಟಿಯಿಂದ ಕ್ಷಾಮ ಉಂಟಾಗಿ ತೊಂದರೆಯಾಗುತ್ತದೆ. ಕಾಲ ಕಾಲಕ್ಕೆ ಮಳೆ ಬಾರದೆ ಕಡೆಗೆ ಅಂಥ ಮಳೆ ಒಮ್ಮೆಲೆ ಬಂದು ಪ್ರವಾಹದಿಂದ ರೈತರು ಭೂಮಿಯಲ್ಲಿ ಬೆಳೆದಿರುವ ಬೆಳೆಯು ಕೊಚ್ಚಿಕೊಂಡು ಹೋಗಿ ರೈತರಿಗೆ ತುಂಬಾ ನಷ್ಟ ಉಂಟಾಗಿ ಅಭಾವ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ಉಂಟಾದುದು ಕಂಡು ಬರುತ್ತದೆ. ಇದಕ್ಕೆ ಕಾರಣವೇನು ಅಂದರೆ ಇತ್ತೀಚೆಗೆ ಉಂಟಾಗಿರುವ ಭೌಗೋಳಿಕ ಅವಾಂತರವೇ ಇದಕ್ಕೆ ಮುಖ್ಯ ಕಾರಣ, ನದಿಯಲ್ಲಿ ಹರಿಯುವ ನೀರಿನೊಂದಿಗೆ ಮಣ್ಣು ಸವೆದು ಹೋಗಿ ಉದ್ದ ಅಗಲ ನದಿಯಲ್ಲಿ ಮಣ್ಣು ನಿಂತು ಸಿಲ್ಟ್ ಡಿಪಾಜಿಟ್ ಆಗುತ್ತದೆ. ಮಳೆ ಹೆಚ್ಚಾದಾಗ್ಗೆ ಮಳೆಯ ನೀರು ನದಿಯಲ್ಲಿ ಹರಿದು ಹೋಗದೆ ದಡದಲ್ಲಿರುವ ಗದ್ದೆಗಳಲ್ಲಿ ಸೇರಿ, ನಿಂತು ಅಲ್ಲಿ ಬೆಳೆದಿರುವ ಪೈರು ಹಾಳಾಗಿ ಅಭಾವ ಪರಿಸ್ಥಿತಿ ಬರುತ್ತಿದೆ. ನದಿ ಮುಖದಲ್ಲಿರುವ ಜನ ಇದನ್ನು ವರ್ಷೇ ವರ್ಷೇ ಅನುಭವಿಸುತ್ತಿದ್ದೇವೆ. ಇಂಥ ನಷ್ಟದ ಬಗ್ಗೆ ಸರಕಾರಕ್ಕೆ ಬರೆದುಕೊಳ್ಳುವುದು, ಮನವಿ ಮಾಡುವುದು ಪದ್ಧತಿ ನಡೆದಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಕ್ಷಾಮ ಅಂದರೆ ಏನು ಗೊತ್ತಿದೆಯೇ?

ಶ್ರೀ ಕೆ. ಲಕ್ಕಪ್ಪ.—ಅವರು ಎಷ್ಟು ಸಣ್ಣಗೆ ಇದ್ದಾರೆ ಅವರನ್ನೇ ನೋಡಿದರೆ ಇದು ಗೊತ್ತಾಗುವುದಿಲ್ಲವೇ?

ಶ್ರೀ ಸಂಜೀವನಾಥ ಐಕಳ.—ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿ ಮಾಡಬೇಕಾದ ಕೆಲಸ ಅಂದರೆ ಡಿಸೀಲ್ಟಿಂಗ್ ಆದರೆ ಡೀಸಿಲ್ಟಿಂಗ್ ಆಫ್ ರಿವರ್ಸ್ ಕೆಲಸ ಮಾಡಬೇಕಾದುದು ಅಗತ್ಯ. ಈ ಸಿಲ್ಟ್ ಕೂಡುವುದರಿಂದ ಬಹಳ ಅನಾಹುತವಾಗಿದೆ.

ಇನ್ನೊಂದು ವಿಷಯ ಅಂದರೆ ಫ್ಲಡ್ ಕಂಟ್ರೋಲ್ ಮಾಡುವುದು. ಇದರ ಬಗ್ಗೆ ಆಸಕ್ತಿ ವಹಿಸಿ ಒಂದು ಯೋಜನೆ ತಯಾರಿಸುತ್ತೀರೆಂದು ನಾನು ತಿಳಿದುಕೊಳ್ಳುತ್ತೇನೆ. ಸರಕಾರ ಈ ಬಗ್ಗೆ ಕೆಲವು ಕ್ರಮ ಕೈಕೊಳ್ಳುವುದು ಅಗತ್ಯವಾಗಿದೆ. ನಮ್ಮ ಜಿಲ್ಲೆಯಲ್ಲಿ ಘಟ್ಟದಲ್ಲಿ ವ್ಯಾಲೀಜ್ ಇವೆ. ಅಂಥಾ ಸ್ಥಳದಲ್ಲಿ ಅಣೆಕಟ್ಟು ಹಾಕಿ ಮಳೆಯಿಂದ ಬರತಕ್ಕಂಥ ನೀರನ್ನು ಬೇರೆ ದಾರಿಯಲ್ಲಿ ತೆಗೆದುಕೊಂಡು ಹೋಗಲು ಅವಕಾಶ ಕಲ್ಪಿಸಬೇಕು. ಈ ರೀತಿ ಮಾಡಿದರೆ ಫ್ಲಡ್ ಕಂಟ್ರೋಲ್ ಕ್ರಮ ಸುಲಭವಾಗಿ ಕೈಕೊಳ್ಳಲು ಅನುಕೂಲವಾಗುತ್ತದೆ.

ಇನ್ನು ಮಳೆ ಬಾರದ ಸಮಯದಲ್ಲಿ, ಒಂದು ಗಾದೆಮಾತು ಹೇಳಿದಹಾಗೆ, ಸಂಕಟ ಬಂದಾಗ ವೆಂಕಟರಮಣ ಎಂದು ದೇವರನ್ನು ಪ್ರಾರ್ಥಿಸುವುದು, ದೇವರಿಗೆ ಹರಕೆ ಅರ್ಪಿಸುವುದು ಮಳೆ ಬರುವ ಹಾಗೆ ಮಾಡುವ ಒಂದು ವಾಡಿಕೆ ಕೆಲವು ಕಡೆ ಇದೆ. ಇದು ಸರಕಾರಕ್ಕೂ ಗೊತ್ತಿದೆ. "More things are wrought by prayer than by men." ಹೆಚ್ಚಿನ ಕೆಲಸಗಳು ಪ್ರಾರ್ಥನೆಯಿಂದ ಸಾಧ್ಯವಿದೆ. ಮನುಷ್ಯರು ಪ್ರಾರ್ಥನೆಯಿಂದ ಮಳೆ ತರಿಸುವುದು ಸಾಧ್ಯವಿದೆ. ಅಂಥ ಕ್ರಮ ಕೆಲವು ಕಡೆ ನಡೆದದ್ದೂ ಪ್ರಾರ್ಥನೆ ಸಲ್ಲಿಸಿದಾಗ್ಗೆ ಮಳೆ ಬಂದದ್ದೂ ಉಂಟು. ನಾನು ಈ ವಿಷಯ ಏತಕ್ಕೆ ಹೇಳುತ್ತಿದ್ದೇನೆಂದರೆ ವೈಬ್ರೇಷನ್ ಥಿಯೆರೀ (vibration of way) ಎಲ್ಲರೂ ಒಪ್ಪುತಾರೆ. ಪ್ರಾರ್ಥನೆ ಸಲ್ಲಿಸುವುದರಿಂದ ವೈಬ್ರೇಷನ್ ಹೊರಟು ಅದರ ಪರಿಣಾಮ ಮೋಡಗಳ ಮೇಲೆಯಾಗಿ ಮಳೆಯಾಗುವುದೆಂದು ಶಾಸ್ತ್ರೀಯವಾಗುವುದೆಂದು ಕಂಡುಹಿಡಿಯಬಹುದು. ಇಂಥ ಪ್ರಯತ್ನ ಅಲ್ಲಲ್ಲಿ ಮಾಡಿದರೆ ಅದು ತಪ್ಪಾಗಲಾರದು. ದೇಶದಲ್ಲಿ ಕ್ಷಾಮ ಬಂದಾಗ್ಗೆ ಜನರು ಅನೈತಿಕ ಕೃತಿಗೆ ಇಳಿಯುತ್ತಾರೆ. ಹಿಂದಕ್ಕೆ ಬಂಗಾಳ ದೇಶದಲ್ಲಿ ಕ್ಷಾಮ ಬಂದಾಗ್ಗೆ ಜನರು ಕುದುರೆ ಲದ್ದಿಯೊಳಗಿನ ಕಾಳು ಆರಿಸಿ ತಿನ್ನುವುದು, ಸತ್ತಂಥ ದನದ ಮಾಂಸ ತಿನ್ನುವುದು ನಾವು ಕೇಳಿದ್ದೇವೆ. ಇದರಿಂದ ಅನೇಕ ಸಾಂಕ್ರಾಮಿಕ ರೋಗ ಹರಡಿದ್ದು ಉದಾಹರಣೆ ನಾವು ಕೇಳಿದ್ದೇವೆ. ಕ್ಷಾಮ ಬಂದಾಗ್ಗೆ ಮಹಾ ಭಯಂಕರ ಪರಿಸ್ಥಿತಿ ಉಂಟಾಗುವುದು ಕೆಲವು ವರ್ಷಗಳ ಹಿಂದೆ ಇತ್ತು. ಇತ್ತೀಚೆಗೆ ಅನೇಕ ಪ್ರಯತ್ನದಿಂದಾಗಿ ಸರಕಾರದ ಪ್ರಯತ್ನದ ಪರಿಣಾಮವಾಗಿ ಅಂಥ ಕ್ಷಾಮದ ಭಯಂಕರ ಪರಿಸ್ಥಿತಿ ತಡೆಗಟ್ಟಲು ಸಾಧ್ಯವಾಗಿದೆ. ಅಂಥ ಭಯಂಕರ ಪರಿಸ್ಥಿತಿ ಈಗ ಇಲ್ಲ. ಈಗಾಗಲೇ ಈ ವಿಷಯ ಸುದೀರ್ಘವಾಗಿ ಚರ್ಚೆಯಾಗಿದೆ. ಒಳ್ಳೇ ಸಲಹೆ ಅನೇಕ ಸದಸ್ಯರು ಕೊಟ್ಟಿದ್ದಾರೆ. ನನಗೆ ಕಂಡುಬಂದ ಒಂದೆರಡು ವಿಷಯ ಹೇಳುತ್ತೇನೆ. ದೊಡ್ಡ ದೊಡ್ಡ ಅಣೆಕಟ್ಟು, ಕಾಲುವೆ ಸರಕಾರ ರಚಿಸಿದ್ದಾರೆ. ಆದರೆ ಅಂಥ ನೀರನ್ನು ಉಪಯೋಗಿಸಲು

(ಶ್ರೀ ಸಂಜೀವನಾಥ ಐಕಳ)

ಜನರಲ್ಲಿ ಶಕ್ತಿ ಇಲ್ಲದೆ ಅದು ದುರುಪಯೋಗವಾಗುತ್ತಿದೆ. ತುಂಗಭದ್ರಾ ಅಣೆಕಟ್ಟಿನಿಂದ ಬರುವ ನೀರನ್ನು ಉಪಯೋಗಿಸಿಕೊಳ್ಳದೆ ಅದನ್ನು ಸ್ವಲ್ಪ ದೂರ ಹೋಗಿ ಕೃಷ್ಣಾನದಿಗೆ ಬಿಡುವ ಒಂದು ಪರಿಸ್ಥಿತಿ ಇಂದು ನಮ್ಮ ಪ್ರಾಂತದಲ್ಲಿದೆ. ಆ ನೀರು ಸುಮಾರು 150 ಮೈಲುಗಳವರೆಗೆ ಹರಿದು ಬಂದರೂ ಜನರು ನೀರನ್ನು ಉಪಯೋಗಿಸದೆ ಇರುವುದರಿಂದ ಅನಾವಶ್ಯಕವಾಗಿ ನೀರನ್ನು ಕೃಷ್ಣಾ ನದಿಗೆ ಬಿಡುತ್ತಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ನಿರಾಕರಿಸಲು ಸಾಧ್ಯವಿಲ್ಲ ಎಂದು ನಾನು ಹೇಳುತ್ತೇನೆ.

ಸಸ್ಯವರ್ಗದ ಸಂರಕ್ಷಣೆ ಬಹಳ ಪ್ರಾಮುಖ್ಯವಾದುದು. ನಮ್ಮಲ್ಲಿ ಬಹಳ ವಿಶೇಷವಾಗಿ ಒಂದಲ್ಲ ಒಂದು ರೀತಿಯಲ್ಲಿ ಸಸ್ಯವರ್ಗದ ನಾಶವಾಗುತ್ತಾ ಇದೆ. ಪ್ರವಾಹದಿಂದ ಉಂಟಾಗುವ ಹಾನಿಯನ್ನು ತಪ್ಪಿಸಲಿಕ್ಕೆ ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆಗಳನ್ನು ಪರಿಶೀಲನೆ ಮಾಡಿ ಸದ್ಯದ ಅಭಾವ ಪರಿಸ್ಥಿತಿಯಲ್ಲಿ ಬಹಳ ಕಷ್ಟಕ್ಕೆ ಈಡಾಗಿರತಕ್ಕವರಿಗೆ ರಕ್ಷಣೆ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಮಾನ್ಯ ಸಭಾಪತಿಗಳೇ, ಶ್ರೀಮಾನ್ ಹುಚ್ಚ ಮಾಸ್ತಿಗೌಡರು ಈ ಮನೆಯ ಮುಂದೆ ತಂದು ಇಟ್ಟಿರುವ ಈ ನಿರ್ಣಯದ ಮೇಲೆ ಅನೇಕ ಜನ ಸ್ನೇಹಿತರು ಅವರ ಅನುಭವ ಮತ್ತು ಪರಿಸ್ಥಿತಿಗೆ ಅನುಗುಣವಾದಂತಹ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ವ್ಯವಸಾಯದ ಕಸುಬಿನ ಮೇಲೆ ಹೆಚ್ಚಿನ ಜನ ಅವಲಂಬಿಸಿದ್ದರೂ ಸಹ ಪ್ರತಿ ವರ್ಷವೂ ಅವರು ಈ ತರಹ ಯಾವುದಾದರೂ ತೊಂದರೆಯನ್ನು ಅನುಭವಿಸುತ್ತಾ ಇದ್ದಾರೆ. ಈ ಸಾರಿ ಬೆಂಗಳೂರು ಜಿಲ್ಲೆಯಲ್ಲಿ ಈ ಕಷ್ಟ ಅನುಭವಿಸಬೇಕಾಗಿ ಬಂದು ಒಂದೂವರೆ ತಿಂಗಳಿನಿಂದ ಒಂದೇ ಸಮನೆ ಮಳೆ ಬರದೆ ಕೈಬಿಟ್ಟಂತಹ ಸಂದರ್ಭದಲ್ಲಿ ದೇವರ ದಯದಿಂದ ಈಗತಾನೇ ಮಳೆ ಬಂದಿದೆ ಸ್ವಲ್ಪ ಚೇತರಿಸಿಕೊಳ್ಳುತ್ತಾ ಇದ್ದೇವೆ. ಅಧ್ಯಕ್ಷರೇ, ಈ ವ್ಯವಸಾಯ ಯೋಗ್ಯ ರೀತಿಯಲ್ಲಿ ಆಗಬೇಕೆಂದು ಹೇಳಿ ಎಲ್ಲರೂ ಹೇಳುತ್ತಾ ಇದ್ದಾರೆ, ಮೊನ್ನೆತಾನೆ ಅಮೇರಿಕಾದ ರಾಯಭಾರಿ ಚೆಸ್ಟರ್ ಬವಲ್ಸ್‌ರವರು ಬೆಂಗಳೂರು ಜಿಲ್ಲೆಯಲ್ಲಿ ಒಂದು ಕಡೆಗೆ ಬಂದಾಗ ಯಾವ ದೇಶ ಮುಂದು ವರಿಯಬೇಕಾದರೂ ಮೊದಲು ಆ ದೇಶದ ವ್ಯವಸಾಯದ ಪರಿಸ್ಥಿತಿ ಉತ್ತಮವಾದ ಸ್ಥಿತಿಯಲ್ಲಿರ ಬೇಕೆಂದು ಹೇಳಿದರು. ವ್ಯವಸಾಯ ಮತ್ತು ವಿದ್ಯಾಭ್ಯಾಸ ತದನಂತರ ಬಾಕಿ ಎಲ್ಲಾ ವಿಷಯ ಗಳು ಎಂದು ಹೇಳಿದರು. ಹಾಗೆಯೇ ನಮ್ಮ ದೇಶದಲ್ಲಿ ನಮಗೆ ಸ್ವಾತಂತ್ರ್ಯ ಬಂದ ಮೇಲೆ, ಈಗ 16 ವರ್ಷಗಳಾಯಿತು, ಎರಡು ಪಂಚವಾರ್ಷಿಕ ಯೋಜನೆಗಳು ಮುಗಿದು, ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಎರಡು ವರ್ಷಗಳು ಮುಗಿದರೂ ಸಹ ನಾವು ಇನ್ನೂ ಆಹಾರದ ವಿಷಯದಲ್ಲಿ ಪರಿಪೂರ್ಣವಾಗಿಲ್ಲ ಎಂದರೆ ಸ್ವಲ್ಪ ವ್ಯಸನ ಪಡಬೇಕಾಗಿದೆ. ಈ ವ್ಯವಸಾಯದ ಕಸುಬಿಗೆ ನಮ್ಮ ದೇಶದಲ್ಲಿ ಯಾವ ರಿಟರ್ನ್ ಬರಬೇಕೋ ಅದು ಬರುವುದಕ್ಕೆ ಸಾಧ್ಯವಿಲ್ಲ. ತಮಗೆ ಒಂದು ಸಣ್ಣ ಉದಾಹರಣೆ ಹೇಳಬೇಕಾದರೆ ಡಾಕ್ಟರುಗಳು, ಇಂಜನಿಯರಿಂಗ್ ಗ್ರಾಜ್ಯುಯೇಟುಗಳು ಮತ್ತು ಇತರ ಗ್ರಾಜುಯೇಟುಗಳಿಗೆ ಇರತಕ್ಕ ವರಮಾನ ಅಗ್ರಿಕಲ್ಚರಲ್ ಗ್ರಾಜ್ಯುಯೇಟುಗಳಿಗೆ ಇಲ್ಲ ಎಂಬುದು ಸ್ವತಃಸಿದ್ಧವಾದುದು. ಬೇರೆ ಕ್ಷೇತ್ರಗಳಿಗೆ ವ್ಯವಸಾಯವನ್ನು ಹೋಲಿಸಿ ನೋಡಿದ್ದೇ ಆದರೆ ಅಥವಾ ಹೊರ ದೇಶಗಳಲ್ಲಿ ವ್ಯವಸಾಯಕ್ಕೆ ಯಾವ ವಿಧವಾದ ಪ್ರಾಮುಖ್ಯತೆಯನ್ನು ಕೊಟ್ಟಿ ದ್ದಾರೆ ಎಂಬುದನ್ನು ನೋಡಿದ್ದೇ ಆದರೆ, ಮುಂದುವರಿದ ದೇಶಗಳು ವ್ಯವಸಾಯದ ಕ್ಷೇತ್ರದಲ್ಲಿ ಬೇಕಾದಷ್ಟು ಸಬ್ಸಿಡಿಗಳನ್ನು ಕೊಟ್ಟು ಅದನ್ನು ಒಂದು ಮೇಲ್‌ಮಟ್ಟಕ್ಕೆ ತಂದಿವೆ. ಆ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿ ಬರುವವರೆಗೂ ಈ ಒಂದು ಕಸುಬು ಸುಧಾರಿಸುತ್ತದೆ ಎಂಬ ನಂಬಿಕೆ ನನಗೆ ಹೊರಟು ಹೋಗಿದೆ. ನನಗೆ ಗೊತ್ತಿರುವ ಹಾಗೆ ಇತ್ತೀಚಿನ ದಿವಸ ವ್ಯವಸಾಯದ ಕಸುಬನ್ನು ಮಾಡಿಕೊಂಡು ಇರುವವರು ಅದನ್ನು ಬಿಟ್ಟು ನೂರಲ್ಲ ಸಾವಿರ ಗಟ್ಟಲೆ ಜನ ಬೆಂಗಳೂರಿಗೆ ಹೋಗುತ್ತಾ ಇದ್ದಾರೆ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ನೌಕರಿಗಾಗಿ ಕ್ಯೂನಲ್ಲಿ ನಿಂತಿರು ತ್ತಾರೆ. ಇದಕ್ಕೆ ಕಾರಣವೇನೆಂದರೆ ವ್ಯವಸಾಯ ಮಾಡುವಷ್ಟು ಕಷ್ಟದ ಕೆಲಸ ಬೇರೆ ಯಾವುದೂ ಇಲ್ಲ, 30 ದಿನ ಎಲ್ಲೋ ಒಂದು ಕಡೆ ಕೆಲಸ ಮಾಡಿ ಸಂಬಳ ತೆಗೆದುಕೊಳ್ಳಬಹುದು ಯಾವ ತೊಂದ ರೆಯೂ ಇಲ್ಲ ಅಷ್ಟೇ ಕೂಲಿಯನ್ನು ಕೊಟ್ಟು ವ್ಯವಸಾಯಗಾರರು ಅವರಿಂದ ಕೆಲಸ ಮಾಡಿಸಿ ಕೊಳ್ಳಲು ಸಾಧ್ಯವಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ವ್ಯವಸಾಯದಲ್ಲಿ ನಾವಂತೂ ಪೂರ್ಣವಾಗಿ ನಂಬಿಕೆ ಇರುವವನು ಶೇಕಡ 80 ಜನ ಬೇರೆ ಕ್ಷೇತ್ರಗಳಲ್ಲಿ ಯಾವ ರೀತಿ ದುಡಿಮೆ ಮಾಡುತ್ತಾರೋ ಆ ರೀತಿ ಇಲ್ಲೂ ಸಹ ದುಡಿಮೆ ಮಾಡುವವರೆಗೂ ದೇಶ ಉತ್ತಮ ಸ್ಥಿತಿಗೆ ಬರುವು ದಿಲ್ಲ ಸರ್ಕಾರದವರೇನೋ ಬೇಕಾದಷ್ಟು ಕೆಲಸ ಕಾರ್ಯಗಳನ್ನು ಮಾಡುತ್ತಾ ಇದ್ದಾರೆ. ಸಾಯಿಲ್ ಕನ್‌ಸರ್ವೇಷನ್, ಕಾಂಟೂರ್ ಬಂಡಿಂಗ್ ಇವುಗಳ ಕೆಲಸ ಜಾಗ್ರತೆಯಾಗಿ ಆಗಬೇ ಬಹಳ ಉತ್ತಮ

ವಾದ ಭೂಮಿ ಬಂಜರು ಆಗುತ್ತಾ ಇದೆ. ಆದ್ದರಿಂದ ಭೂಮಿಯನ್ನು ಸರಿಯಾದ ರೀತಿಯಲ್ಲಿ ಸಂರಕ್ಷಣೆ ಮಾಡಬೇಕು. ನಮ್ಮ ದುರ್ದೈವ ದೇಶಕ್ಕೆ ಬಹಳ ಮುಖ್ಯವಾದ ಪ್ಲಾಂಟೇಷನ್‌ಗಳು ಏನಿವೆ ಅವುಗಳು ಕ್ಷೀಣಿಸುತ್ತಾ ಹೋಗಿ ಮಳೆಯ ಅಭಾವಕ್ಕೆ ಕಾರಣವಾಗಿದೆ. ಇಷ್ಟು ಭಾಗದ ಭೂಮಿಯಲ್ಲಿ ಇಷ್ಟು ಭಾಗ ಪ್ಲಾಂಟೇಷನ್ ಇರಬೇಕೆಂದು ತಜ್ಞರು ಹೇಳಿದ್ದಾರೆ. ಅಷ್ಟು ಇವತ್ತಿನ ದಿವಸ ಇಲ್ಲ, ಕಡಿಮೆಯಾಗುತ್ತಾ ಇದೆ. ಈ ವಿಷಯಕ್ಕೆ ಇಲಾಖೆಯವರು ಎಷ್ಟು ಬೇಗ ಗಮನ ಕೊಟ್ಟರೆ ಅಷ್ಟೂ ಒಳ್ಳೆಯದು. ಹಾಗೆಯೇ ಬಯಲು ಸೀಮೆಯಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟು ಗಳು ಇಲ್ಲ ಅಲ್ಲಿರುವ ನೀರಾವರೀ ವ್ಯವಸ್ಥೆ ಎಂದರೆ ಬಾವಿಗಳು ಮಾತ್ರ ಮತ್ತು ಮೈನರ್ ಇರಿಗೇಷನ್ ಯೋಜನೆಗಳು. ಸರ್ಕಾರದವರು ತೆಗೆದುಕೊಂಡಿರುವ ಮೇಜರ್ ಪ್ರಾಜೆಕ್ಟುಗಳು ಮತ್ತು ಮೈನರ್ ಪ್ರಾಜೆಕ್ಟುಗಳು ಯಾವುವೂ ಕೂಡ ಇನ್ನು ಪೂರ್ಣವಾದ ಪ್ರತಿಫಲವನ್ನು ಕೊಡದೆ ಅವುಗಳಿಂದ ಬರಬಹುದಾದ ಅನುಕೂಲವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗದೇ ಹೋಗಿದೆ ಇವತ್ತಿನ ದಿವಸ ಆಹಾರದ ಅಭಾವದಿಂದಾಗಿ ತೊಂದರೆ ಪಡುತ್ತಾ ಇದ್ದೇವೆ. ದೊಡ್ಡ ಕಾಮಗಾರಿ ಗಳಿಗಾಗಿ ಕೋಟ್ಯಾಂತರ ರೂಪಾಯಿಗಳು ಖರ್ಚಾಗಿವೆ. ಅವಕ್ಕೆ ಖರ್ಚು ಮಾಡಿದ ಹಣದಲ್ಲಿ ಬಹುಶಃ ಹತ್ತರಲ್ಲಿ ಒಂದು ಭಾಗದ ಹಣವನ್ನು ಸಣ್ಣ ನೀರಾವರಿ ಮತ್ತು ಬಾವಿಗಳಿಗೆ ಉಪಯೋಗ ಮಾಡಿದ್ದರೆ ಮತ್ತು ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದರೆ ಇವತ್ತು ಆಹಾರ ಅಭಾವ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಯಾವ ಭಯವೂ ಇಲ್ಲದೆ ಸುಧಾರಿಸುವುದಕ್ಕೆ ಶಕ್ತಿ ಇರುತ್ತಿತ್ತು. ಅದನ್ನು ಮಾಡದೇ ಉದಾಸೀನ ಮಾಡಿದ್ದರಿಂದ ನಾವು ಈಗ ಈ ತೊಂದರೆಯನ್ನು ಅನುಭವಿಸಬೇಕಾಗಿದೆ. ಮೈಸೂರು, ಬೆಂಗಳೂರು, ಕೋಲಾರ ಮುಂತಾದ ಎಲ್ಲಾ ಜಿಲ್ಲೆಗಳಲ್ಲೂ ಈ ದಿನ ಅಭಾವ ಪರಿಸ್ಥಿತಿ ಉಂಟಾಗಿದೆ. ನಮ್ಮ ಭಾಗದಲ್ಲಂತೂ 30, 40 ಅಡಿ ಆಳದಲ್ಲಿ ನೀರು ಸಿಗದೇ ಇರುವುದರಿಂದ ಬೋರ್‌ವೆಲ್‌ಗಳನ್ನು ಹಾಕುವುದು ಅಗತ್ಯವಾಗಿದೆ ಮತ್ತು ಆ ರೀತಿ ಹಾಕುವಾಗಲೂ ಕೂಡ ಒಂದೊಂದು ಬಾವಿಗೆ ಇಷ್ಟಿಷ್ಟು ದೂರ ಇರಬೇಕೆಂದು ನಿಗದಿ ಮಾಡಬೇಕು ಇಲ್ಲದೇ ಇದ್ದರೆ ನೀರು ಯಾವ ಬಾವಿಯಲ್ಲೂ ಕೂಡ ಸಿಕ್ಕದೇ ಬೋರ್‌ವೆಲ್ ಹಾಕುವುದರ ಉದ್ದೇಶವೇ ನಿರರ್ಥಕವಾಗು ತ್ತದೆ. ಸರ್ಕಾರದವರು ಇವತ್ತಿನ ದಿವಸ ಒಂದೊಂದು ಬಾವಿಗೆ 3,000 ರೂಪಾಯಿ ಕೊಡುತ್ತೀರಿ ಕನಿಷ್ಟ ಪಕ್ಷ 10 ಸಾವಿರ ರೂಪಾಯಿಗಳಾದರೂ ಬೇಕಾಗುತ್ತದೆ. ಉಳಿದ ಹಣಕ್ಕೆ ಅವನು ಸಾಲ ಬೇರೆ ಕಡೆ ತೆಗೆದುಕೊಳ್ಳಬೇಕಾಗುತ್ತದೆ ಅದನ್ನು ಅವನು ಯಾವ ರೀತಿಯಲ್ಲಿ ವಾಪಸು ಕೊಡಬೇಕು? ಇಂಥಾ ಒಂದು ಕೆಟ್ಟ ಸ್ಥಿತಿ ಬಂದಾಗ ಅವನು ಬಹಳ ಕಷ್ಟ ಪಡುತ್ತಾನೆ. ಇವತ್ತು ನೀವು ಸಹ ಕಾರಿ ಸಂಘಗಳನ್ನು ಸ್ಥಾಪನೆ ಮಾಡಿ ಅದರ ಮೂಲಕ ರೈತರಿಗೆ ಬೇಕಾದ ಸೌಲಭ್ಯಗಳನ್ನು ಒದ ಗಿಸಬೇಕೆಂದು ಹೊರಟಿದ್ದೀರಿ, ಇದರಿಂದ ಅವರಿಗೆ ಅನುಕೂಲವಾಗಿದೆ. ಆದರೂ ಸಹ ಈಗ ಉಂಟಾ ಗಿರತಕ್ಕ ಒಂದು ಅಭಾವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸಣ್ಣ ಹಿಡುವಳಿದಾರರಿಗೆ ನೀವು ಕಂದಾಯದ ಮೇಲೆ ಯಾವ ಒಂದು ಸರ್‌ಚಾರ್ಜನ್ನು ಹಾಕಬೇಕೆಂದಿದ್ದೀರಿ ಅದನ್ನು ಎಕ್ಸೆಂಟ್ ಮಾಡಬೇಕೆಂದು ಹೇಳುತ್ತೇನೆ.

Mr. DEPUTY SPEAKER.—The House will now rise and meet again at 12—30 P.M.

The House adjourned at Six of the Clock to meet again at Thirty Minutes past Twelve of the Clock on Wednesday, the 25th September 1963.

WD 1269—GPB—900—14-12-63